# ಕರ್ನಾಟಕ ವಿಕಾಸ

KARNATAKA VIKAS

ಡಿಸೆಂಬರ್ December 2013




**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಂದ ಗದಗ ಜಿಲ್ಲೆ ಕುರ್ತಕೋಟಿ ಗ್ರಾಮದಲ್ಲಿ ಆಟದ ಮೈದಾನ, ಕುರಿದೊಡ್ಡಿ ನಿರ್ಮಾಣ ಸೌಲಭ್ಯಗಳ ಉದ್ಘಾಟನೆ**





ಸಂಜೀವಿನಿ

# ಗ್ರಾಮೀಣ ಮಹಿಳೆಯರ ಕೌಶಲ್ಯಾಭಿವೃದ್ಧಿಗಾಗಿ



ಕರ್ನಾಟಕ ವಿಕಾಸ

ಡಿಸೆಂಬರ್
December
2013

ಸಂಪುಟ: 55
Volume: 55
ಸಂಚಿಕೆ : 01
Issue : 01

# ಈ ಸಂಚಿಕೆಯೊಳಗೆ

5. ಸಚಿವಾಲಯದಿಂದ ಸಂದೇಶ

7. ಸಂಜೀವಿನಿ – ಅಭಿಯಾನ ನಿರ್ದೇಶಕರು, ರಾ.ಗ್ರಾ.ಜೀ.ಅ

14. – ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ

21. – ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ

32. – ಸ್ವಾವಲಂಬನೆಗಾಗಿ ಸಾವಿರಾರು ದಾರಿಗಳು

36. ಚಿಂತನೆ – ಪ್ರೊ॥ ಎ.ಎಚ್. ಮಾಸಾಪತಿ

41. ಲೇಖನಗಳು – ಶ್ರೀಮತಿ ಪದ್ಮಿನಿ ಅನಂತ್

44. ಪಂಚತಂತ್ರ ವರದಿ

45. ಸಕಾಲ ವರದಿ

46. ಸುತ್ತೋಲೆಗಳು



ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿಗಳು

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು
**ವೈ. ಮಹಾಂಕಾಳಪ್ಪ**

ಸಹಾಯಕ ಸಂಪಾದಕರು
**ಡಾ॥ ಎಂ.ಎಸ್.ಮಂಜುನಾಥ**
**ನಾಗರಾಜ್ ಬಿ ವಾಗಾ**

**ವಾರ್ಷಿಕ ಚಂದಾ**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ
ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ
ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು

**ಕಛೇರಿ ವಿಳಾಸ**
ಸಂಪಾದಕರು, ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ1
ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ
ಬೆಂಗಳೂರು – 560 001.
ದೂರವಾಣಿ : 080–22353857
www.rdpr.kar.nic.in
email : kvrdpr@gmail.com

**ವಿಶೇಷ ಸೂಚನೆ**
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ
ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು
ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ
ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು
# ನಿಮ್ಮ ನುಡಿ



ಮಾನ್ಯರೆ,

ನವೆಂಬರ್ 2013 ತಿಂಗಳ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸುಂದರವಾಗಿ ಮುದ್ರಣಗೊಂಡಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಪ್ತ ಕಾರ್ಯಕ್ರಮಗಳಿಗೆ ಉಪಗ್ರಹ ಆಧಾರಿತವಾಗಿ ಚಾಲನೆ ಮತ್ತು 15 ಯೋಜನೆಗಳ ಕೈಪಿಡಿ ಬಿಡುಗಡೆ ಬಗ್ಗೆ ಶ್ರೀ ಕೆ.ಆರ್.ಶಂಕರ್, ಭೋದಕರು (MGNREGA) ANSIRD ಮೈಸೂರು ಇವರ ಮುಖಪುಟ ವರದಿ ಲೇಖನವು ಬಹಳ ಉತ್ತಮವಾಗಿ ಮೂಡಿಬಂದಿದೆ. ಇವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಈ ಸಂಚಿಕೆಯಲ್ಲಿ ಸಚಿವಾಲಯದ ಸಂದೇಶವು ಸೇರಿದಂತೆ ಎಲ್ಲಾ ಲೇಖನಗಳು ತುಂಬಾ ಸಂಪದ್ಭರಿತವಾಗಿದೆ. ಈ ಮಾಸ ಪತ್ರಿಕೆ ಸಂಪಾದಕರಿಗೆ ನನ್ನ ಅನಂತ ಅನಂತ ಧನ್ಯವಾದಗಳು. ನಾಡನ್ನು ಪ್ರತಿನಿಧಿಸುವ ಪತ್ರಿಕೆಯು ಸದಾಕಾಲ ಇದೇ ರೀತಿಯಾಗಿ ಮಾಹಿತಿ ಹೊತ್ತು ತರಲಿ. ಈ ಮಾಸ ಪತ್ರಿಕೆ ಪ್ರತಿ ತಿಂಗಳು ಓದುವ ಮೂಲಕ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರು ಯೋಜನೆಯ ಅನುಷ್ಠಾನ ಮತ್ತು ಗ್ರಾಮೀಣ ಭಾಗದ ಜನರ ಸಮಸ್ಯೆಗಳ ಪರಿಹಾರದ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿ ಉತ್ತಮ ಪ್ರಯತ್ನ ನಡೆಯಲಿ ಎಂದು ಹಾರೈಸುತ್ತೇವೆ.

**ಎ. ಶ್ರೀನಿವಾಸರಾವ್,** ಬಿ.ಕಾಂ.
ಸಹಾಯಕ ನಿರ್ದೇಶಕರು,

ಗ್ರಾಮೀಣ ಉದ್ಯೋಗ, ತಾಲ್ಲೂಕು ಪಂಚಾಯತ್, ಉಡುಪಿ..ಭಾರತ ದೇಶದಲ್ಲಿ ಗ್ರಾಮಗಳು ಸಮಗ್ರವಾಗಿ ಅಭಿವೃದ್ಧಿಯಾಗಬೇಕಾಗಿದೆ. ಅದು ಮಹಾತ್ಮ ಗಾಂಧೀಜಿಯವರ ಕನಸಾಗಿತ್ತು. ಗ್ರಾಮ ಸ್ವರಾಜ್ ಯೋಜನೆಗಳು ಯಶಸ್ವಿಯಾಗಿ ಕರ್ನಾಟಕದಲ್ಲಿ ಸಾಗುತ್ತಿರುವುದು ಸಂಸತದ ಸಂಗತಿ. 'ಕರ್ನಾಟಕ ವಿಕಾಸ'ವು ಹಲವಾರು ಉಪಯುಕ್ತ ಮಾಹಿತಿ ಹಾಗೂ ಯೋಜನೆಗಳನ್ನು ಮಾಸ ಪತ್ರಿಕೆಯ ಮೂಲಕ ನೀಡಿ ಚೇತನಾಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ಯಶೋಗಾಥೆಗಳು ಸ್ಫೂರ್ತಿದಾಯಕಗಳಾಗಿವೆ. ವಾಹಿತಿ ಸುತ್ತೋಲೆ ಮುಂತಾದವುಗಳು ಪ್ರಯೋಜನಕಾರಿಗಳಾಗಿವೆ.

**ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕ ನಗರ, ಲಕ್ಷ್ಮೇಶ್ವರ, ಗದಗ– 582116.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯ ಬಗ್ಗೆ ನಮಗೆ ಹೆಮ್ಮೆ ಇದೆ. ಗ್ರಾಮೀಣಾಭಿವೃದ್ಧಿ ಬಗೆಗಿನ ಮಾಹಿತಿಗಳು ಉಪಯುಕ್ತವಾಗಿವೆ. ಜೊತೆಗೆ ಸಚಿವಾಲಯದ ಹೊಸ ಯೋಜನೆಗಳ ಮಾಹಿತಿಯು ದೊರೆಯುತ್ತದೆ. ಇಂತಹ ಅಮೂಲ್ಯ ಮಾಹಿತಿಗಳನ್ನು ಪ್ರಕಟಿಸುವ ಇಲಾಖೆ ಕಾರ್ಯ ಹಾಗೂ ಪತ್ರಿಕೆಯ ಹಿಂದಿರುವ ಬಳಗದ ಶ್ರಮ ಶ್ಲಾಘನೀಯ. ಹೀಗೆ ನಿರಂತರವಾಗಿರಲಿ ಎಂಬ ಹಾರೈಕೆ.

**ಗಿರೀಶ್ ಟಿ.ಉಟಗಿ,**
ವಾರ್ಡ್ ನಂ.08, ಮನೆ ನಂ.5/1807, ಶ್ರೀ ಸಾಯಿ ಮಂದಿರ ಹತ್ತಿರ,
ಮುಧೋಳ, ಬಾಗಲಕೋಟೆ– 587313.

## ಸಚಿವಾಲಯದಿಂದ ಸಂದೇಶ

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.



ಟಿ.ಎಂ. ವಿಜಯಭಾಸ್ಕರ್
ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಪ್ರಿಯ ಬಂಧುಗಳೇ,

### 'ಸಂಜೀವಿನಿ' – ಗ್ರಾಮೀಣ ಬಡ ಮಹಿಳೆಯರ ಸಬಲೀಕರಣಕ್ಕಾಗಿ . . . .

ಗ್ರಾಮೀಣ ಮಹಿಳೆಯರ ಸ್ವಾಲಂಬನೆಗಾಗಿ ಈ ಹಿಂದೆ ಚಾಲ್ತಿಯಲ್ಲಿದ್ದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ ಗ್ರಾಮೀಣ ಬಡ ಕುಟುಂಬದ ಹೆಣ್ಣುಮಕ್ಕಳ ಸಂಘಟಿತ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ವಸಹಾಯ ಗುಂಪುಗಳನ್ನು ರಚಿಸಿ ಆರ್ಥಿಕ ಸಹಾಯ ನೀಡಲಾಗುತ್ತಿತ್ತು. ಈ ಯೋಜನೆಯನ್ನು ಮತ್ತಷ್ಟು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಮುನ್ನಡೆಸಲು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ಪುನರ್ ರಚಿಸಿ ಅಜೀವಿಕಾ (ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ – NRLM) ಎಂಬ ಹೊಸ ನಾಮಕರಣದೊಂದಿಗೆ 2011 ರಿಂದ ರಾಷ್ಟ್ರಾದ್ಯಂತ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಕೌಶಲ್ಯಾಧಾರಿತ ತರಬೇತಿಯನ್ನು ಗ್ರಾಮೀಣ ಬಡ ಜನರಿಗೆ ನೀಡಿ ಉದ್ಯೋಗವಕಾಶಗಳನ್ನು ಕಲ್ಪಿಸಿ, ನಿರಂತರ ಮತ್ತು ಗಣನೀಯ ಆದಾಯ ದೊರಕಿಸಿಕೊಡುವುದೇ NRLM ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು **"ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (KSRLPS)"** ಸ್ಥಾಪಿಸಿ ಸದರಿ ಯೋಜನೆಯನ್ನು 'ಸಂಜೀವಿನಿ' ಎಂಬ ಹೆಸರಿನಲ್ಲಿ ರಾಜ್ಯಾದಂತ ಅನುಷ್ಠಾನಗೊಳಿಸುತ್ತಿದೆ.

ಹಾಗೆಯೇ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು **"ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (MKSP)"** ಯನ್ನು NRLM ನ ಉಪ ಯೋಜನೆಯಾಗಿ ರಚಿಸಿದೆ. ಈ ಮೂಲಕ ಗ್ರಾಮೀಣ ಮಹಿಳೆಯರಿಗೆ ಕೃಷಿ

ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಿ ಗಣನೀಯ ಆದಾಯವನ್ನು ದೊರಕಿಸಿ ಕೊಡುವುದಲ್ಲದೆ ಮಹಿಳಾ ಸಬಲೀಕರಣಗೊಳಿಸುವುದೇ ಸದರಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. **"ಅಜೀವಿಕಾ"** ವಿಶೇಷ ಯೋಜನೆಯಡಿಯಲ್ಲಿ ಗ್ರಾಮೀಣ ಬಡ ಯುವ ಜನತೆಗೆ ಉಚಿತವಾಗಿ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸುವ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಯೋಜನೆಯ ವೆಚ್ಚವನ್ನು ಕೇಂದ್ರ 75% ಮತ್ತು ರಾಜ್ಯ 25% ಅನುಪಾತದಲ್ಲಿ ಬಳಸಲಾಗುವುದು.

ರಾಜ್ಯ ಸರ್ಕಾರವು ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯನ್ನು 2013–14ನೇ ಸಾಲಿನಲ್ಲಿ ಪ್ರಾರಂಭಿಸಿ ಇದರಡಿ ಎರಡು ಲಕ್ಷ ಗ್ರಾಮೀಣ ಯುವ ಜನರಿಗೆ ಉದ್ಯೋಗಾವಕಾಶ ಹಾಗೂ ಸ್ವಯಂ ಉದ್ಯೋಗ ಕಲ್ಪಿಸಲು ಯೋಜಿಸಿದೆ.

## ಯೋಜನೆಯ ಕಾರ್ಯಚಟುವಟಿಕೆಗಳು ಪಾರದರ್ಶಕತೆಯಿಂದಿರಲಿ . .

ಗ್ರಾಮೀಣ ಬಡ ಕುಟುಂಬಗಳನ್ನು ಗುರುತಿಸಿ, ಸ್ವಸಹಾಯ ಸಂಘಗಳನ್ನಾಗಿ ಮಾರ್ಪಡಿಸುವಲ್ಲಿ ಪ್ರೇರೇಪಿಸಿ ನಂತರ ಸ್ವಸಹಾಯ ಸಂಘಗಳ ಒಕ್ಕೂಟಗಳನ್ನಾಗಿಸಿ ಉತ್ಪಾದನಾ ಸಂಸ್ಥೆಗಳನ್ನಾಗಿ ಸಜ್ಜುಗೊಳಿಸಬೇಕಾಗಿರುವು ದರಿಂದ ಇಲಾಖೆ ವತಿಯಿಂದ ಈಗಾಗಲೇ ಕೃಷಿಕಾ ಮಹಿಳಾ ಸಶಕ್ತೀಕರಣ, ರಾಜೀವ ಗಾಂಧಿ ಚೈತನ್ಯ ಯೋಜನೆ, ಸಂಜೀವಿನಿ – ಜೀವನೋಪಾಯ ಅಭಿಯಾನ ಮತ್ತು ಕೌಶಲ್ಯಾಭಿವೃದ್ಧಿ ಕುರಿತು ಕೈಪಿಡಿಗಳನ್ನು ಬಿಡುಗಡೆ ಮಾಡಲಾಗಿದೆ. ಅಷ್ಟೆ ಅಲ್ಲದೆ ಸ್ವಸಹಾಯ ಸಂಘಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಸೌಲಭ್ಯಗಳನ್ನೊದಗಿಸಿ ಮಾರುಕಟ್ಟೆ ಸೇವೆಗಳನ್ನು ಸಮರ್ಪಕವಾಗಿ ಹಾಗೂ ಪಾರದರ್ಶಕವಾಗಿ ನಿರ್ವಹಿಸುವುದು ಸಹ ಯೋಜನೆಯಲ್ಲಿ ತೊಡಗಿಸಿ ಕೊಂಡಿರುವ ನಮ್ಮೆಲ್ಲಾ ಅಧಿಕಾರಿ ಸಿಬ್ಬಂದಿಗಳ ಗುರುತರ ಜವಾಬ್ದಾರಿ.

ಆದ್ದರಿಂದ ಇಂತಹ ಗ್ರಾಮಾಭಿವೃದ್ಧಿ ಯೋಜನೆಗಳ ಯಶಸ್ಸಿಗಾಗಿ ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕಾರಾದಿಯಾಗಿ ಪರಸ್ಪರ ಸಹಕಾರ ಮತ್ತು ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಿದಲ್ಲಿ ಮಹಿಳಾ ಸಶಕ್ತೀಕರಣದತ್ತ ನಾವು ದೃಢ ಹೆಜ್ಜೆ ಇಡಲು ಸಾಧ್ಯವಾಗುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ.

(ಟಿ.ಎಂ. ವಿಜಯ ಭಾಸ್ಕರ್)

# ಸಂಜೀವಿನಿ

## ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ

**"ಬಂದಿದೆ ಬಂದಿದೆ ಸಂಜೀವಿನಿ**
**ಬಡವರ ಬದುಕಿನ ಸಂಜೀವಿನಿ**
**ದುಡಿಮೆಯ ಬದುಕಿಗೆ ಸಂಜೀವಿನಿ**
**ಕನ್ನಡ ನಾಡಿನ ಸಂಜೀವಿನಿ"**

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತನ್ನ ಪ್ರಮುಖ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಆಜೀವಿಕಾ) ಯೋಜನೆ ಮೂಲಕ ಪುನರ್ ರಚನೆ ಮಾಡಿದೆ. ಗ್ರಾಮೀಣ ಬಡತನದ ನಿವಾರಣೆ ಈ ಅಭಿಯಾನದ ಮುಖ್ಯ ಗುರಿಯಾಗಿದೆ, ಗ್ರಾಮೀಣ ಪ್ರದೇಶದ ಬಡ ಹಾಗೂ ಕಡುಬಡ ಕುಟುಂಬಗಳ ಮಹಿಳೆಯರನ್ನು ಸ್ವ-ಸಹಾಯ ಗುಂಪುಗಳ ಮೂಲಕ ಸಂಪರ್ಕಿಸಿ ಅವರ ಜೀವನೋಪಾಯ ಚಟುವಟಿಕೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕದಲ್ಲಿ ಯೋಜನೆಯನ್ನು "ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ" ಎಂದು ಹೆಸರಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್ಆರ್ಎಲ್ಪಿಎಸ್) ಎಂಬ ನೋಂದಾಯಿತ ಸಂಸ್ಥೆಯ ಮೂಲಕ 'ಸಂಜೀವಿನಿ' ಅನುಷ್ಠಾನಗೊಳ್ಳುತ್ತಿದೆ.

> **ಯೋಜನೆಯಡಿ ಸವಲತ್ತುಗಳನ್ನು ಪಡೆಯಲು ನೋಂದಾವಣೆಯ ಅಗತ್ಯವಿರುವುದಿಲ್ಲ. ಸ್ವಸಹಾಯ ಸಂಘದ ಸದಸ್ಯರಾಗುವುದರ ಮೂಲಕ ಯೋಜನೆಯಡಿ ಸೌಲಭ್ಯ ಪಡೆಯಬಹುದಾಗಿರುತ್ತದೆ.**

## ಸ್ವಸಹಾಯ ಆಂದೋಲನದ ಪ್ರಸಕ್ತ ಸ್ಥಿತಿ:

ಕಳೆದ ಎರಡು ದಶಕಗಳಿಂದ ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಸಂಘಗಳ ರಚನೆಯ ಮೂಲಕ ಬಡತನದ ನಿವಾರಣೆಯ ಪ್ರಯತ್ನಗಳು ದೊಡ್ಡ ಪ್ರಮಾಣದಲ್ಲಿ ನಡೆದಿದೆ. ಗ್ರಾಮೀಣ ಭಾಗದ ಮಹಿಳೆಯರು ಸ್ವ-ಸಹಾಯ ಗುಂಪಿನ ಮೂಲಕ ಆರ್ಥಿಕ ಸಬಲೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ದಾಪುಗಾಲಿಡುತ್ತಿದ್ದಾರೆ. ಆದರೆ ಬೃಹತ್ ಪ್ರಮಾಣದಲ್ಲಿ ಸಂಘಟಿತಗೊಳ್ಳುತ್ತಿರುವ ಈ ಗುಂಪುಗಳಿಗೆ ಆರ್ಥಿಕ ಸಬಲೀಕರಣಕ್ಕೆ ಪೂರಕವಾದ ಬೆಂಬಲ ವ್ಯವಸ್ಥೆಯನ್ನು ಒದಗಿಸುವಲ್ಲಿ ಪೂರ್ಣ ಪ್ರಮಾಣದಲ್ಲಿ ಯಶಸ್ಸನ್ನು ಪಡೆಯಲು ಸಾದ್ಯವಾಗಿಲ್ಲ.

ಸ್ವಸಹಾಯ ಗುಂಪುಗಳಿಗೆ ಅಗತ್ಯವಿರುವ ವಿವಿಧ ಹಂತಗಳ ತರಬೇತಿಗಳು, ಕೌಶಲ್ಯಾಭಿವೃದ್ಧಿ ಚಟುವಟಿಕೆಗಳು, ಬ್ಯಾಂಕ್ ಲಿಂಕೇಜ್ ಒದಗಿಸುವ ಕಾಯಕವನ್ನು ಸುವ್ಯವಸ್ಥಿತವಾಗಿ ನಡೆಸಲು ಸಾಧ್ಯವಾಗಿಲ್ಲ. ಅನುಸರಣಾ ಚಟುವಟಿಕೆಗಳನ್ನು

**ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಬೆಂಗಳೂರು.**

ಪರಿಣಾಮಕಾರಿಯಾಗಿ ಕೈಗೊಳ್ಳುವಲ್ಲಿ ವಿಫಲರಾಗಿದ್ದೇವೆ. ಸ್ವಸಹಾಯ ಗುಂಪುಗಳ ಮಹಿಳೆಯರು ವಿವಿಧ ಇಲಾಖೆಗಳು, ಸರಕಾರೇತರ ಸಂಸ್ಥೆಗಳು ಹಾಗೂ ಹಣಕಾಸು ಸಂಸ್ಥೆಗಳ ನಡುವೆ ಹರಿದು ಹಂಚಿಹೋಗಿದ್ದಾರೆ. ಹೀಗಾಗಿ ಉದ್ದೇಶಿತ ಗುರಿಯನ್ನು ಮುಟ್ಟುವಲ್ಲಿ ಸಾಕಷ್ಟು ತೊಡಕುಗಳನ್ನು ಎದುರಿಸುತ್ತಿವೆ.

ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಅಸಮಾನತೆ, ತಾರತಮ್ಯ ಮತ್ತು ಕೀಳರಿಮೆಯ ಸಮಸ್ಯೆಗಳಿಂದ ಬಳಲುತ್ತಿರುವ ಸಮಾಜದ ಕೆಳಸ್ತರದ ಸಮುದಾಯಗಳಿಗೆ ಸೇರಿದ ಮಹಿಳೆಯರನ್ನು ಸ್ವಸಹಾಯ ಸಂಘಟನೆಯ ವ್ಯಾಪ್ತಿಗೆ ತರುವ ನಿಟ್ಟಿನಲ್ಲಿ ಸಾಕಷ್ಟು ಕೊರತೆಗಳಿವೆ. ಹೀಗಾಗಿ ಬಡತನ ನಿವಾರಣೆಯನ್ನು ಮಾಡಲು ಸರಕಾರ ನಡೆಸುತ್ತಿರುವ ಪ್ರಯತ್ನಗಳಿಗೆ ಸಂಪೂರ್ಣವಾದ ಪ್ರತಿಫಲ ಸಿಗುತ್ತಿಲ್ಲ.

ಸ್ವಸಹಾಯ ಗುಂಪುಗಳು ತಮಗೆ ಸಿಗುತ್ತಿರುವ ಬೆಂಬಲ ಹಾಗೂ ಪ್ರೇರಣೆಯ ಮೂಲಕ ಕಿರು ಉದ್ಯಮಗಳನ್ನು ಆರಂಭಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅವರು ಉದ್ಯಮದ ಯಶಸ್ವಿಗೆ ಅಗತ್ಯವಾಗಿರುವ ವ್ಯವಹಾರ ಜ್ಞಾನ ಮತ್ತು ಮಾರುಕಟ್ಟೆಯ ಬೆಂಬಲದ ಕೊರತೆಯನ್ನು ಅನುಭವಿಸುತ್ತಿದ್ದಾರೆ. ಹೀಗಾಗಿ ಇವರಲ್ಲಿ ಬಹುತೇಕ ಮಂದಿ ಉದ್ಯಮಶೀಲತೆಯನ್ನು ಮುಂದುವರೆಸಲು ಹಿಂಜರಿಯುತ್ತಿದ್ದಾರೆ. ಇದು ಸ್ವಸಹಾಯ ಗುಂಪುಗಳ ಸಬಲೀಕರಣಕ್ಕೆ ದೊಡ್ಡ ಸವಾಲಾಗಿದೆ ಎಂದರೆ ತಪ್ಪಾಗಲಾರದು.

ಇತ್ತೀಚಿನ ಬಳವಣಿಗೆಯಲ್ಲಿ ಸ್ವಸಹಾಯ ಸಂಘಗಳು ತಮ್ಮ ಮೂಲ ಧ್ಯೇಯಗಳಾದ ಪಂಚ ಸೂತ್ರಗಳನ್ನು ಕೈಬಿಡುತ್ತಿದ್ದಾರೆ. ತಕ್ಷಣದ ಆರ್ಥಿಕ ಲಾಭದ ಕಡೆಗೆ ವಾಲುತ್ತಿರುವುದು ಕಳವಳಕಾರಿಯಾದ ಬೆಳವಣಿಗೆಯಾಗಿದೆ. ಈ ಕಾರಣಕ್ಕಾಗಿ ಬೇರೆ ಬೇರೆ ಗುಂಪುಗಳಿಗೆ ಏಕ ಕಾಲದಲ್ಲಿ ಸದಸ್ಯತ್ವ ಪಡೆಯಬೇಕಾದ ಆಮಿಷಗಳಿಗೆ ಅವರು ಬಲಿಯಾಗುತ್ತಿದ್ದಾರೆ. ಈ ಬೆಳವಣಿಗೆ ಸ್ವಸಹಾಯ ಆಂದೋಲನಕ್ಕೆ ಒಂದು ದೊಡ್ಡ ಹಿನ್ನಡೆ ಎಂದರೆ ತಪ್ಪಲ್ಲ.

ಭಾರತದಲ್ಲಿ ಸ್ವಸಹಾಯ ಗುಂಪುಗಳು ಪ್ರಸಕ್ತ ವಾಸ್ತವ ಸ್ಥಿತಿಯ ಕುರಿತು ಅಧ್ಯಯನ ಮಾಡಿದ ಸಮಿತಿಯ ವರದಿಯು ಈ ಕೆಳಕಂಡ ಕೆಲವು ಪ್ರಮುಖ ಅಂಶಗಳ ಕುರಿತು ಬೆಳಕು ಚೆಲ್ಲಿದೆ.

- ಮೂಲತಃ ಸ್ವಸಹಾಯ ಗುಂಪುಗಳ ಸದಸ್ಯರು ತಮ್ಮ ಬಡತನದ ಸಂಕಷ್ಟದಿಂದ ಹೊರಬರಲು ಸಂಘಟನೆಯಿಂದ ಸಾಧ್ಯಯಿದೆ ಎಂಬ ನಂಬಿಕೆಯಿಂದ ಸಂಘಟನೆಯಲ್ಲಿ ಭಾಗಿಗಳಾಗುತ್ತಾರೆ.
- ತಮ್ಮ ಆಂತರಿಕ ಉಳಿತಾಯ, ಆಂತರಿಕ ಸಾಲ ಮತ್ತು ಸರ್ಕಾರದಿಂದ ಸಿಗುವ ಸುತ್ತುನಿಧಿಯ ಚೌಕಟ್ಟಿಗೆ ಅವರು ಸೀಮಿತರಾಗಿರುತ್ತಾರೆ.
- ಅವರಿಗೆ ಹೊಸ ಆದಾಯೊತ್ಪನ್ನ ಚಟುವಟಿಕೆಗಳ ಸಾಧ್ಯತೆಗಳ ಕುರಿತು ಮಾಹಿತಿ ಹಾಗೂ ತರಬೇತಿಯ ಕೊರತೆಯಿರುತ್ತದೆ
- ಸಕಾಲದಲ್ಲಿ ಅವರಿಗೆ ಆರ್ಥಿಕ/ಸಾಲ ಸೌಲಭ್ಯವು ಪೂರ್ಣ ಪ್ರಮಾಣದಲ್ಲಿ ದೊರಕುತ್ತಿಲ್ಲ
- ಮಾರುಕಟ್ಟೆ ಬೆಂಬಲ, ಮಾರ್ಗದರ್ಶನ ಮತ್ತು ಸೂಕ್ತ ಅನುಸರಣಾ ವ್ಯವಸ್ಥೆಯ ಕೊರತೆ ಕಂಡುಬರುತ್ತಿದೆ.

## ಸಮಸ್ಯೆಗೆ ಪರಿಹಾರ:

ಈ ಎಲ್ಲಾ ಸವಾಲುಗಳಿಗೆ ಉತ್ತರವಾಗಿ ಎನ್‌ಆರ್‌ಎಲ್‌ಎಂ ಯೋಜನೆ ರೂಪುಗೊಂಡಿದೆ. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತನ್ನ ಪ್ರಮುಖ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಒಂದಾಗಿದ್ದ ಎಸ್‌ಜಿಎಸ್‌ವೈಯನ್ನು "ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ" (ಆಜೀವಿಕಾ) ಸ್ಥಾಪನೆಯ ಮೂಲಕ ಪುನರ್ ರಚನೆ ಮಾಡಿದೆ. ಭಾರತದ ಎಲ್ಲಾ ರಾಜ್ಯ ರಾಜ್ಯಗಳಲ್ಲೂ ಇದು ಜಾರಿಗೆ ಬಂದಿದೆ.

## ಅಭಿಯಾನದ ವಿವರ:

1. ಈ ಯೋಜನೆ / ಕಾರ್ಯಕ್ರಮದ ಫಲಾನುಭವಿಗಳು: ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಪ್ರದೇಶದ ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರು, ಪ.ಜಾತಿ, ಪ.ಪಂಗಡ, ವಿಕಲಚೇತನರು, ಭೂರಹಿತರು, ಮಹಿಳಾ ಲೈಂಗಿಕ ವೃತ್ತಿ ನಿರತರು, ವಲಸೆ ನಿರತ ಕೂಲಿ ಕಾರ್ಮಿಕರು ಹಾಗೂ ಇತರರು.

2. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸ್ವಸಹಾಯ ಸಂಘಗಳ ಮೂಲಕ ಸಂಘಟಿಸಲಾಗುತ್ತದೆ, ಅವರಿಗೆ ಪಂಚ ಸೂತ್ರಗಳ (ನಿರಂತರ ಸಭೆ, ನಿರಂತರ ಉಳಿತಾಯ, ನಿರಂತರ ಆಂತರಿಕ ಸಾಲ, ನಿರಂತರ ಮರುಪಾವತಿ, ಲೆಕ್ಕಪತ್ರ ನಿರ್ವಹಣೆ) ಬಗ್ಗೆ ತರಬೇತಿ ನೀಡಿ. ಅದನ್ನು ಅನುಸರಿಸಲು ಪ್ರೇರಣೆ ಮತ್ತು ಬೆಂಬಲವನ್ನು ನೀಡಲಾಗುತ್ತದೆ.

3. ಇದುವರೆಗೂ ಸ್ವಸಹಾಯ ಸಂಘದಲ್ಲಿ ಸೇರ್ಪಡೆಯಾಗದೇ ಇರುವ ಅಸಂಘಟಿತ ಮಹಿಳೆಯರನ್ನು ಒಟ್ಟು ಸೇರಿಸಿ ಹೊಸತಾದ ಸ್ವಸಹಾಯ ಸಂಘ ರಚಿಸಿ ಅವರಿಗೆ ಪಂಚಸೂತ್ರಗಳ ಅಭ್ಯಾಸ ಮಾಡಿಸಲಾಗುತ್ತದೆ.

4. ಈ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದ ಎಲ್ಲಾ ಬಡ ಮಹಿಳೆಯರನ್ನು ಸ್ವಸಹಾಯ ಸಂಘಗಳಲ್ಲಿ ಒಗ್ಗೂಡಿಸಿದ ನಂತರ ವಿವಿಧ ಹಂತಗಳಲ್ಲಿ ಒಕ್ಕೂಟ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತದೆ.

5. ಹಣಕಾಸು ಸೇರ್ಪಡೆ: ಸ್ವಸಹಾಯ ಗುಂಪುಗಳಿಗೆ ಬ್ಯಾಂಕಿನ ಸಂಪರ್ಕ ಕಲ್ಪಿಸಲಾಗುತ್ತದೆ. ಆರ್ಥಿಕ ಸಾಕ್ಷರತೆ ಮತ್ತು ಬ್ಯಾಂಕಿಂಗ್‌ನಿಂದ ಹಿಡಿದು ಬ್ಯಾಂಕೇತರ ಚಟುವಟಿಕೆಗಳವರೆಗೆ ಮಾಹಿತಿ ನೀಡಿ ಅದರ ಸದುಪಯೋಗ ಪಡೆಯುವಂತೆ ಮಾರ್ಗದರ್ಶನ ನೀಡಲಾಗುತ್ತದೆ.

6. ಆರ್ಥಿಕ ಸೇರ್ಪಡೆ ಮತ್ತು ಜೀವನೋಪಾಯ ಉತ್ತೇಜನ: ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳನ್ನು ಆಧರಿಸಿದ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳ ಬಗ್ಗೆ ಸೂಕ್ತ ಕೌಶಲ್ಯ ತರಬೇತಿ ನೀಡಿ ಸ್ವ ಉದ್ಯೋಗ ಕಲ್ಪಿಸಲು ಸಹಾಯ ಮಾಡುವುದು.

7. ಸ್ವಸಹಾಯ ಸಂಘದ ಮಹಿಳೆಯನ್ನು ಅವಲಂಬಿಸಿರುವ ಆಕೆಯ ಕುಟುಂಬದ ಸದಸ್ಯರಿಗೆ ವೃತ್ತಿ ಕೌಶಲ್ಯ ನೀಡಿ ಉದ್ಯೋಗ ಕಲ್ಪಿಸುವುದು.

## ಅಭಿಯಾನದ ಧ್ಯೇಯ/ಗುರಿ:

"ಲಾಭಯುತ ಆದಾಯವನ್ನು ಒದಗಿಸುವುದರ ಮೂಲಕ ಬಡತನದ ತೀವ್ರತೆಯನ್ನು ಕಡಿಮೆಗೊಳಿಸುವುದು ಮತ್ತು ಸಮುದಾಯ ಸಂಸ್ಥೆಗಳ ಮೂಲಕ ಸ್ವ-ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದರಿಂದಾಗಿ ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸಮರ್ಥನೀಯವಾದ ಅಭಿವೃದ್ಧಿಯನ್ನು ಕಾಣುವುದು" ಅಭಿಯಾನದ ಧ್ಯೇಯವಾಗಿದೆ.

ತಳಮಟ್ಟದಲ್ಲಿ ಬಡಜನರ ಸಂಸ್ಥೆಗಳನ್ನು (ಸ್ವಸಹಾಯ ಸಂಘ, ಒಕ್ಕೂಟ) ಸ್ಥಾಪಿಸುವ ಮೂಲಕ ಗ್ರಾಮೀಣ ಬಡ ಕುಟುಂಬಗಳಿಗೆ ಸ್ವ ಉದ್ಯೋಗದ ಅವಕಾಶ ಕಲ್ಪಿಸುವುದು. ಅವರಿಗೆ ವೃತ್ತಿ ಕೌಶಲ್ಯವನ್ನು ನೀಡಿ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವುದು. ಆ ಮೂಲಕ ಜೀವನ ಯೋಗ್ಯ ಸಂಪಾದನೆ ದೊರಕುವಂತೆ ಮಾಡುವುದು ಯೋಜನೆಯ ಗುರಿಯಾಗಿದೆ.

## ಯೋಜನೆ ಅನುಷ್ಠಾನದ ಕಾರ್ಯತಂತ್ರ:

ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಕಾರ್ಯತಂತ್ರವನ್ನು ರೂಪಿಸಲಾಗಿದೆ.

### ಯೋಜನೆ/ಕಾರ್ಯಕ್ರಮಕ್ಕೆ ನೋಂದಾವಣೆ ಮಾಡಿಕೊಳ್ಳುವ ಕ್ರಮ:

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿನ ಸವಲತ್ತುಗಳನ್ನು ಪಡೆಯಲು ಯಾವುದೇ ನೋಂದಾವಣೆ ಮಾಡಿಕೊಳ್ಳುವ ಅಗತ್ಯವಿರುವುದಿಲ್ಲ. ಸ್ವಸಹಾಯ ಸಂಘದ ಸದಸ್ಯೆಯಾಗುವ ಮೂಲಕ ಹಾಗೂ ನಂತರ ಒಕ್ಕೂಟದ ಸದಸ್ಯರಾಗುವ ಮೂಲಕ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ.

### ತೀವ್ರ ಕಾರ್ಯಾಚರಣೆ (Intensive) ಹಾಗೂ ಸಾಮಾನ್ಯ ಕಾರ್ಯಾಚರಣೆಯ (Non Intensive) ತಾಲ್ಲೂಕು:

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯಗಳಲ್ಲಿ ತೀವ್ರ ಕಾರ್ಯಾಚರಣೆ ಹಾಗೂ ಸಾಮಾನ್ಯ ಕಾರ್ಯಾಚರಣೆಯ ತಾಲ್ಲೂಕುಗಳನ್ನಾಗಿ ಗುರುತಿಸಲಾಗುತ್ತದೆ. ಈ ತೀವ್ರ ಕಾರ್ಯಾಚರಣೆ ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಿಬ್ಬಂದಿಗಳ ನೇಮಕಾತಿಯನ್ನು ಮಾಡಲಾಗುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿ 5 ಜಿಲ್ಲೆ ಮತ್ತು 20 ತಾಲ್ಲೂಕುಗಳನ್ನು ತೀವ್ರ ಕಾರ್ಯಾಚರಣೆ ತಾಲ್ಲೂಕು ಎಂದೂ ಹಾಗೂ ಉಳಿದಂತೆ 30 ಜಿಲ್ಲೆಗಳ 156 ತಾಲ್ಲೂಕುಗಳನ್ನು ಸಾಮಾನ್ಯ ಕಾರ್ಯಾಚರಣೆಯ ತಾಲ್ಲೂಕುಗಳೆಂದು ಆಯ್ಕೆಮಾಡಲಾಗಿವೆ. ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಅವುಗಳೆಂದರೆ, ಉತ್ತರ ಕನ್ನಡ ಜಿಲ್ಲೆ (ಅಂಕೋಲ, ಶಿರಸಿ, ಕುಮಟಾ, ಯಲ್ಲಾಪುರ), ಗದಗ ಜಿಲ್ಲೆ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), ಕೊಪ್ಪಳ ಜಿಲ್ಲೆ (ಕುಷ್ಟಗಿ, ಕೊಪ್ಪಳ, ಯಲಬುರ್ಗ), ಮೈಸೂರು ಜಿಲ್ಲೆ (ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ. ನರಸೀಪುರ ಹಾಗೂ ತುಮಕೂರು ಜಿಲ್ಲೆಗಳಾಗಿವೆ (ಪಾವಗಡ, ಸಿಎನ್‌ಹಳ್ಳಿ, ಮಧುಗಿರಿ, ಶಿರಾ).

### ಸಾಮಾಜಿಕ ಕ್ರೋಢಿಕರಣ

ಸಾಮಾಜಿಕ ಕ್ರೋಢಿಕರಣವು ಅಭಿಯಾನದ ಪ್ರಥಮ ಹಂತವಾಗಿದೆ. ಇದರ ಮುಖ್ಯ ಉದ್ದೇಶವೇನೆಂದರೆ ಸ್ವಸಹಾಯ ಗುಂಪುಗಳ ರಚನೆ ಮಾಡುವುದು. ಅಲ್ಲದೆ ಈಗಾಗಲೇ ಅಸ್ಥಿತ್ವದಲ್ಲಿರುವ ಸ್ವಸಹಾಯ ಗುಂಪುಗಳ ಸಬಲೀಕರಣಗೊಳಿಸುವುದಾಗಿದೆ.

### ಸಂಪನ್ಮೂಲ ತಾಲ್ಲೂಕು ಕಾರ್ಯತಂತ್ರ: (Resource Block Strategy)

ಸಮುದಾಯ ಸಂಪನ್ಮೂಲ ವ್ಯಕ್ತಿ(ಸಿಆರ್‌ಪಿ)ಗಳನ್ನು ಗುರುತಿಸುವುದು ಸಂಪನ್ಮೂಲ ತಾಲ್ಲೂಕಿನ ಕಾರ್ಯತಂತ್ರವಾಗಿದೆ. ಇವರು ಸ್ವಸಹಾಯ ಗುಂಪಿನ ಸದಸ್ಯರಾಗಿದ್ದು, ಬಡತನ ರೇಖೆಯಿಂದ ಮೇಲೆ ಬಂದಂತಹವರಾಗಿರಬೇಕು. ಗುಂಪಿನ ತತ್ವಗಳನ್ನು ಪಾಲಿಸುವಂತವರಾಗಿರಬೇಕು. ಇವರು ಬಡವ್ಯಕ್ತಿಗಳಿಗೆ ಮಾರ್ಗದರ್ಶಕ ಮತ್ತು ಮಾದರಿಯಾಗಿರಬೇಕು. ಇವರು ಸಾಮಾಜಿಕ ಸೇರ್ಪಡೆ ಹಾಗೂ ಸಾಮರ್ಥ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಜವಾಬ್ದಾರರಾಗಿರಬೇಕು.

### ಸಮಗ್ರತೆಯ ವಿಧಾನ (Saturation approach)

ರಾಜ್ಯ ಅಭಿಯಾನವು ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಸ್ವಸಹಾಯ ಗುಂಪುಗಳ ರಚನೆ, ಬಲವರ್ಧನೆ ಹಾಗೂ ವಿವಿಧ ಸೌಲಭ್ಯ ನೀಡುವಲ್ಲಿ ಹೆಚ್ಚಿನ ಪ್ರಾಶಸ್ತ್ಯ ನೀಡಲು ಉದ್ದೇಶಿಸಿದೆ. ಗ್ರಾಮೀಣ ಭಾಗದ ಶೇ.100 ಬಡಜನರನ್ನು ಈ ಅಭಿಯಾನದಡಿ ತರಲು ಯೋಜಿಸಿದೆ. ಈ ನಿಟ್ಟಿನಲ್ಲಿ ಎಲ್ಲಾ ಬಡಕುಟುಂಬಗಳಲ್ಲಿ

ಕನಿಷ್ಠ ಒಬ್ಬರಾದರೂ ಗುಂಪಿನ ಸದಸ್ಯತ್ವವನ್ನು ಪಡೆಯಬೇಕೆಂಬ ಕಾರ್ಯತಂತ್ರವನ್ನು ಹಮ್ಮಿಕೊಳ್ಳುತ್ತಿದೆ.

## ಬಡಜನರಿಗಾಗಿ ರಚಿಸಲ್ಪಟ್ಟ ಸಂಸ್ಥೆ/ಒಕ್ಕೂಟ

ಗ್ರಾಮೀಣ ಪ್ರದೇಶದ ಬಡಜನರ ಸರ್ವತೋಮುಖ ಅಭಿವೃದ್ಧಿಗಾಗಿ ಗ್ರಾಮ/ಗ್ರಾಮಪಂಚಾಯತಿ ಮಟ್ಟದಲ್ಲಿ ಸ್ವಸಹಾಯ ಸಂಘಗಳ ಒಕ್ಕೂಟಗಳನ್ನು ರಚಿಸಲಾಗುತ್ತದೆ. ಈ ತಾಲ್ಲೂಕು ಒಕ್ಕೂಟಗಳ ಮೂಲಕ ಜಿಲ್ಲಾ ಮಟ್ಟದಿಂದ ತಾಲ್ಲೂಕು-ಗ್ರಾಮಪಂಚಾಯತಿ-ಗ್ರಾಮ ಮಟ್ಟದ ಒಕ್ಕೂಟ-ಸ್ವಸಹಾಯ ಸಂಘಗಳಿಗೆ ನೆರವು ಹರಿದು ಬರುತ್ತದೆ.

## ಬಡ್ಡಿ ಸಹಾಯಧನ ಸವಲತ್ತು

ಗ್ರಾಮೀಣ ಬಡಜನರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಬೇಕಾಗಿರುತ್ತದೆ. ಇವರಿಗೆ ಆರ್ಥಿಕವಾಗಿ ಹೊರೆಯಾಗದಂತೆ ವಿವಿಧೋದ್ಧೇಶಗಳಿಗೆ ಸಾಲದ ಅಗತ್ಯವಿರುತ್ತದೆ. ಈ ನಿಟ್ಟಿನಲಿ ಕೇಂದ್ರ ಸರ್ಕಾರವು ಸಾಲ ನೀಡಿಕೆಯನ್ನು ಸುಧಾರಿಸಿದೆ. ಯೋಜನೆಯ ವ್ಯಾಪ್ತಿಗೆ ಬರುವ ಮಹಿಳಾ ಸ್ವಸಹಾಯ ಸಂಘಗಳಿಗೆ ಬ್ಯಾಂಕುಗಳು ಶೇಕಡ 7 ರಷ್ಟು ಬಡ್ಡಿದರದಲ್ಲಿ 3 ಲಕ್ಷದವರೆಗೆ ಸಾಲ ನೀಡುತ್ತದೆ. ಬಡ್ಡಿ ಸಹಾಯಧನದ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 75:25ರ ಅನುಪಾತದಲ್ಲಿ ಭರಿಸುತ್ತವೆ. ಇದಲ್ಲದೆ ಕೇಂದ್ರ ಸರ್ಕಾರ ದೇಶಾದ್ಯಾಂತ ಗುರುತಿಸಿದ 150 ಜಿಲ್ಲೆಗಳಲ್ಲಿ (ಕರ್ನಾಟಕ ರಾಜ್ಯಕ್ಕೆ 4 ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದೆ) ಮರುಪಾವತಿ ಮಾಡಿದ ಸ್ವಸಹಾಯ ಸಂಘಗಳಿಗೆ ಶೇಕಡ 3 ರಷ್ಟು ಬಡ್ಡಿ ಸಹಾಯಧನವನ್ನು ನೀಡಲಾಗುವುದು. ಇದರಿಂದಾಗಿ ಸ್ವಸಹಾಯ ಸಂಘಗಳು ಕೇವಲ 4 ರಷ್ಟು ಬಡ್ಡಿ ದರವನ್ನು ಭರಿಸಿದಂತಾಗುತ್ತದೆ. ಕೇಂದ್ರ ಸರ್ಕಾರವೇ ಈ ನಾಲ್ಕು ಜಿಲ್ಲೆಗಳ ಪೂರ್ಣ ಬಡ್ಡಿ ಸಹಾಯಧನವನ್ನು ಭರಿಸುತ್ತದೆ.

## ವೃತ್ತಿ ಕೌಶಲ್ಯ ಮತ್ತು ಉದ್ಯೋಗ ಕಲ್ಪಿಸುವಿಕೆ (Skill & Placement)

ಈ ಕಾರ್ಯತಂತ್ರದಡಿ ಗ್ರಾಮೀಣ ಭಾಗದ ಯುವಜನರನ್ನು ಗುರುತಿಸಿ ಅವರಿಗೆ ಸೂಕ್ತ ಕೌಶಲ್ಯ ತರಬೇತಿ ನೀಡಲಾಗುತ್ತದೆ. ನಂತರ ಉದ್ಯೋಗವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ಕಾಗಿ ಅಗತ್ಯ ಮೂಲ ಸೌಕರ್ಯ ಹೊಂದಿರುವ ತರಬೇತಿ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲಾಗುತ್ತದೆ, ಅದೇ ರೀತಿ Employment & Training Department ಮತ್ತು RUDSETI/ RSETIಗಳ ಸಹಕಾರದೊಂದಿಗೆ ಈ ಕಾರ್ಯವನ್ನು ಅನುಷ್ಠಾನಗೊಳಿಸಲು ಯೋಜಿಸಿದೆ.

## ಹಣಕಾಸಿನ ಮೂಲಗಳು:

ಈ ಯೋಜನೆಯು ಕೇಂದ್ರ ಸರಕಾರದ ಮುಂಚೂಣಿ ಕಾರ್ಯಕ್ರಮವಾಗಿದೆ. ಯೋಜನೆಗೆ ಅಗತ್ಯವಿರುವ ಶೇ.75 ಅನುದಾನವನ್ನು ಕೇಂದ್ರ ಸರಕಾರವೇ ಭರಿಸುತ್ತದೆ. ಉಳಿದ ಶೇ 25 ಭಾಗವನ್ನು ರಾಜ್ಯ ಸರಕಾರವು ಭರಿಸಲಿದೆ. ಒಟ್ಟು ಆಯವ್ಯಯದಲ್ಲಿ ಯೋಜನೆಯ ವಿವಿಧ ಚಟುವಟಿಕೆಗಳಿಗೆ ಅಂದಾಜು ಮೊತ್ತವನ್ನು ನಿಗದಿಪಡಿಸಿ ಕಾದಿರಿಸಲಾಗಿದೆ.

## ಅನುದಾನದ ಬಳಕೆಯಲ್ಲಿ ಪಾರದರ್ಶಕತೆ:

ಯೋಜನೆಗೆ ಮೀಸಲಿರಿಸಿದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನವು ಸದ್ಬಳಕೆಯಾಗಬೇಕು. ಈ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಬಡತನದ ತೀವ್ರತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನಾಧಾರ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಹಂತದಲ್ಲಿ ಯೋಜನೆಯನ್ನು ರೂಪಿಸಿ, ಅನುಷ್ಠಾನಗೊಳಿಸುವುದು, ನಂತರದಲ್ಲಿ ಮೇಲ್ವಿಚಾರಣೆ ಮತ್ತು ಅನುಸರಣೆಯ ಚಟುವಟಿಕೆಗಳ

ಮೂಲಕ ಜನರ ಸಹಭಾಗಿತ್ವವನ್ನು ಖಾತರಿಪಡಿಸಲು ವಿಶೇಷ ಗಮನ ನೀಡಲಾಗಿದೆ. ರಾಜ್ಯ ಮಟ್ಟದಿಂದ ಹಿಡಿದು ಗ್ರಾಮ ಮಟ್ಟದವರೆಗೂ ಅನುದಾನದ ಬಳಕೆ ವಿಷಯದಲ್ಲಿ ಪಾರದರ್ಶಕತೆಯನ್ನು ಕಾಪಾಡಲು ಬೇಕಾಗಿರುವ ಅಗತ್ಯ ಕ್ರಮಗಳನ್ನು ಯೋಜನೆಯು ಹೊಂದಿದೆ

## ಮಾರ್ಗದರ್ಶಿ ಸಮಿತಿ:

ರಾಜ್ಯ ಮಟ್ಟದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಮಾರ್ಗದರ್ಶಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಯೋಜನೆಯ ಅನುಷ್ಠಾನಕ್ಕೆ ಸಂಬಂದಿಸಿ ಕೆಎಸ್ಆರ್ಎಲ್‌ಪಿಎಸ್‌ಗೆ ಸೂಕ್ತ ಮಾರ್ಗದರ್ಶನ ನೀಡುತ್ತದೆ. ಜೊತೆಗೆ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಸಂಬಂದಿಸಿದ ಸಮಿತಿಯನ್ನು ಸಹ ರಚಿಸಲಾಗಿದೆ. ಈ ಸಮಿತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.

## ಯೋಜನೆಯ ಅನುಷ್ಠಾನ ಹಂತದ ಜವಾಬ್ದಾರಿಗಳ ನಿರ್ವಹಣೆ ಮತ್ತು ಸಾಂಸ್ಥಿಕ ವ್ಯವಸ್ಥೆ:

ರಾಜ್ಯದಲ್ಲಿ ಈ ಯೋಜನೆಯನ್ನು ಸಂಜೀವಿನಿ ಶೀರ್ಷಿಕೆಯಡಿಯಲ್ಲಿ ಕಾರ್ಯಗತಗೊಳಿಸಲು "ಕರ್ನಾಟಕ ರಾಜ್ಯ ಗ್ರಾಮೀಣ ಜೀವನಾಧಾರ ಸಂವರ್ದನಾ ಸಂಸ್ಥೆ" ಯನ್ನು ರಾಜ್ಯ ಸರ್ಕಾರವು ಸ್ಥಾಪಿಸಿದೆ. ರಾಜ್ಯದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ಸನ್ಮಾನ್ಯ ಸಚಿವರು ಮತ್ತು ಪ್ರಧಾನ ಕಾರ್ಯದರ್ಶಿಗಳ ಮಾರ್ಗದರ್ಶನದಲ್ಲಿ ಸಂಜೀವಿನಿಯ ಎಲ್ಲಾ ಚಟುವಟಿಕೆಗಳು ಅನುಷ್ಠಾನ ಗೊಳ್ಳುತ್ತವೆ. ರಾಜ್ಯ ಮಟ್ಟದಿಂದ ಹಿಡಿದು ಗ್ರಾಮ ಮಟ್ಟದವರೆಗೆ ಸದೃಢವಾದ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಲಾಗಿದೆ.

## ಸಾಂಸ್ಥಿಕ ವ್ಯವಸ್ಥೆ – ಆಡಳಿತಾತ್ಮಕ ಹುದ್ದೆಗಳು

### 1 ರಾಜ್ಯ ಮಟ್ಟ: ಸಂಜೀವಿನಿ– ರಾಜ್ಯ ಘಟಕ

1. **ಅಭಿಯಾನ ನಿರ್ದೇಶಕರು**
2. **ಅಪರ ಅಭಿಯಾನ ನಿರ್ದೇಶಕರು**
3. **ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು**
   - ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ
   - ಸಮುದಾಯ ಅಭಿವೃದ್ಧಿ ಮತ್ತು ಸಂವಹನ
   - ಜೀವನೋಪಾಯ (ಕೃಷಿ ಹಾಗೂ ಕೃಷಿಯೇತರ)
   - ಉದ್ಯೋಗ
   - ಹಣಕಾಸು ಸೇರ್ಪಡೆ
   - ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನ
   - ಹಣಕಾಸು
4. **ಸಹಾಯಕ ವ್ಯವಸ್ಥಾಪಕರು**
   - ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ
   - ಸಾಮಾಜಿಕ ಸೇರ್ಪಡೆ
   - ಜೀವನೋಪಾಯ (ಕೃಷಿ ಹಾಗೂ ಕೃಷಿಯೇತರ)
   - ಉದ್ಯೋಗ
   - ಮೇಲ್ವಿಚಾರಣೆ ಮತ್ತು ಮೌಲಮಾಪನ
   - ಮಾನವ ಸಂಪನ್ಮೂಲ ಅಭಿವೃದ್ಧಿ

### 2 ಜಿಲ್ಲಾ ಮಟ್ಟ: ಸಂಜೀವಿನಿ ಜಿಲ್ಲಾ ಘಟಕ

**ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು**

- ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ
- ಸಮುದಾಯ ಆಬಿವೃದ್ಧಿ ಮತ್ತು ಸಂವಹನ
- ಜೀವನೋಪಾಯ
- ಹಣಕಾಸು ಸೇರ್ಪಡೆ
- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

## 3 ತಾಲ್ಲೂಕು ಮಟ್ಟ: ಸಂಜೀವಿನಿ ತಾಲ್ಲುಕು ಘಟಕ

**ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು**

- ಕ್ಲಸ್ಟರ್ ಮೇಲ್ವಿಚಾರಕರು
- ಎನ್.ಆರ್.ಎಲ್.ಎಂ ಪ್ರೇರಕರುಗಳು
- ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಬ್ಯಾಂಕು ಮಿತ್ರ, ಉದ್ಯೋಗ ಮಿತ್ರ, ಜೀವನಾಧಾರ, ಕೃಷಿ, ಲೆಕ್ಕಪತ್ರ ನಿರ್ವಹಣೆ ಸಂಪನ್ಮೂಲ ವ್ಯಕ್ತಿಗಳು.

## ಯೋಜನೆಯ ಅನುಷ್ಠಾನದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ:

ಸ್ಥಳೀಯ ಸರ್ಕಾರವಾಗಿರುವ ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳು 'ಸಂಜೀವಿನಿ' ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಅಗತ್ಯವಿದೆ. ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಯೋಜನೆಯ ಅರ್ಹ ಫಲಾನುಭವಿಗಳನ್ನು ಗುರುತಿಸಬೇಕಿದೆ. ಹೀಗಾಗಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಸಂಪೂರ್ಣ ಭಾಗವಹಿಸುವಿಕೆಯ ಮೂಲಕ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ವಿಶೇಷ ಗಮನವನ್ನು ನೀಡಲಾಗಿದೆ. ವಿವಿಧ ಹಂತಗಳ ಯೋಜನಾ ಸಿಬ್ಬಂದಿಗಳು ಪಂಚಾಯತಿ ರಾಜ್‌ಸಂಸ್ಥೆಗಳ ಸಹಕಾರ ಪಡೆದು ಸಂಜೀವಿನಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಾರೆ. ಇದರೊಂದಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಹಂತಗಳ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗದ ಬೆಂಬಲವನ್ನು ಯೋಜನೆಯ ಅನುಷ್ಟಾನದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲ ನಿರ್ಧರಿಸಲಾಗಿದೆ.

## ಜನರ ಸಹಭಾಗಿತ್ವ:

ಯೋಜನೆಯ ಅನುಷ್ಠಾನದ ಪ್ರತಿಯೊಂದು ಹಂತದಲ್ಲೂ ಜನರ ಸಹಭಾಗಿತ್ವವನ್ನು ಖಾತರಿ ಪಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ.

ಯೋಜನೆಯ ಅನುಷ್ಠಾನಕ್ಕೆ ಬೆಂಬಲ ನೀಡಲು ಹಾಗೂ ಪೂರಕ ವಾತಾವರಣವನ್ನು ಸೃಷ್ಟಿಸಲು ರಾಜ್ಯ, ಜಿಲ್ಲೆ, ಹಾಗೂ ತಾಲ್ಲೂಕು ಮಟ್ಟದಲ್ಲಿ ಜನ ಪ್ರತಿನಿಧಿಗಳು, ಅಧಿಕಾರಿ ವರ್ಗ, ವಾಣಿಜ್ಯ/ಕೈಗಾರಿಕೋದ್ಯಮಿಗಳು, ಸಮುದಾಯ ಸಂಘಟನೆಗಳು ಮತ್ತು ಮುತ್ಸದ್ದಿಗಳನ್ನು ಒಳಗೊಂಡ ಸಮಿತಿಗಳನ್ನು ರಚಿಸಲಾಗುತ್ತಿದೆ. ಪಂಚಾಯತ್ ರಾಜ್ ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಯನ್ನು ಜಾರಿಗೊಳಿಸಲು ಗಮನ ನೀಡಲಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಬಡವರನ್ನು ಗುರುತಿಸಲು, ಜನ ಸಹಭಾಗಿತ್ವದ ಪದ್ದತಿಯನ್ನು ಅನುಸರಿಸುವ ನಿರ್ಧಾರವನ್ನು 'ಸಂಜೀವಿನಿ'ಯು ಮಾಡಿದೆ. ಈ ಪದ್ಧತಿಯಲ್ಲಿ ತಮ್ಮ ತಮ್ಮ ಗ್ರಾಮಗಳಲ್ಲಿರುವ ಕುಟುಂಬಗಳನ್ನು ಸ್ಥಿತಿವಂತರು, ಮಧ್ಯಮ ವರ್ಗದವರು, ಬಡವರು ಮತ್ತು ಕಡು ಬಡವರು ಎಂಬ ವರ್ಗೀಕರಣವನ್ನು ಜನ ಸಮುದಾಯವೇ ನಿರ್ಧರಿಸಲಿದೆ. ಹೀಗೆ ನಿರ್ಧರಿಸಲ್ಪಟ್ಟ ಪಟ್ಟಿಯನ್ನು ಗ್ರಾಮ ಸಭೆಯ ಮುಂದೆ ಇಡಲಾಗುತ್ತವೆ. ಚರ್ಚೆ ಮತ್ತು ವಿಶ್ಲೇಷಣೆಯ ನಂತರ ಅನುಮೋದನೆ ಪಡೆಯಲಾಗುತ್ತದೆ. ಈ ಪ್ರಯತ್ನ ಸರಕಾರದ ವಿವಿಧ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಹೊಸ ದಾರಿಯನ್ನು ತೋರಿಸಲಿದೆ.

ಒಟ್ಟಾರೆಯಾಗಿ **'ಸಂಜೀವಿನಿ'**ಯ ಪ್ರಯತ್ನವು ಕರ್ನಾಟಕದ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗುಣಾತ್ಮಕವಾಗಿ ಬದಲಾಯಿಸುವಲ್ಲಿ ಯಶಸ್ವಿಯಾಗಲಿದೆ ಎನ್ನುವ ನಂಬಿಕೆಯನ್ನು ರಾಜ್ಯ ಸರಕಾರವು ಹೊಂದಿದೆ. ಈ ನಂಬಿಕೆಯನ್ನು ವಾಸ್ತವಗೊಳಿಸಲು ನಾವೆಲ್ಲರೂ ಕೈ ಜೋಡಿಸೋಣ.

# ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ
## (ಎಂಕೆಎಸ್‌ಪಿ)

### ಯೋಜನೆಯ ಹಿನ್ನೆಲೆ ಮತ್ತು ಮಹತ್ವ:

ಕೃಷಿ ಅವಲಂಬಿತ ಗ್ರಾಮೀಣ ಮಹಿಳೆಯರ ಪ್ರಸ್ತುತ ಸ್ಥಿತಿಯಲ್ಲಿ ಸುಧಾರಣೆ ತರಲು ಮತ್ತು ಕೃಷಿ ಚಟುವಟಿಕೆಗಳಲ್ಲಿ ಅವಕಾಶಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಭಾರತ ಸರ್ಕಾರವು ಮಹಿಳಾ ಕಿಸಾನ್ ಸಶಕ್ತೀಕರಣ ಯೋಜನೆ(ಎಂಕೆಎಸ್‌ಪಿ)ಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಉಪ ಘಟಕವಾಗಿ ಘೋಷಿಸಿದೆ.

### ಈ ಯೋಜನೆಯ ಉದ್ದೇಶಗಳು ಈ ಕೆಳಗಿನಂತಿವೆ:

- ಗ್ರಾಮೀಣ ಭಾಗದ ಮಹಿಳೆಯರ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ಸೃಜಿಸುವುದು ಮತ್ತು ಬಲಪಡಿಸುವುದು
- ವ್ಯವಸ್ಥಿತ ಹೂಡಿಕೆಗಳ ಮೂಲಕ ಕೃಷಿ ಚಟುವಟಿಕೆಯಲ್ಲಿ ಭಾಗವಹಿಸುವಿಕೆಯನ್ನು ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು
- ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಸಬಲೀಕರಣ ಮಾಡುವುದು

**ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಸಬಲೀಕರಣ ಗೊಳಿಸುವುದೇ ಈ ಯೋಜನೆಯ ಪ್ರಮುಖ ಉದ್ದೇಶ**

ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಭಾಗದ ರೈತ ಮಹಿಳೆಯರ ಸ್ವಸಹಾಯ ಗುಂಪುಗಳನ್ನು ರಚಿಸಲು ಹೆಚ್ಚಿನ ಗಮನ ನೀಡುತ್ತದೆ. ಅಲ್ಲದೆ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡಿ ಸಾಮರ್ಥ್ಯ ಅಭಿವೃದ್ಧಿಪಡಿಸಲು ನೆರವು ನೀಡಲಿದೆ.

### ಯೋಜನೆಯ ಫಲಾನುಭವಿಗಳು:

ಕಡುಬಡವ ಹಾಗೂ ದುರ್ಬಲ ವರ್ಗದ ಮಹಿಳೆಯರು ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಭೂರಹಿತರು ಮತ್ತು ಪುರಾತನ ಬುಡಕಟ್ಟು ಜನಾಂಗದವರನ್ನು ಗುರಿಯಾಗಿಟ್ಟುಕೊಂಡು ಯೋಜನೆಯನ್ನು ರೂಪಿಸಲಾಗಿದೆ.

### ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಕಾಲಾವದಿಯನ್ನು ನಿಗದಿಪಡಿಸಿದೆ:

**ಕಾಲಾವದಿ** :ಈ ಯೋಜನೆಯ ಒಟ್ಟು 3 ವರ್ಷಗಳ ಅವಧಿಯಲ್ಲಿ ಯೋಜನೆಯ ಗುರಿಯನ್ನು ಸಾಧಿಸಲು ಕಾರ್ಯತಂತ್ರವನ್ನು ರೂಪಿಸಲಾಗಿದೆ.

### ಕಾರ್ಯತಂತ್ರ :

- ಸ್ಥಳಿಯವಾಗಿ ಲಭ್ಯವಿರುವ ಸಂಪನ್ಮೂಲಗಳು, ಜ್ಞಾನ ಮತ್ತು ರೈತ ಕೇಂದ್ರಿತ ಪರಿಸರಸ್ನೇಹಿ ತಂತ್ರ ಜ್ಞಾನವನ್ನು ಬಳಸಿಕೊಳ್ಳುವುದು.

- ಸಮುದಾಯ ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ಸಮನ್ವಯದೊಂದಿಗೆ ಸಂಘಟಿತ ಕ್ರಮ (ಉದಾ: ಸ್ವಸಹಾಯ ಗುಂಪುಗಳ ಒಕ್ಕೂಟ, ಸರ್ಕಾರೇತರ ಸಂಸ್ಥೆ, ರೈತರ ಗುಂಪು ಇತ್ಯಾದಿ)
- ಸುಸ್ಥಿರ ಪ್ರಮಾಣದಲ್ಲಿ ಜೀವನೋಪಾಯ ಚಟುವಟಿಕೆಯನ್ನು ನಡೆಸುವ ನಿಟ್ಟಿನಲ್ಲಿ ಅಗತ್ಯವಿರುವ ಕೌಶಲ್ಯದ ತಳಪಾಯವನ್ನು ಅಭಿವೃದ್ಧಿಪಡಿಸುವುದು.
- ಕಡುಬಡವ ಹಾಗೂ ದುರ್ಬಲ ವರ್ಗದ ಮಹಿಳೆಯರು ಅಂದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಭೂರಹಿತರು ಮತ್ತು ಪುರಾತನ ಬುಡಕಟ್ಟು ಜನಾಂಗದವರನ್ನು ಗುರಿಯಾಗಿಟ್ಟುಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸುವುದು.
- ಗುರಿ ಅದಾರಿತ ಗುಂಪುಗಳನ್ನು ಆಯ್ಕೆ ಮಾಡುವಾಗ ಮಹಿಳಾ ನೇತೃತ್ವದ ಕುಟುಂಬಗಳು (ಒಂಟಿ ಮಹಿಳೆಯರು, ವಿಧವೆಯರು), ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಬಡ ಕುಟುಂಬಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.



## ನಿರ್ದಿಷ್ಟ ಪಡಿಸಲಾದ ಅಂತಿಮ ಗುರಿಗಳು :

- ಕೃಷಿಯಲ್ಲಿ ತೊಡಗಿರುವ ಮಹಿಳೆಯರ ನಿವ್ವಳ ಆದಾಯದಲ್ಲಿ ಹೆಚ್ಚಳ
- ಕೃಷಿಯಲ್ಲಿ ತೊಡಗಿರುವ ಮಹಿಳೆಯರು ಮತ್ತು ಅವರ ಕುಟುಂಬಕ್ಕೆ ಆಹಾರ ಮತ್ತು ಪೌಷ್ಠಿಕಾಂಶ ಭದ್ರತೆಯನ್ನು ಒದಗಿಸುವಲ್ಲಿ ಸುಧಾರಣೆ
- ಉತ್ಪಾದನಾ ಭೂಮಿ, ತರಬೇತಿ, ಸಾಲಸೌಲಭ್ಯ, ತಂತ್ರಜ್ಞಾನ ಮತ್ತು ಮಾಹಿತಿಯ ಬೆಂಬಲದೊಂದಿಗೆ ಕೃಷಿವಲಯದಲ್ಲಿ ಮಹಿಳೆಯರ ಹೆಚ್ಚಿನ ಪ್ರವೇಶವನ್ನು ಸಾಧಿಸುವುದು.
- ಲಿಂಗ ಸ್ನೇಹಿ ಸಾಧನ ಮತ್ತು ಉಪಕರಣಗಳ ಬಳಕೆಯ ಮೂಲಕ ಮಹಿಳೆಯರ ದೈಹಿಕ ಶ್ರಮವನ್ನು ಕೃಷಿಯಲ್ಲಿ ಕಡಿಮೆ ಮಡುವುದು.
- ಮಹಿಳೆಯರ ಕೃಷಿ ಉತ್ಪನ್ನಗಳಿಗೆ ಸುಧಾರಿತ ಮಾರುಕಟ್ಟೆ ಪ್ರವೇಶದ ವ್ಯವಸ್ಥೆ ಕಲ್ಪಿಸುವುದು.
- ಕೃಷಿ ಆಧರಿತ ನಿರಂತರ ಜೀವನೋಪಾಯಕ್ಕಾಗಿ ಮಣ್ಣಿನ ಆರೋಗ್ಯ ಮತ್ತು ಫಲವತ್ತತೆಯ ಹೆಚ್ಚಳ
- ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಕೌಶಲ್ಯ ಮತ್ತು ಕಾರ್ಯನಿರ್ವಹಣೆಯಲ್ಲಿ ಸುಧಾರಣೆ
- ಕೃಷಿಯಲ್ಲಿ ಮಹಿಳೆಯರ ಹೆಚ್ಚಿನ ತೊಡಗುವಿಕೆ ಯಿಂದ ಕೃಷಿ ಮತ್ತು ಆಹಾರ ಉತ್ಪಾದನಾ ವಲಯದ ಸುಧಾರಣೆ
- ಕೃಷಿ ಸಂಬಂದಿಸಿದ ನೀತಿ ನಿರೂಪಣೆಯಲ್ಲಿ ಕೃಷಿಯಲ್ಲಿ ತೊಡಗಿರುವ ಮಹಿಳೆಯರ ಗುಂಪುಗಳು ಆಸಕ್ತಿದಾಯಕವಾಗಿ ಭಾಗವಹಿಸು ವಂತೆ ಮಾಡುವುದು.

## ಕರ್ನಾಟಕದಲ್ಲಿ ಯೋಜನೆಯ ಸದ್ಯದ ಪರಿಸ್ಥಿತಿ

ಈ ಯೋಜನೆಯನ್ನು ಯೋಜನಾ ಅನುಷ್ಠಾನ ಸಂಸ್ಥೆಯ ಮೂಲಕ ರಾಜ್ಯದಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಮೊದಲಿಗೆ ಮೆ: ಗ್ರೀನ್ ಫೌಂಡೇಷನ್ ಸಂಸ್ಥೆಯ ವತಿಯಿಂದ ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಈಗಾಗಲೇ ಕೇಂದ್ರ ಸರ್ಕಾರವು ಒಟ್ಟು ರೂ.6.25 ಕೋಟಿಗಳ ಅನುಮೋದನೆ ನೀಡಿದ್ದು, ಪ್ರಥಮ ಕಂತಿನ ಅನುದಾನ ರೂ.1.17 ಕೋಟಿ (ಶೇ.25 ರಷ್ಟು) ಗಳನ್ನು ಬಿಡುಗಡೆಗೊಳಿಸಿದೆ. ಇದಕ್ಕನು ಗುಣವಾಗಿ ರಾಜ್ಯ ಸರ್ಕಾರ ತನ್ನ ಪಾಲಿನ ಅನುದಾನ ರೂ.0.39 ಕೋಟಿಗಳನ್ನು ಬಿಡುಗಡೆಗೊಳಿಸಿದೆ. ಅದೇ ರೀತಿ ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್ ಫೌಂಡೇಷನ್(ಐಡಿಎಫ್) ಸಂಸ್ಥೆಗೆ ತುಮಕೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಎಂಕೆಎಸ್‌ಪಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ಮಂಜೂರಾತಿ ನೀಡಿದೆ. ಸದರಿ ಸಂಸ್ಥೆಗೆ ಯೋಜನೆ ಅನುಷ್ಠಾನಗೊಳಿಸಲು ಪ್ರಥಮ ಕಂತಿನ ಅನುದಾನದ ಬಿಡುಗಡೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

## ಇಚ್ಛಾಶಕ್ತಿ ಮತ್ತು ನಿಲುವು:

ಗ್ರಾಮೀಣ ಭಾಗದ ಮಹಿಳೆಯರ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಯನ್ನು ಹೆಚ್ಚಿಸುವುದು ಹಾಗೂ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡಿ ಈ ಮೂಲಕ ಕೃಷಿ ಚಟುವಟಿಕೆಯಲ್ಲಿ ಮಹಿಳೆಯರ ಸಬಲೀಕರಣ ಮಾಡುವುದಕ್ಕೆ ಯೋಜನೆಯ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

## ಯೋಜನೆಯ ಮಹತ್ವ:

- ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಸುಸ್ಥಿರ ಕೃಷಿ ಜೀವನೋಪಾಯದ ಅವಕಾಶಗಳನ್ನು ಹೆಚ್ಚಿಸುತ್ತದೆ.
- ಉತ್ಪಾದಕತೆ ಹೆಚ್ಚುವ ರೀತಿಯಲ್ಲಿ ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಯನ್ನು ಹೆಚ್ಚಿಸುತ್ತದೆ.
- ಕುಟುಂಬ ಹಾಗೂ ಸಮುದಾಯ ಮಟ್ಟದಲ್ಲಿ ಆಹಾರ ಲಭ್ಯತೆ ಮತ್ತು ಭದ್ರತೆಯನ್ನು ಖಚಿತಪಡಿಸುತ್ತದೆ.
- ಜೀವ ವೈವಿಧ್ಯತೆಯ ಉತ್ತಮ ನಿರ್ವಹಣೆಗಾಗಿ ಕೃಷಿಯಲ್ಲಿ ಮಹಿಳೆಯರ ನಿರ್ವಹಣಾ ಸಾಮರ್ಥವನ್ನು ವೃದ್ಧಿಸುತ್ತದೆ.
- ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ಮಹಿಳೆಯರ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಅಭಿವೃದ್ಧಿ ಗೊಳಿಸುತ್ತದೆ.
- ಒಂದೇ ಚೌಕಟ್ಟಿನೊಳಗೆ ಇತರ ಸಂಸ್ಥೆ ಹಾಗೂ ಯೋಜನೆಗಳ ಸಂಪನ್ಮೂಲಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.



## ಯೋಜನೆಯ ವಿವರ:

ಕೃಷಿ ಚಟುವಟಿಕೆಯಲ್ಲಿ ಮಹಿಳೆಯರ ಸಬಲೀಕರಣ ಮಾಡುವುದೇ ಎಂಕೆಎಸ್‌ಪಿಯ ಪ್ರಮುಖ

ಉದ್ದೇಶವಾಗಿದೆ. ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಭಾಗದ ರೈತ ಮಹಿಳೆಯರ ಸ್ವಸಹಾಯ ಗುಂಪುಗಳನ್ನು ರಚಿಸುವಲ್ಲಿ ಹಾಗೂ ಕೃಷಿ ಮತ್ತು ಕೃಷಿಯಾಧರಿತ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡಿ ಅಭಿವೃದ್ಧಿಪಡಿಸಲು ಸಹಕಾರಿಯಾಗಿದೆ.

## ಅನುಷ್ಠಾನ ಹಂತದ ಅಧಿಕಾರಿ/ವ್ಯಕ್ತಿಗಳು ಮತ್ತು ಅವರ ಜವಾಬ್ದಾರಿಗಳು

- ಯೋಜನೆಯನ್ನು 1. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ 2. ಸಂವರ್ಧನ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.
- ಅಭಿಯಾನ ನಿರ್ದೇಶಕರು ಮೇಲೆ ತಿಳಿಸಿರುವ ಸಂಸ್ಥೆಯ ಮುಖ್ಯಸ್ಥರಾಗಿರುತ್ತಾರೆ.
- ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳು ಎಂಕೆಎಸ್‌ಪಿ ಯೋಜನೆಯಡಿ ಸಲ್ಲಿಸುವ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸಿದ ನಂತರ ಅನುಮೋದನೆಗಳ ನೀಡಲು "ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿ" ಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ.
- ಸಮಿತಿಯು ವಿವಿಧ ಸಹ ಇಲಾಖೆಗಳ ಮುಖ್ಯಸ್ಥರನ್ನು ಒಳಗೊಂಡಂತೆ 10 ಸದಸ್ಯರನ್ನು ಹೊಂದಿದೆ.
- ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರಿಗೆ ಸೂಕ್ತ ಶಿಫಾರಸ್ಸಿನೊಂದಿಗೆ ಮಂಜೂರಾತಿಗಾಗಿ ಕಳುಹಿಸಲಾಗುವುದು
- ನಂತರದಲ್ಲಿ ಕ್ಷೇತ್ರ ಪರಿವೀಕ್ಷಣೆಯನ್ನು ಮಾಡಲಾಗುತ್ತದೆ.
- ಮಂಜೂರಾದ ಪ್ರಸ್ತಾವನೆಗಳು ಅನುಷ್ಠಾನಗೊಳ್ಳುತ್ತಿರುವ ಕುರಿತು ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯ ಪ್ರಗತಿ ಪರಿಶೀಲನೆ ಮಾಡುತ್ತದೆ.



## ಯೋಜನೆ ಅನುಷ್ಠಾನಕ್ಕೆ ಹಣಕಾಸಿನ ಮೂಲ:

- ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಶೇ.75 ಅನುದಾನವನ್ನು ಹಾಗೂ ರಾಜ್ಯ ಸರ್ಕಾರ/ಯೋಜನಾ ಅನುಷ್ಠಾನ ಸಂಸ್ಥೆಯು ಶೇ.25 ರಷ್ಟು ಅನುದಾನವನ್ನು ಭರಿಸುತ್ತದೆ.
- ಅನುದಾನವನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.(25%+50%+25%)
- ಕೇಂದ್ರ/ರಾಜ್ಯ ಸರ್ಕಾರಗಳು ತನ್ನ ಪಾಲಿನ ಅನುದಾನ ಹಂಚಿಕೆಯನ್ನು ಪ್ರತಿ ಹಂತದಲ್ಲೂ ಸರಿಹೊಂದುವಂತೆ ಬಿಡುಗಡೆ ಮಾಡಬೇಕಾಗಿರುತ್ತದೆ.
- ಎರಡನೇ ಕಂತಿನ ಅನುದಾನ ಕೋರಿಕೆಗಾಗಿ ಲಭ್ಯವಿರುವ ಅನುದಾನದ ಶೇ.60 ರಷ್ಟನ್ನು ವೆಚ್ಚ ಮಾಡಿ, ಅಡಿಟ್ ವರದಿ ಹಾಗೂ ಉಪಯುಕ್ತತಾ ಪ್ರಮಾಣ ಪತ್ರದೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು.
- ಮೂರನೇ ಕಂತಿನ ಅನುದಾನ ಕೋರಿಕೆಯನ್ನು ಲಭ್ಯವಿರುವ ಅನುದಾನದಲ್ಲಿ ಶೇ.80 ರಷ್ಟು

ವೆಚ್ಚವಾಗಿರುವ ಬಗ್ಗೆ ಆಡಿಟ್ ವರದಿ ಹಾಗೂ ಉಪಯುಕ್ತತಾ ಪ್ರಮಾಣ ಪತ್ರದೊಂದಿಗೆ ಪ್ರಸ್ತಾವನೆ ಸಲ್ಲಿಸಬೇಕು.


### ಯೋಜನೆಯನ್ನು ಕೆಳಕಂಡ ಪ್ರಮುಖ ಅಂಶಗಳನ್ನಾಧರಿಸಿ ಕಾರ್ಯ ನಿರ್ವಹಿಸಬೇಕಾಗುತ್ತದೆ:

- ಮಹಿಳೆಯರನ್ನು ಕೃಷಿ ಕ್ಷೇತ್ರದಲ್ಲಿ ತೊಡಗಿಸುವ ನಿಟ್ಟಿನಲ್ಲಿ ಸ್ವಸಹಾಯ ಸಂಘ/ಒಕ್ಕೂಟ/ಮಹಿಳಾ ರೈತ ಸಂಘಟನೆಗಳನ್ನು ರಚಿಸಿ ಸಂಚಲನೆ ಮೂಡಿಸುವುದು.
- ಕೃಷಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಅನುಕೂಲತೆ ಕಲ್ಪಿಸುವ ನಿಟ್ಟಿನಲ್ಲಿ ಪೂರಕ ಆಸ್ತಿಗಳಿಗೆ (ಜಲಸಂವರ್ಧನೆ, ಭೂಮಿ ಇತ್ಯಾದಿ) ಪ್ರಾಮುಖ್ಯತೆ ನೀಡುವುದು.
- ಮಾರುಕಟ್ಟೆಯ ಜ್ಞಾನ, ಉತ್ಪಾದಿಸಿದ ವಸ್ತುಗಳಿಗೆ ಗ್ರಾಮ ಮಟ್ಟದಲ್ಲಿ ಮೌಲ್ಯ ವರ್ಧನೆ, ತರಬೇತಿ, ಕೃಷಿ ಕ್ಷೇತ್ರದಲ್ಲಿ ಕೌಶಲ್ಯ ಮತ್ತು ತಾಂತ್ರಿಕ ಪರಿಣಿತ ಹೊಂದುವಲ್ಲಿ, ರೈತ ತಂತ್ರಜ್ಞರೊಂದಿಗೆ ಭೇಟಿ, ಸಂವಾದ, ಪ್ರದರ್ಶನ, ಕ್ಷೇತ್ರ ಭೇಟಿಗಳಲ್ಲಿ ರೈತ ಮಹಿಳೆಯರನ್ನು ಭಾಗಿಯಾಗಿಸುವುದು

### ಯೋಜನೆಗೆ ಸಂಬಂಧಿಸಿದ ಲೆಕ್ಕಪತ್ರದ ನಿರ್ವಹಣೆ ಬಗ್ಗೆ ಮಾಹಿತಿ.

ಎಂಕೆಎಸ್‌ಪಿ ಯೋಜನೆಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಯೋಜನಾ ಅನುಷ್ಠಾನ ಸಂಸ್ಥೆಗಳು, ಜಿಲ್ಲಾ ಪಂಚಾಯತ್ ಹಾಗೂ ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ನಿರ್ವಹಣೆ ಮಾಡುತ್ತದೆ.

### ಯೋಜನೆಯ ಚಟುವಟಿಕೆಗಳು ಹಾಗೂ ಜವಾಬ್ದಾರಿಗಳ ಚಾರ್ಟ್





ಗ್ರಾಮೀಣ ಬಡವರಲ್ಲಿ ಅತಿ ಬಡವರಾದ ಮಹಿಳೆಯರಿಗೆ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳ ನಿರ್ವಹಣೆಯಲ್ಲಿ ತರಬೇತಿ ನೀಡಲಾಗುತ್ತದೆ. ಆ ಮೂಲಕ ಮಹಿಳೆಯರು ಕೃಷಿ ಚಟುವಟಿಕೆಯನ್ನು ಹೆಚ್ಚಿನ ಮಟ್ಟದಲ್ಲಿ ಕೈಗೊಳ್ಳುವಂತೆ ಪ್ರೋತ್ಸಾಹ ನೀಡಲಾಗುವುದು. ಈ ವಿಧಾನಗಳ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿದೆ.

ಯೋಜನಾ ಅನುಷ್ಠಾನ ಸಂಸ್ಥೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಯೋಜನಾ ಅವಧಿ 3 ವರ್ಷವಾಗಿರುತ್ತದೆ. ಯೋಜನೆಯ ಕನಿಷ್ಠ ವೆಚ್ಚ ರೂ.1.00 ಕೋಟಿಗಳಿಂದ ಗರಿಷ್ಠ ರೂ.15.00 ಕೋಟಿಗಳಾಗಿರುತ್ತದೆ. ಯೋಜನಾ ಅನುಷ್ಠಾನ ಸಂಸ್ಥೆಯು ಕೆಳಕಂಡ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಕಾಶ ನೀಡಲಾಗುತ್ತದೆ.

- ಸಂಸ್ಥೆಯು ತಾವು ಯೋಜನೆ ಅನುಷ್ಠಾನ ಗೊಳಿಸಲು ಪ್ರಸ್ಥಾಪಿಸಿದ ಪ್ರದೇಶದಲ್ಲಿ ಕನಿಷ್ಠ 3 ವರ್ಷಗಳ ಕಾಲ ಗ್ರಾಮೀಣ ಪ್ರದೇಶದಲ್ಲಿ ಸುಸ್ಥಿರ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆ ಗಳಲ್ಲಿ ಕಾರ್ಯನಿರ್ವಹಿಸಿರಬೇಕು. ಈ ಚಟುವಟಿ ಕೆಯಲ್ಲಿ ಬಡ ಜನರ ಭಾಗವಹಿಸುವುದಕ್ಕೆ ಇರಬೇಕು.
- ಕಳೆದ 3 ವರ್ಷಗಳಲ್ಲಿ ಕನಿಷ್ಠ ರೂ.25,00,000 ಗಳ ವಾರ್ಷಿಕ ವಹಿವಾಟು ಮಾಡಿರಬೇಕು
- ಸಂಸ್ಥೆಯು ಕನಿಷ್ಠ 500 ರೈತ ಮಹಿಳೆ ಯರೊಂದಿಗೆ ಕಾರ್ಯನಿರ್ವಹಿಸಿರಬೇಕು.
- ಜೀವನೋಪಾಯ ಅಭಿವೃದ್ಧಿಯ ನಿಟ್ಟಿನಲ್ಲಿ ಸಂಸ್ಥೆಯು ಯೋಜನೆ ಅನುಷ್ಠಾನಗೊಳಿಸಲು ಪ್ರಸ್ಥಾಪಿಸಿದ ಪ್ರದೇಶದಲ್ಲಿ ಕನಿಷ್ಠ 100 ಸ್ವಸಹಾಯ ಗುಂಪುಗಳು ಹಾಗೂ ಸಮುದಾಯ ಆಧಾರಿತ ಸಂಸ್ಥೆಗಳ ರಚನೆ ಮಾಡಿರಬೇಕು.
- ಸಂಸ್ಥೆಯು ನೋಂದಾಯಿಸಲ್ಪಟ್ಟಿರಬೇಕು
- ಸಂಸ್ಥೆಯು ಸರ್ಕಾರದ ಯಾವುದೇ ಇಲಾಖೆಯಿಂದ ಕಪ್ಪು ಪಟ್ಟಿಗೆ ಸೇರಿರಬಾರದು. ರಾಜಕೀಯೇತರ ಸಂಸ್ಥೆಯಾಗಿರಬೇಕು.
- ಆರ್ಥಿಕತೆ, ಸಾಮಾಗ್ರಿಗಳ ನಿರ್ವಹಣೆ, ಕಾನೂನು ಈಡೇರಿಕೆಗಳ ಅನುವರ್ತನಾ ಕ್ರಮದಲ್ಲಿ ಪಾರದರ್ಶಕತೆಯನ್ನು ಕಾಪಾಡಿರಬೇಕು.
- ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ವಿವರ, ಸಿಬ್ಬಂದಿಯ ಕಾರ್ಯ ಕ್ಷೇತ್ರದಲ್ಲಿನ ಅನುಭವ ಹಾಗೂ ಸಂಸ್ಥೆಯಲ್ಲಿ ಲಭ್ಯವಿರುವ ತರಬೇತಿ ಸಂಪನ್ಮೂಲ ಮತ್ತು ಮೂಲಭೂತ ಸೌಕರ್ಯದ ಮಾಹಿತಿಯನ್ನು ಒದಗಿಸಬೇಕು.
- ಯೋಜನಾ ಅವಧಿಯ ಮಾಹಿತಿ ನೀಡಿರಬೇಕು.
- ಮಾಹಿತಿ ತಂತ್ರಜ್ಞಾನ, ಕಿಸಾನ್ ಮೇಳ, ಕಿಸಾನ್ ದಿನ, ಹಬ್ಬಗಳು, ಜಾನಪದ ಮಾದ್ಯಮ, ಶ್ರವಣ ಮತ್ತು ದೃಶ್ಯ ಮಾಧ್ಯಮ, ಐಈಸಿ ಸಲಕರಣೆ, ವಿಡಿಯೋ ಕಾನ್ಫರೆನ್ಸ್, ಉತ್ತಮ ಆಚರಣೆ/ ಅಭ್ಯಾಸಗಳ ಮೂಲಕ ಯೋಜನಾ ಪ್ರಸರಣ ಪ್ರಕ್ರಿಯೆಗಳ ಮೂಲಕ ಹೆಚ್ಚು ಕ್ರಿಯಾತ್ಮಕವಾಗಿ ಅನುಷ್ಟಾನಗೊಳಿಸುವ ಸಾಮರ್ಥ್ಯ ಹೊಂದಿರ ಬೇಕು.
- ಸಮುದಾಯ ಆಧಾರಿತ ಸಂಸ್ಥೆಗಳನ್ನು ಬಳಸಿಕೊಂಡು ಯಾವ ರೀತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದು ಸ್ಪಷ್ಟ ವಾಗಿ

ತಿಳಿಸಿರಬೇಕು. ಸಮುದಾಯ ಸಂಪನ್ಮೂಲ ವ್ಯಕ್ತಿ ಹಾಗೂ ಉತ್ತಮ ಅಭ್ಯಾಸಗಳನ್ನು ಅನುಸರಿಸುತ್ತಿರುವ ರೈತರು (ಬೆಸ್ಟ್ ಪ್ರಾಕ್ಟೀಸಿಂಗ್ ಫಾರ್ಮರ್) ಯೋಜನೆಯಡಿ ನಿರ್ವಹಿಸಬೇಕಾದ ಪಾತ್ರ ಹಾಗೂ ಜವಾಬ್ದಾರಿಯ ವಿವರದೊಂದಿಗೆ, ಯೋಜನೆಯಲ್ಲಿ ಇವರನ್ನು ಬಳಸಿಕೊಂಡು ಯಾವ ರೀತಿ ಮುನ್ನಡೆಸಬೇಕು ಎಂಬ ಸಂಪೂರ್ಣ ಮಾಹಿತಿಯನ್ನು ಯೋಜನಾ ಪ್ರಸ್ತಾವನೆಯಲ್ಲಿ ನಮೂದಿಸಿರಬೇಕು.

ಈ ಎಲ್ಲಾ ಅಂಶಗಳನ್ನು ಪ್ರಸ್ತಾಪಿತ ಯೋಜನೆಯು ಹಾಗೂ ಯೋಜನಾ ಅನುಷ್ಠಾನ ಸಂಸ್ಥೆ ಒಳಗೊಂಡಿದ್ದರೆ ಕೆಳಕಂಡ ಪ್ರಕ್ರಿಯೆಯ ಮೂಲಕ ಯೋಜನೆ ಕಾರ್ಯಗತಗೊಳಿಸಲು ಅನುಮೋದನೆ ನೀಡಲಾಗುತ್ತದೆ:

- ವಿಶೇಷ ಯೋಜನೆಗೆ ಸಂಬಂಧಿಸಿದ ರಾಜ್ಯ ಸರ್ಕಾರದಿಂದ ಮುಂಗಡವಾಗಿ ಮೌಲ್ಯ ಮಾಪನ ಮಾಡಿದ ನಂತರ ಶಿಫಾರಸ್ಸುಗೊಂಡ ಪ್ರಸ್ತಾವನೆಯನ್ನು ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನಾ ವಿಭಾಗಕ್ಕೆ ಪರಿಗಣನೆಗಾಗಿ ಸಲ್ಲಿಸಲಾಗುತ್ತದೆ.
- ಹೀಗೆ ಸಲ್ಲಿಸಿದ ಪ್ರಸ್ತಾವನೆಗಳನ್ನು ಯೋಜನಾ ಅನುಮೋದನಾ ಸಮಿತಿಗೆ ಕಳುಹಿಸುವ ಮೊದಲು ಯೋಜನಾ ತಪಾಸಣಾ ಸಮಿತಿಯಿಂದ ಪರೀಕ್ಷಿಸಿ, ಪರಿಗಣಿಸಲ್ಪಡುತ್ತವೆ. ಈ ಸಮಿತಿಗೆ ಸರ್ಕಾರದ ಜಂಟಿ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುತ್ತಾರೆ. ಕಾರ್ಯಕ್ರಮದ ಬಗ್ಗೆ ವಿಮರ್ಶಿಸಿ, ಪ್ರಗತಿ ಪರಿಶೀಲಿಸಿ ನಂತರ ಅನುಮೋದನಾ ಸಮಿತಿಗೆ ಕಳುಹಿಸಲಾಗುವುದು.
- ಕಾರ್ಯಕ್ರಮದ ಮಂಜೂರಾತಿಯಲ್ಲಿ ಕಾರ್ಯಕ್ರಮ ಅನುಮೋದನಾ ಸಮಿತಿಯು ಅಂತಿಮ ಅಧಿಕಾರ ಹೊಂದಿರುತ್ತದೆ.



## ಯೋಜನೆಯ ಪಾರದರ್ಶಕತೆಗೆ ತೆಗೆದುಕೊಂಡಿರುವ ಕ್ರಮಗಳು:

- ಯೋಜನಾ ಅನುಷ್ಠಾನ ಸಂಸ್ಥೆಗಳು ಯೋಜನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಕೇಂದ್ರ ಸರ್ಕಾರಗಳ ನಿಗಧಿತ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಬೇಕು.
- ಸದರಿ ಯೋಜನೆಗೆ ಸಂಬಂಧಿಸಿದ ಮಾರ್ಗ ಸೂಚಿ ಹಾಗೂ ಯೋಜನೆಯ ಪ್ರಸ್ತಾವನೆ ಯನ್ನು ಸಲ್ಲಿಸಬೇಕಾದ ಪ್ರಮಾಣ ಪತ್ರವನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

## ಪಂಚಾಯತ್ ರಾಜ್ ಸಂಸ್ಥೆಗಳ ಕರ್ತವ್ಯಗಳು:

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಯೋಜನಾ ನಿರ್ದೇಶಕರು ಕಾಲಾನುಕ್ರಮದಲ್ಲಿ ಯೋಜನಾ ಅನುಷ್ಠಾನ ಕುರಿತಂತೆ ಮೌಲ್ಯಮಾಪನ ಹಾಗೂ ಪರೀಶೀಲನೆ ನಡೆಸಬೇಕಾಗುತ್ತದೆ. ಈ ಹಂತದಲ್ಲಿ ತಾಲ್ಲೂಕು/ಗ್ರಾಮಪಂಚಾಯತಿಗಳು ಪ್ರಮುಖ ಪಾತ್ರ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಹಾಗೆಯೇ ಯೋಜನೆಯ ಫಲಾನುಭವಿಗಳ ಆಯ್ಕೆಯನ್ನು ವಾರ್ಡ್/ ಗ್ರಾಮಸಭೆಗಳ ಮೂಲಕವೇ ಅಂತಿಮಗೊಳಿಸುವ ಅವಶ್ಯಕತೆ ಇದೆ. ಇದರಿಂದ ಜನಸಹಭಾಗಿತ್ವ ಮತ್ತು ಉತ್ತರಧಾಯತ್ವವನ್ನು ಖಾತರಿಪಡಿಸಲು ಸಾಧ್ಯವಿದೆ.

# ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ

ಭಾರತ ದೇಶದ ಮಾನವ ಸಂಪನ್ಮೂಲದ ಬಹು ದೊಡ್ಡಭಾಗ ಯವಜನತೆಯಾಗಿದೆ. ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಯುವಜನರ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದ್ದರೂ ಗ್ರಾಮೀಣ ಪ್ರದೇಶದ ಯುವಜನರ ಸ್ಥಿತಿಗತಿ ಇದಕ್ಕೆ ಪೂರಕವಾಗಿಲ್ಲ.

ಇಂದು ನಮ್ಮ ಗ್ರಾಮೀಣ ಯುವ ಶಕ್ತಿ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಅನೇಕ ಕೊರತೆಗಳು ಅವರನ್ನು ತಡೆಯುತ್ತಿವೆ. ದೇಶದ ಅಭಿವೃದ್ಧಿಗೆ ಪರಿಪೂರ್ಣವಾದ ಕೊಡುಗೆಯನ್ನು ನೀಡುವಲ್ಲಿ ಯುವಶಕ್ತಿಯ ಸದ್ಬಳಕೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಪ್ರಮುಖವಾಗಿ ಈ ಕೆಳಗಿನ ಸಮಸ್ಯೆಗಳು ಗ್ರಾಮೀಣ ಯುವಕರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಿಂದ ವಿಮುಖರನ್ನಾಗಿಸಿವೆ.

- ಪ್ರೌಢಶಿಕ್ಷಣದ ಒಳಗಿನ ವಿದ್ಯಾಭ್ಯಾಸ
- ವೃತ್ತಿ ಕೌಶಲ್ಯದ ಕೊರತೆ
- ಪಾರಂಪರಿಕ ಕೃಷಿಯಿಂದ ವಿಮುಖರಾಗುತ್ತಿರುವುದು.
- ನಗರ ಪ್ರದೇಶಗಳತ್ತ ವಲಸೆ

ಈ ಎಲ್ಲಾ ಸಮಸ್ಯೆಗಳು ಗ್ರಾಮೀಣ ಯುವಕರನ್ನು ಕಾಡುತ್ತಿವೆ. ಅವರು ದುಡಿಮೆಯ ಅವಕಾಶಗಳನ್ನು ಹುಡುಕುತ್ತಾ ನಗರ ಪ್ರದೇಶಗಳಿಗೆ ವಲಸೆ ಬರುತ್ತಾರೆ. ಆದರೆ ನಗರ ಪ್ರದೇಶದಲ್ಲಿರುವ ಜೀವನಾಧಾರ ಅವಕಾಶಗಳನ್ನು ಬಳಸಿಕೊಳ್ಳಲು ಬೇಕಾದ ಕೌಶಲ್ಯ ಈ ಯುವಕರಲ್ಲಿ ಇರುವುದಿಲ್ಲ. ಇದರಿಂದ ಖಿನ್ನತೆಗೊಳಗಾಗುವ

ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಕರನ್ನು ರಾಷ್ಟ್ರದ ಸಂಪತ್ತಾಗಿ ಪರಿವರ್ತಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ



ಯುವಜನರು ಮರಳಿ ಗ್ರಾಮಗಳಿಗೆ ಬರುತ್ತಾರೆ. ನಂತರ ಗ್ರಾಮೀಣ ಬದುಕಿಗೆ ಹೊರೆಯಾಗುತ್ತಿದ್ದಾರೆ. ಗ್ರಾಮೀಣ ಯುವಜನತೆ ಸಮಾಜ ವಿರೋಧಿ ಕೃತ್ಯಗಳತ್ತ ವಾಲುತ್ತಿರುವ ಪ್ರಸಂಗಗಳು ದಿನೇ ದಿನೇ ಹೆಚ್ಚುತ್ತಿವೆ.

ಗ್ರಾಮೀಣ ಬದುಕಿನ ಜೀವನಾಧಾರವಾಗಿರುವ ಕೃಷಿ ವಲಯದಲ್ಲಿ ಕಿರು ಉದ್ಯಮಗಳಿಗೆ ವಿಪುಲ ಅವಕಾಶಗಳಿವೆ. ಆದರೆ ಸ್ವಯಂ ಉದ್ಯೋಗಕ್ಕೆ ಕೈಹಾಕಲು ಯುವಕರಲ್ಲಿ ಹಿಂಜರಿಕೆಯಿದೆ. ಅಲ್ಲದೆ ಯುವಕರಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಬೇಕಾದ ಅಗತ್ಯ ವೃತ್ತಿಪರ ಕೌಶಲಗಳನ್ನು ನೀಡುವ ಸೌಕರ್ಯವು ನಮ್ಮ ಗ್ರಾಮೀಣ ಭಾಗದಲ್ಲಿ ತೀರಾ ಕಡಿಮೆಯಿದೆ. ಜೀವನ ನಿರ್ವಹಣೆಯ ಒತ್ತಡಕ್ಕೆ ಒಳಗಾದ ಯುವಕರು ಸಮಾಜ ವಿರೋದಿ ಚಟುವಟಿಕೆಯಲ್ಲಿ ತೊಡಗುವ ಅಪಾಯವು ಸೃಷ್ಟಿಯಾಗುತ್ತಿದೆ.

ಈ ಅಪಾಯದಿಂದ ನಮ್ಮ ಗ್ರಾಮೀಣ ಯುವಕರನ್ನು ಸಂರಕ್ಷಿಸಬೇಕಾಗಿದೆ. ಯುವಕರನ್ನು ಗ್ರಾಮೀಣ ಪ್ರದೇಶಗಳಲ್ಲಿಯೇ ಉಳಿಸಿಕೊಳ್ಳಬೇಕು. ಈ ಹಾದಿಯಲ್ಲಿ ಯುವಕರನ್ನು ಗ್ರಾಮದ ಸಮಗ್ರ ಬೆಳವಣಿಗೆಗೆ ಪೂರಕವಾದ ಸಂಪತ್ತನ್ನಾಗಿ ರೂಪಿಸಬೇಕು. ಈ ನಿಟ್ಟಿನಲ್ಲಿ 'ರಾಜೀವ್‌ಗಾಂಧಿ ಯುವ ಚೈತನ್ಯ ಯೋಜನೆ'ಯನ್ನು ಕರ್ನಾಟಕ ಸರಕಾರ ಜಾರಿಗೆ ತಂದಿದೆ.

ಕರ್ನಾಟಕ ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಕಾರ್ಯಕ್ರಮವಾದ ರಾಜೀವ್ ಗಾಂಧಿ ಯುವಚೈತನ್ಯ ಯೋಜನೆಯು ಈ ಮುಂದಿನ ಉದ್ದೇಶಗಳನ್ನು ಹೊಂದಿದೆ.

- ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ 18 ರಿಂದ 35 ವರ್ಷ ವಯಸ್ಸಿನ ಒಳಗಿನ ನಿರುದ್ಯೋಗಿ ಯುವಕರಿಗೆ ಸ್ವ ಉದ್ಯೋಗ ಕಲ್ಪಿಸಿ ಸ್ವಾವಲಂಬಿಗಳನ್ನಾಗಿ ರೂಪಿಸುವುದು.
- ಈವರೆಗೆ ಯಾವುದೇ ಸರ್ಕಾರಿ ಯೋಜನೆಯಲ್ಲಿ ಸೌಲಭ್ಯ ಪಡೆಯದ ನಿರುದ್ಯೋಗಿ ಯುವಕರನ್ನು ಗುರುತಿಸುವುದು.
- ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯವಕರನ್ನು ಸೂಕ್ತ ತರಬೇತಿಯ ಮೂಲಕ ರಾಷ್ಟ್ರದ ಸಂಪತ್ತಾಗಿ ಪರಿವರ್ತಿಸುವುದು.
- ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸಾಮಾಜಿಕ ಮತ್ತು ಆರ್ಥಿಕ ಬಲವರ್ಧನೆಗೆ ಪ್ರೋತ್ಸಾಹ ನೀಡುವುದು.
- ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ಪ್ರೇರಣೆ ನೀಡುವ ಮೂಲಕ ಗ್ರಾಮೀಣ ಯುವಕರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದು.
- ನಿರುದ್ಯೋಗಿ ಯುವಕರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಪ್ರಯೋಜನ ಪಡೆಯುವಂತಾಗಲು ಅಗತ್ಯ ಸಂಪರ್ಕ ಕಲ್ಪಿಸುವುದು.

### ಯೋಜನೆಯ ವ್ಯಾಪ್ತಿ ಮತ್ತು ಗುರಿ :

ರಾಜ್ಯದ 5627 ಗ್ರಾಮ ಪಂಚಾಯಿತಿಗಳು ಯೋಜನೆಯ ವ್ಯಾಪ್ತಿಗೆ ಒಳಪಡುತ್ತದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 40 ರಿಂದ 50 ನಿರುದ್ಯೋಗಿ ಯುವಕರನ್ನು ಗುರುತಿಸಲಾಗುತ್ತದೆ. ಒಟ್ಟಾರೆಯಾಗಿ ಪ್ರತಿ ವರ್ಷ 2 ಲಕ್ಷ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಹಾಗೂ ಉದ್ಯೋಗವನ್ನು ಕಲ್ಪಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ.

### ಯೋಜನೆಯ ಸೌಲಭ್ಯ ಪಡೆಯುವವರು :

- ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಪುರುಷರು ಮಾತ್ರ ಅರ್ಹರಾಗಿರುತ್ತಾರೆ.
- ಆಸಕ್ತ ಅಭ್ಯರ್ಥಿಗಳು 18 ರಿಂದ 35 ವರ್ಷ ಒಳಪಟ್ಟಿರಬೇಕು. ಸ್ವಯಂ ಉದ್ಯೋಗ ಕೈಗೊಳ್ಳಲು ಆಸಕ್ತರಾಗಿರಬೇಕು.
- ಸರ್ಕಾರದ ಇತರೇ ಯಾವುದೇ ಬಡತನ ನಿವಾರಣಾ ಕಾರ್ಯಕ್ರಮದಲ್ಲಿ ಸೌಲಭ್ಯ ಪಡೆದಿರಬಾರದು.

### ಯೋಜನೆಯ ಕಾರ್ಯತಂತ್ರ :

ಯೋಜನೆಯನ್ನು ರಾಜ್ಯದಲ್ಲಿ ಪರಿಣಾಮ ಕಾರಿಯಾಗಿ ಜಾರಿಗೊಳಿಸಲು ಹಲವು ಕಾರ್ಯ ತಂತ್ರಗಳನ್ನು ರೂಪಿಸಲಾಗಿದೆ.

## ರಾಜ್ಯ ಮಟ್ಟ :

ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ರಾಜ್ಯ ಮಟ್ಟದ ಸಂಜೀವಿನಿ (KSRLM) ಯೋಜನಾ ತಂಡಕ್ಕೆ ಜವಾಬ್ದಾರಿಯನ್ನು ನೀಡಲಾಗಿದೆ. ರಾಜ್ಯದ ಗ್ರಾಮೀಣಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಮಾರ್ಗದರ್ಶನದಲ್ಲಿ ಯೋಜನೆ ಅನುಷ್ಠಾನಗೊಳ್ಳುತ್ತದೆ.

ಯೋಜನೆಯ ಕುರಿತು ಜಿಲ್ಲಾ ಮಟ್ಟದಲ್ಲಿನ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರುಗಳಿಗೆ 1 ಅಥವಾ 2 ದಿನಗಳ ಪ್ರಥಮ ಹಂತದ ಮಾಹಿತಿ ಕಾರ್ಯಗಾರವನ್ನು ಆಯೋಜನೆ ಮಾಡಲಾಗುತ್ತದೆ. ಆ ಮೂಲಕ ಯೋಜನೆಯ ಕುರಿತಾದ ಸಮಗ್ರ ಮಾಹಿತಿಯನ್ನು ನೀಡಲು ಅಗತ್ಯ ಸಂವಾದಗಳನ್ನು ನಡೆಸಲಾಗುತ್ತದೆ. ಅಲ್ಲದೆ ಯೋಜನೆಯ ಮಾರ್ಗಸೂಚಿ, ಪರಿಕಲ್ಪನೆಯನ್ನು ಅರ್ಥೈಸಲಾಗುತ್ತದೆ.

## ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ ಸಭೆ (SLBS) ಆಯೋಜನೆ

ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ರಾಜ್ಯ ಮಟ್ಟದಲ್ಲಿ ಬ್ಯಾಂಕರುಗಳ ಸಮಿತಿ ಸಭೆಯನ್ನು ಆಯೋಜಿಸಲಾಗುತ್ತದೆ. ಆ ಮೂಲಕ ಯೋಜನೆಯ ಸೌಲಭ್ಯ ಪಡೆಯಲು ಆಯ್ಕೆಯಾದ ಯುವಕರಿಗೆ ಹಣಕಾಸು (ಸಾಲ) ಸೌಲಭ್ಯ ನೀಡಲಾಗುತ್ತದೆ. ಈ ಸಂಬಂಧ ರಾಜ್ಯದಲ್ಲಿನ ಎಲ್ಲಾ ಬ್ಯಾಂಕುಗಳ ಶಾಖೆಗಳಿಗೆ ಅಗತ್ಯ ಸುತ್ತೋಲೆ ಮತ್ತು ಆದೇಶಗಳನ್ನು ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತದೆ.

## ಮಾಹಿತಿ ಶಿಕ್ಷಣ – ಸಂವಹನ

'ರಾಜೀವ್ ಗಾಂಧಿ ಯುವ ಚೈತನ್ಯ' ಕಾರ್ಯಕ್ರಮ ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕಾದರೆ ಈ ಯೋಜನೆಯ ಕುರಿತು ಸಂಬಂಧಪಟ್ಟ ಎಲ್ಲಾ ಭಾಗೀದಾರರಿಗೆ ಸಮಗ್ರವಾದ ಮಾಹಿತಿಯನ್ನು ತಲುಪಿಸುವ ಅಗತ್ಯವಿದೆ. ಅದಕ್ಕಾಗಿ ವಿಶೇಷವಾಗಿ 'ಮಾಹಿತಿ, ಸಂಪರ್ಕ ಮತ್ತು ಸಂವಹನ' ಆಂದೋಲನವನ್ನು ವಿನ್ಯಾಸಗೊಳಿಸಲಾಗುತ್ತಿದೆ. ರಾಜ್ಯ 'ಸಂಜೀವಿನಿ' ತಂಡವು ಮಾಹಿತಿ – ಶಿಕ್ಷಣ – ಸಂವಹನಕ್ಕೆ ಪೂರಕವಾದ ಅಗತ್ಯ ಸಾಮಗ್ರಿಗಳನ್ನು ಸಿದ್ದಪಡಿಸುತ್ತದೆ. ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಬೇಕಾದ ಎಲ್ಲಾ ಹಂತಗಳ ತರಬೇತಿ ಸಾಮಗ್ರಿಗಳನ್ನು ಸಿದ್ದಪಡಿಸಲಾಗುವುದು.

ಯೋಜನೆಯ ವ್ಯಾಪಕ ಪ್ರಚಾರಕ್ಕೆ ಬೇಕಾದ ಕಿರು ಚಿತ್ರಗಳು, ಕಿರು ಹೊತ್ತಿಗೆಗಳು, ಬ್ಯಾನರ್‌ಗಳು, ಬಿತ್ತಿ ಪತ್ರಗಳು, ಕರ ಪತ್ರಗಳು, ತರಬೇತಿ ಕೈಪಿಡಿಗಳನ್ನು ಕಾರ್ಯಾಗಾರಗಳ ಮೂಲಕ ತಯಾರಿಸಲಾಗುವುದು.

ದೃಶ್ಯ ಮಾಧ್ಯಮ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರವನ್ನು ನೀಡಲಾಗುತ್ತದೆ. ಆ ಮೂಲಕ ಯೋಜನೆಯ ಸೌಲಭ್ಯಗಳ ಸದುಪಯೋಗ ಪಡೆಯುವಲ್ಲಿ ಯುವಕರ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಲಾಗುತ್ತದೆ.

## ಜಿಲ್ಲಾ ಮಟ್ಟದಲ್ಲಿನ ಕಾರ್ಯತಂತ್ರ

ಯೋಜನೆಯ ಅನುಷ್ಠಾನದಲ್ಲಿ ಪ್ರಮುಖವಾಗಿ ಪಂಚಾಯತ್‌ರಾಜ್ ಸಂಸ್ಥೆಗಳ ಭಾಗವಹಿಸುವಿಕೆ ಅತ್ಯಗತ್ಯ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ಜಿಲ್ಲೆಯಲ್ಲಿನ ಎಲ್ಲಾ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರು, ತಾಲ್ಲೂಕು ಪಂಚಾಯಿತಿ ಸದಸ್ಯರು, ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರಗಳಿಗೆ ಒಂದು ದಿನದ ಪ್ರಾಥಮಿಕ ಮಾಹಿತಿ ತರಬೇತಿಯನ್ನು ಆಯೋಜನೆ ಮಾಡಲಾಗುತ್ತದೆ. ಹಾಗೆಯೇ ಜಿಲ್ಲಾ ಪಂಚಾಯಿತಿಯು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹಾಗೂ ಇತರೆ ಇಲಾಖಾ ಅಧಿಕಾರಿಗಳಿಗೆ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ ಕುರಿತು ಮಾಹಿತಿಯನ್ನು ನೀಡಲು ಕಾರ್ಯಕ್ರಮಗಳನ್ನು ರೂಪಿಸುತ್ತದೆ.

## ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಗಳ ರಚನೆ

ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ **ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯನ್ನು** ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ

ರಚಿಸಲಾಗುತ್ತದೆ. ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಸಮಿತಿಯ ವಿವರ ಈ ಮುಂದಿನಂತಿದೆ

- ಜಿಲ್ಲಾ ಉಸ್ತುವಾರಿ ಸಚಿವರು – ಅಧ್ಯಕ್ಷರು
- ಜಿಲ್ಲಾ ಪಂಚಾಯತ್ ಅಧ್ಯಕ್ಷರು – ಉಪಾಧ್ಯಕ್ಷರು
- ಜಿ.ಪಂ. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು – ಸದಸ್ಯ ಕಾರ್ಯದರ್ಶಿಗಳು
- ಜಿಲ್ಲೆಯ ಎಲ್ಲಾ ಶಾಸಕರು – ಸದಸ್ಯರು
- ಜಿಲ್ಲಾ ವ್ಯಾಪ್ತಿಯ ವಿಧಾನ ಪರಿಷತ್ ಸದಸ್ಯರು – ಸದಸ್ಯರು
- ಹಣಕಾಸು ಸಂಸ್ಥೆಗಳ ಜಿಲ್ಲಾ ಮಟ್ಟದ ನಿಯಂತ್ರಕರುಗಳು – ಸದಸ್ಯರು (ರಾಷ್ಟ್ರೀಕೃತ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಗ್ರಾಮೀಣ/ಪ್ರಾದೇಶಿಕ ಬ್ಯಾಂಕುಗಳು)
- ಕೃಷಿ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು – ಸದಸ್ಯರು (ಕೃಷಿ ವಿಜ್ಞಾನ ಕೇಂದ್ರ/ ರೂಡಸೆಟ್ಟಿಯ ಪ್ರತಿನಿಧಿಗಳು )
- ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು – ಸದಸ್ಯರು
- ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿ– ಸದಸ್ಯರು
- ಆಯ್ದ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ – ಸದಸ್ಯರು

ಅಲ್ಲದೆ ಸರ್ಕಾರದಿಂದ ನಾಮ ನಿರ್ದೇಶನಗೊಂಡ ತಾಂತ್ರಿಕ/ ಸಾಮಾಜಿಕ/ ಆರ್ಥಿಕ ವಲಯದ ಇಬ್ಬರು ತಜ್ಞರು ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ.

### ಸಮಿತಿಯ ಕಾರ್ಯಕಲಾಪಗಳು

ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಸಭೆಯು 2 ತಿಂಗಳಿಗೊಮ್ಮೆ ನಡೆಯುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು ಈ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. ಸಮಿತಿಯು ತಾಲ್ಲೂಕು ಹಂತದಿಂದ ಶಿಪಾರಸ್ಸು ಮಾಡಿದ ಯೋಜನೆಯ ಸೌಲಭ್ಯ ಪಡೆಯುವ ಯುವಕರ ಪಟ್ಟಿ ಸ್ವೀಕರಿಸಿ ಅನುಮೋದನೆ ನೀಡುತ್ತದೆ. ಜಿಲ್ಲಾ ವ್ಯಾಪ್ತಿಯಲ್ಲಿ ಕೈಗೊಳ್ಳಲು ಸಾಧ್ಯವಿರಬಹುದಾದ ಸ್ವ ಉದ್ಯೋಗ – ಚಟುವಟಿಕೆಗಳ ಬಗ್ಗೆ ಈ ಸಭೆಯು ಚರ್ಚಿಸಬೇಕು. ಸ್ವಯಂ ಉದ್ಯೋಗಕ್ಕೆ ಅಗತ್ಯವಾದ ಹಣಕಾಸು ಸೌಲಭ್ಯ ಸೇರಿದಂತೆ, ಜಿಲ್ಲೆಯಲ್ಲಿ ಯೋಜನೆಯು ಪರಿಣಾಮಕಾರಿಯಾಗಿ ಜಾರಿಗೊಳ್ಳುವ ಎಲ್ಲಾ ಹಂತಗಳನ್ನು ಸಮಿತಿಯು ಗಮನಿಸಬೇಕು. ಯೋಜನೆಯ ಜಾರಿಗೆ ಅಗತ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯು ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯದ್ದಾಗಿರುತ್ತದೆ.

### ಜಿಲ್ಲಾ ಮಟ್ಟದಲ್ಲಿ ತಜ್ಞರು (ಪರಿಣಿತರ) ಸಮಿತಿ ರಚನೆ :

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ತಜ್ಞರ (ಪರಿಣಿತರ) ಸಮಿತಿಯನ್ನು ರಚಿಸುತ್ತಾರೆ. ಸಮಿತಿಯು ಈ ಮುಂದಿನಂತಿದೆ

### ರಾಜೀವ್ ಗಾಂಧಿ ಯುವ ಚೈತನ್ಯ ಜಿಲ್ಲಾ ಮಟ್ಟದ ಪರಿಣಿತ ತಜ್ಞರ ಸಮಿತಿ

- ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಅಧ್ಯಕ್ಷರು
- ಯೋಜನಾ ನಿರ್ದೇಶಕರು – ಸಂಚಾಲಕರು
- ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು– ಸದಸ್ಯರು
- ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು, ನಬಾರ್ಡ್ – ಸದಸ್ಯರು
- ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್– ಸದಸ್ಯರು
- ಜಿಲ್ಲೆಯ ಪ್ರಮುಖ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ – ಸದಸ್ಯರು
- ಜಿಲ್ಲಾ ರೂಡ್ ಸೆಟ್ಟಿಯ ಪ್ರತಿನಿಧಿ – ಸದಸ್ಯರು
- ಜಿಲ್ಲೆಯ ಕೃಷಿವಿಜ್ಞಾನ ಕೇಂದ್ರದ ಪ್ರತಿನಿಧಿ – ಸದಸ್ಯರು
- ಜಿಲ್ಲೆಯ ಅಭಿವೃದ್ಧಿ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು – ಸದಸ್ಯರು

ಜಿಲ್ಲಾ ಪಂಚಾಯತ್ ಸಿ.ಇ.ಓ. ರವರಿಂದ ನಾಮನಿರ್ದೇಶನಗೊಂಡ ಇಬ್ಬರು ತಾಂತ್ರಿಕ ತಜ್ಞರು ಈ ಸಮಿತಿಯ ಸದಸ್ಯರುಗಳಾಗಿರುತ್ತಾರೆ.

### ಸಮಿತಿಯ ಕಾರ್ಯಗಳು:

ಈ ತಜ್ಞರ ಸಮಿತಿಯು 3 ತಿಂಗಳಿಗೊಮ್ಮೆ ಅಥವಾ ಅಗತ್ಯಕ್ಕನುಗುಣವಾಗಿ ಸಭೆ ನಡೆಸಬಹುದು. ಜಿಲ್ಲೆಯಲ್ಲಿನ ಭೌಗೋಳಿಕ ಹಾಗೂ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಜಿಲ್ಲೆಯಲ್ಲಿ ಕೈಗೊಳ್ಳ ಬಹುದಾದ ಕೃಷಿ ಮತ್ತು ಕೃಷಿಯೇತರ ಆದಾಯೋತ್ಪನ್ನ ಚಟುವಟಿಕೆಗಳನ್ನು ತಜ್ಞರ ಸಮಿತಿಯು ಗುರುತಿಸಬೇಕು. ಜಿಲ್ಲಾ ಮಟ್ಟದಲ್ಲಿನ ಕಾರ್ಯಕ್ರಮ ಬೆಂಬಲ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಲಹೆ ನೀಡಬೇಕಾಗಿರುತ್ತದೆ. ಯುವಜನರು ಕೈಗೊಳ್ಳುವ ಚಟುವಟಿಕೆಗಳಿಗೆ ಪೂರಕವಾಗಿ ಯೋಜನೆ ತಯಾರಿಕೆ, ಮಾರುಕಟ್ಟೆ ಸೌಲಭ್ಯ ಕುರಿತು ಮಾರ್ಗದರ್ಶನ ನೀಡುವುದು ತಜ್ಞರ ಸಮಿತಿಯ ಜವಾಬ್ದಾರಿಯಾಗಿದೆ.

### ಅಂಕಿ ಅಂಶಗಳ ಸಂಗ್ರಹಣೆ ಮತ್ತು ಮೇಲ್ವಿ ಚಾರಣಾ ತಂತ್ರಾಂಶದ ಅಭಿವೃದ್ಧಿ

ಯೋಜನೆಯಲ್ಲಿನ ಸಂಪೂರ್ಣ ಮಾಹಿತಿ ಯನ್ನು ಗಣಕಿರಣಗೊಳಿಸಲು ಮತ್ತು ಮೇಲ್ವಿ ಚಾರಣೆಗಾಗಿ ವಿಶಿಷ್ಟವಾದ ತಂತ್ರಾಂಶವನ್ನು ಅಳವಡಿಸ ಲಾಗುತ್ತಿದೆ. ಈ ತಂತ್ರಾಂಶ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಮುಖಾಂತರ ಸಂಸ್ಥೆಯನ್ನು ಗುರುತಿಸಲಾಗುವುದು. ಅಲ್ಲದೆ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವೆಬ್‌ಸೈಟ್‌ನೊಂದಿಗೆ ಈ ತಂತ್ರಾಂಶ ಜೋಡಣೆ ಮಾಡಲಾಗುತ್ತದೆ.

### ಕಾರ್ಯಕ್ರಮದ ಬೆಂಬಲ ಸಂಸ್ಥೆಗಳನ್ನು ಗುರುತಿಸುವುದು :

ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯನ್ನು ಜಿಲ್ಲೆಯಲ್ಲಿ ಹೋಬಳಿ/ಬ್ಲಾಕ್ ಮಟ್ಟದಲ್ಲಿ ಜಾರಿಗೊಳಿಸಲು ಸ್ವಯಂಸೇವಾ ಸೇವಾ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತದೆ. ಜಿಲ್ಲಾ ಪಂಚಾಯಿತಿಯು ಈ ಸಂಬಂಧ ಕಾರ್ಯಕ್ರಮದ ಬೆಂಬಲ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಆಸಕ್ತಿಯುಳ್ಳ ಸ್ವಯಂಸೇವಾ ಸೇವಾ ಸಂಸ್ಥೆಗಳನ್ನು ಯೋಜನೆಯ ಮಾರ್ಗಸೂಚಿಗೆ ಅನುಗುಣವಾಗಿ ಗುರುತಿಸಬೇಕು. ಆಯ್ಕೆಯ ನಂತರ ಬೆಂಬಲ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಸ್ವಯಂಸೇವಾ ಸೇವಾ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯತ್ ನಡುವೆ ಒಪ್ಪಂದ ಮಾಡಿಕೊಂಡು ಕಾರ್ಯನಿರ್ವಹಿಸಲಾಗುತ್ತದೆ.

### ಕಾರ್ಯಕ್ರಮದ ಬೆಂಬಲ ಸಂಸ್ಥೆಗೆ ತರಬೇತಿ

ಕಾರ್ಯಕ್ರಮ ಬೆಂಬಲ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಯೋಜನೆಯ ಕುರಿತ ಸಮಗ್ರ ಮಾಹಿತಿ, ಅನುಷ್ಠಾನ ದಲ್ಲಿನ ಕಾರ್ಯ ತಂತ್ರಗಳು ಮತ್ತು ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಅರ್ಥೈಸಲು ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುವುದು.

### ಕಾರ್ಯಕ್ರಮ ಬೆಂಬಲ ಸಂಸ್ಥೆಗಳ ಪಾತ್ರ

ಕಾರ್ಯಕ್ರಮ ಬೆಂಬಲ ಸಂಸ್ಥೆಯು ಯೋಜನೆ ಕುರಿತು ಗ್ರಾಮಗಳಲ್ಲಿ ಗ್ರಾಮ ಪಂಚಾಯತಿ ಸಹಯೋಗದಲ್ಲಿ ಜಾಗೃತಿ ಮೂಡಿಸುತ್ತದೆ. ಯುವಕರ ಭಾಗವಹಿಸುವಿಕೆ ಮತ್ತು ಯೋಜನೆಯ ಫಲಾನು ಭವಿಗಳನ್ನು ಗುರುತಿಸಲು ಸಂಸ್ಥೆಯು ಗ್ರಾಮ ಪಂಚಾಯಿತಿಗೆ ನೆರವು ನೀಡುತ್ತದೆ. ಗ್ರಾಮ ಸಭೆಗಳಲ್ಲಿ ಭಾಗವಹಿಸುವುದು, ಯೋಜನೆಯ ಫಲಾನುಭವಿಗಳ ಗುರುತಿಸುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು, ಯುವಕರಿಗೆ ಮಾಹಿತಿ ತರಬೇತಿಯನ್ನು ಆಯೋಜಿಸುವುದು ಸೇರಿದಂತೆ ಯೋಜನೆಯ ಎಲ್ಲಾ ಹಂತದಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ಅನುಷ್ಠಾನ ಸಮಿತಿಗಳಿಗೆ ಅಗತ್ಯ ನೆರವು ನೀಡುವ ಕಾರ್ಯಕ್ರಮವನ್ನು ಬೆಂಬಲ ಸಂಸ್ಥೆಯು ನಿರ್ವಹಿಸಬೇಕು.

### ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ

ಯೋಜನೆಯ ಸಮರ್ಪಕ ಅನುಷ್ಠಾನವಾಗ ಬೇಕಾದರೆ ಮಾನವ ಸಂಪನ್ಮೂಲದ ಸದ್ಬಳಕೆ ಅತ್ಯಗತ್ಯವಾಗಿದೆ. ಹಾಗಾಗಿ ಈ ಯೋಜನೆಯ ಜಾರಿಯಲ್ಲಿ ಮಾನವ ಸಂಪನ್ಮೂಲದ ಸಮರ್ಪಕ

ಬಳಕೆಗೆ ಒತ್ತು ನೀಡಲಾಗಿದೆ. ಗ್ರಾಮ ಪಂಚಾಯಿತಿ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ 2 ಗ್ರಾಮ ಪಂಚಾಯಿತಿಗಳಿಗೆ ಒಬ್ಬರಂತೆ ಸಮುದಾಯ ಸಂಪನ್ಮೂಲ ವ್ಯಕ್ತಿ (ಸಿ.ಆರ್.ಪಿ.)ಗಳನ್ನು ಆಯ್ಕೆ ಮಾಡಲಾಗುವುದು. ಈ ಸಮುದಾಯದ ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗುರುತಿಸಿದ ನೂರು ಯುವಕರಿಗೆ ಉದ್ಯೋಗ ಕಲ್ಪಿಸಲು ಬೇಕಾದ ಎಲ್ಲಾ ರೀತಿಯ ಸಹಕಾರ ನೀಡಬೇಕು. ಯೋಜನೆಯ ಅನುಷ್ಠಾನದಲ್ಲಿ ಇವರು ಪ್ರಮುಖ ಪಾತ್ರವನ್ನು ವಹಿಸಬೇಕು ಎನ್ನುವ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

## ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಆಯ್ಕೆಗೆ ಅರ್ಹತೆಗಳು

- ಪುರುಷ ಅಭ್ಯರ್ಥಿಯಾಗಿರಬೇಕು ಮತ್ತು ಹೋಬಳಿ ವ್ಯಾಪ್ತಿಯ ನಿವಾಸಿಯಾಗಿರಬೇಕು.
- ಪದವೀಧರರಾಗಿರಬೇಕು ಅಥವಾ ಕನಿಷ್ಠ 2 ವರ್ಷ ಗ್ರಾಮ ಪಂಚಾಯಿತಿ ಮತ್ತು ಸಮುದಾಯದೊಂದಿಗೆ ಕಾರ್ಯನಿರ್ವಹಿಸಿರುವ ಅನುಭವವಿರಬೇಕು.
- ಸಮುದಾಯ ಸಂಘಟನೆ ಮಾಡುವ ಮತ್ತು ಗುಂಪು ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಉದ್ಯೋಗ ಮತ್ತು ಉದ್ಯಮಶೀಲತೆಯ ಕೌಶಲ್ಯಗಳನ್ನು ಹೊಂದಿರಬೇಕು.
- ಗಣಕಯಂತ್ರ ಜ್ಞಾನವಿರಬೇಕು. ಉತ್ತಮ ಹಿನ್ನೆಲೆಯವರಾಗಿದ್ದು, ಸಂವಹನ ಕೌಶಲ್ಯ ಹೊಂದಿರಬೇಕು.

## ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ :

ಕಾರ್ಯಕ್ರಮ ಬೆಂಬಲ ಸಂಸ್ಥೆಯು ಮುಖಾಂತರ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ಯೋಜನೆ ಕುರಿತ ವಿವರವಾದ ಮಾಹಿತಿಯನ್ನು ನೀಡಲು ತರಬೇತಿಗಳನ್ನು ಆಯೋಜಿಸಲಾಗುವುದು. ಯೋಜನೆಯ ಅನುಷ್ಠಾನದಲ್ಲಿ ಅವರ ಪಾತ್ರ ಮತ್ತು ಹೊಣೆಗಾರಿಕೆಯನ್ನು ಮನದಟ್ಟು ಮಾಡಿದ ನಂತರ ಅವರ ಸೇವೆಯನ್ನು ಬಳಸಿಕೊಳ್ಳಲಾಗುವುದು..

## ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಜವಾಬ್ದಾರಿಗಳು:

ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾದ ಯುವಕರನ್ನು ಗುರುತಿಸಲು ಅವರು ಗ್ರಾಮ ಪಂಚಾಯಿತಿ ಮತ್ತು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಗೆ ನೆರವಾಗಬೇಕು. ಯುವಕರ ಗುಂಪುಗಳನ್ನು ರಚಿಸಿಕೊಳ್ಳಲು ಮತ್ತು ಸಮಾನ ಹೊಣೆಗಾರಿಕೆ ಗುಂಪುಗಳನ್ನು ರಚಿಸಿಕೊಳ್ಳಲು ಮಾರ್ಗದರ್ಶನ ಮತ್ತು ಬೆಂಬಲ ನೀಡಬೇಕು. ಗುಂಪುಗಳಲ್ಲಿ ಉಳಿತಾಯ ಮಾಡುವ, ನಿಯಮಿತವಾಗಿ ಸಭೆಗಳನ್ನು ಆಯೋಜಿಸುವ ಮತ್ತು ಸಮಾನ ಮನಸ್ಕರಾಗಿ ಕಾರ್ಯನಿರ್ವಹಿಸುವಂತೆ ಮಾರ್ಗದರ್ಶನ ನೀಡುವುದು. ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಜವಾಬ್ದಾರಿಯಾಗಿರುತ್ತದೆ.

ಜೊತೆಗೆ ಯೋಜನೆಯ ಸೌಲಭ್ಯವನ್ನು ಪಡೆಯಲು ಗುರುತಿಸಿರುವ ಯುವಕರಿಗೆ ಸ್ವ-ಉದ್ಯೋಗ ಕೈಗೊಳ್ಳಲು ಅವಶ್ಯಕತೆ ಇರುವ ತರಬೇತಿ ಕಾರ್ಯಕ್ರಮಗಳನ್ನು ಅಯೋಜಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ, ಹಣಕಾಸು ಸಂಸ್ಥೆ ಮತ್ತು ರುಡ್‌ಸೆಟ್ /ಕೃಷಿ ವಿಜ್ಞಾನ ಕೇಂದ್ರಗಳ ಜೊತೆ ಸಮನ್ವಯ ಸಾಧಿಸಬೇಕಿದೆ. ಯೋಜನಾ ಸಂಬಂಧಿ ಸಂಘಟಿಸಲಾಗುವ ಗ್ರಾಮ ಸಭೆ, ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಸಭೆಯಲ್ಲಿ ಭಾಗವಹಿಸಬೇಕು. ಯೋಜನೆಯ ಅನುಷ್ಠಾನದ ಪ್ರಗತಿಯ ವರದಿಯನ್ನು ದಾಖಲೀಕರಣ ಮಾಡಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ಸಲ್ಲಿಸುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆ.

## ಅರ್ಹ ಯುವಕರ ಸಭೆಗಳ ಆಯೋಜನೆ :

ಯೋಜನೆ ಸಂಬಂಧ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕ್ರಮ ಬೆಂಬಲ ಸಂಸ್ಥೆಯು ಸಮುದಾಯ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಗ್ರಾಮ ಮಟ್ಟದಲ್ಲಿ ಅರ್ಹಯುವಕರ ಸಭೆಗಳನ್ನು ಆಯೋಜಿಸುತ್ತದೆ.. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಯುವಕರ ಸಭೆಗಳನ್ನು ನಡೆಸಿ ಮಾಹಿತಿ ನೀಡುತ್ತದೆ. ಈ ಸಭೆಗಳಲ್ಲಿ ಗ್ರಾಮ ಪಂಚಾಯಿತಿಯ ಹಾಲಿ ಚುನಾಯಿತ ಸದಸ್ಯರು ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳು ಹಾಜರಾಗುವಂತೆ ನೋಡಿಕೊಳ್ಳಬೇಕು. ಇಂತಹ ಸಭೆಯಲ್ಲಿಯೇ

ಯೋಜನೆಯ ಸೌಲಭ್ಯ ಪಡೆಯಬಹುದಾದ ಸಂಭವನೀಯ ಯುವಕರ ಅಂದಾಜು ಪಟ್ಟಿಯನ್ನು ಸಿದ್ದಪಡಿಸಬೇಕು.

## ಗ್ರಾಮ ಸಭಾ ಆಯೋಜನೆ :

ಫಲಾನುಭವಿಗಳ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಬೇಕಿರುತ್ತದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯು ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯತ್ ಅಧಿಕಾರಿಗಳ ಮುಖಾಂತರ ನಿರುದ್ಯೋಗಿ ಯುವಕರನ್ನು ಗುರುತಿಸಲು ಸಲುವಾಗಿ ವಿಶೇಷ ಗ್ರಾಮ ಸಭೆಯನ್ನು ಅಯೋಜಿಸಲು ಕ್ರಮವಹಿಸಬೇಕು. ವಿಶೇಷ ಗ್ರಾಮ ಸಭೆಯಲ್ಲಿ ಈಗಾಗಲೇ ಸಮುದಾಯ ವ್ಯಕ್ತಿ (CRP) ಮತ್ತು ಗ್ರಾಮ ಪಂಚಾಯತ್ ನೆರವಿನಿಂದ ಸಿದ್ದಪಡಿಸಿರುವ ಯೋಜನೆಯ ಸೌಲಭ್ಯ ಪಡೆಯಲು ಅರ್ಹತೆ ಇರುವ ಅಭ್ಯರ್ಥಿಗಳ ಪಟ್ಟಿಯನ್ನು ಮಂಡಿಸಬೇಕು. ಚರ್ಚೆ, ವಿಚಾರ ವಿಮರ್ಶೆಯ ನಂತರ ಸೂಕ್ತ ಅಭ್ಯರ್ಥಿಗಳ ಪಟ್ಟಿಯನ್ನು ಗ್ರಾಮ ಸಭೆ ಅನುಮೋದಿಸಬೇಕು.

## ಸೌಲಭ್ಯ ಪಡೆಯುವ ಅರ್ಹತೆಗಳು

- ಈ ಯೋಜನೆಯ ಸೌಲಭ್ಯವು 18 ರಿಂದ 35 ವರ್ಷ ವಯೋಮಾನದ ಪುರುಷರಿಗಷ್ಟೇ ಮೀಸಲಾಗಿರುತ್ತದೆ.
- ಅಭ್ಯರ್ಥಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿಯಾಗಿರಬೇಕು.
- ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳು ಅನ್ವಯಿಸುತ್ತದೆ
- ಆಯ್ಕೆಯಾದ ಯುವಕರು ಒಂದು ತಂಡವಾಗಿ ಕಾರ್ಯನಿರ್ವಹಿಸುವ ಮನೋಭಾವ ಹೊಂದಿರುವವರಾಗಿರಬೇಕು.
- ಸ್ವ ಉದ್ಯೋಗ ಕೈಗೊಳ್ಳುವ ಮತ್ತು ಉದ್ಯಮ ಶೀಲತೆಯ ಲಕ್ಷಣಗಳನ್ನು ಹೊಂದಿರಬೇಕು.
- ಆಯ್ಕೆಯಾದ ಯುವಕರು ಕಡ್ಡಾಯವಾಗಿ ತರಬೇತಿಯಲ್ಲಿ ಪಾಲ್ಗೊಳ್ಳಬೇಕು.
- ಉತ್ತಮ ಚಾರಿತ್ರ್ಯ ಮತ್ತು ಹಿನ್ನಲೆಯುಳ್ಳವರಾಗಿರಬೇಕು
- ಆಯ್ಕೆಯಾದ ಯುವಕರು ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯ ನಿಯಮ ನಿಬಂಧನೆಗಳಿಗೆ ಬದ್ದರಾಗಿರಬೇಕು

## ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಮಿತಿ

ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸಲಾಗುವುದು. ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯ ಸೌಲಭ್ಯವನ್ನು ಪಡೆಯುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಮಾಡಲಾಗುತ್ತದೆ. ಈ ಪಟ್ಟಿಯನ್ನು ಗ್ರಾಮ ಸಭೆಯಲ್ಲಿ ಮಂಡಿಸಬೇಕು. ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಯುವಕರು ಮತ್ತು ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಮಿತಿ ಕಳುಹಿಸಬೇಕಾಗಿರುತ್ತದೆ. ಸಮಿತಿಯ ವಿವರ ಈ ಮುಂದಿನಂತಿದೆ

- ತಾಲ್ಲೂಕು ಪಂಚಾಯತಿ ಅಧ್ಯಕ್ಷರು : ಅಧ್ಯಕ್ಷರು
- ತಾಲ್ಲೂಕು ಪಂಚಾಯತ್ ಉಪಾಧ್ಯಾಕ್ಷರು : ಉಪಾಧ್ಯಕ್ಷರು
- ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು : ಸದಸ್ಯ ಕಾರ್ಯದರ್ಶಿ
- ತಾಲ್ಲುಕು ಮಟ್ಟದ ಅಧಿಕಾರಿಗಳು : ಸದಸ್ಯರು

  (ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಕೈಗಾರಿಕೆ ಮತ್ತು ಸಮಾಜ ಕಲ್ಯಾಣ)

## ಸಮಿತಿಯ ಕಾರ್ಯ ವಿಧಾನ

ಪ್ರತಿ ತಿಂಗಳಿಗೊಮ್ಮೆ ಈ ಸಮಿತಿಯು ಸಭೆ ಸೇರುತ್ತದೆ. ಈ ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ವಹಿಸುತ್ತಾರೆ. ತಾಲ್ಲೂಕಿನ ಸಾಮಾಜಿಕ ಮತ್ತು ಭೌಗೋಳಿಕ ಪರಿಸ್ಥಿತಿಗೆ ಅನುಗುಣವಾಗಿ ಕೈಗೊಳ್ಳಬಹುದಾದ ಸ್ವಯಂ ಉದ್ಯೋಗ ಚಟುವಟಿಕೆಗಳು ಮತ್ತು ಉತ್ಪನ್ನಗಳ ಮಾರುಕಟ್ಟೆಗೆ ಲಭ್ಯವಿರುವ ವ್ಯವಸ್ಥೆಯ ಕುರಿತು ಸಮಿತಿಯು ಪರಾಮರ್ಶೆ ನಡೆಸಬೇಕು. ತಾಲ್ಲೂಕು ಮಟ್ಟದ ಇಲಾಖೆಗಳಿಂದ ಸಿಗಬಹುದಾದ ತಾಂತ್ರಿಕ ಬೆಂಬಲ ಲಭ್ಯತೆಯನ್ನು ಗುರುತಿಸಬೇಕು. ತಾಲ್ಲೂಕಿನಲ್ಲಿ

ಕೈಗೊಳ್ಳಲು ಸಾಧ್ಯವಾಗದ ಪ್ರಸ್ತಾವಿತ ಸ್ವಯಂ ಉದ್ಯೋಗ ಉದ್ದಿಮೆಗಳು ಅಥವಾ ಅನರ್ಹ ಫಲಾನುಭವಿಗಳು ಆಯ್ಕೆಯು ಕಂಡು ಬಂದಲ್ಲಿ ಪಂಚಾಯಿತಿಗೆ ವಾಪಸ್ಸು ಕಳುಹಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಸತ್ಯಾಪನೆಗಾಗಿ ತಾಲ್ಲೂಕು ಮಟ್ಟದಲ್ಲಿ ಪ್ರಗತಿ ಪರಿಶೀಲನಾ ಸಮಿತಿಯು ಪರಿಶೀಲಿಸಿ ಅಂತಿಮಗೊಳಿಸಲಾದ "ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ"ಯ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕು.

## ತಾಲ್ಲೂಕು ಮಟ್ಟದ ಬ್ಯಾಂಕರುಗಳ ಸಮಿತಿ

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ಬ್ಯಾಂಕರುಗಳ ಸಮಿತಿಯನ್ನು ರಚಿಸಲಾಗುವುದು. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ಸಮಿತಿಯ ಸದಸ್ಯರ ವಿವರ ಈ ಕೆಳಕಂಡಂತಿದೆ.

- ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರು : ಅಧ್ಯಕ್ಷರು
- ಎಲ್ಲಾ ರೀತಿಯ (ರಾಷ್ಟ್ರೀಕೃತ ಗ್ರಾಮೀಣ ಮತ್ತು ಸಹಕಾರಿ ಬ್ಯಾಂಕುಗಳು ಶಾಖಾ ವ್ಯವಸ್ಥಾಪಕರುಗಳು) : ಸದಸ್ಯರು
- ಲೀಡ್ ಬ್ಯಾಂಕ್ ಮ್ಯಾನೇಜರ್ : ಸದಸ್ಯರು
- ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು (ನಬಾರ್ಡ್) : ಸದಸ್ಯರು
- ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು : ಸದಸ್ಯರು
- ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು : ಸದಸ್ಯ ಕಾರ್ಯದರ್ಶಿ

ಈ ಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಸಭೆ ನಡೆಸುತ್ತದೆ. ಬ್ಯಾಂಕ್ ಜೋಡಣೆಗೆ (ಲಿಂಕೇಜ್) ಸಂಬಂಧಿಸಿದ ಎಲ್ಲಾ ರೀತಿಯ ವಿಷಯಗಳನ್ನು ಕುರಿತು ಸಮಿತಿಯು ಚರ್ಚಿಸಿ ಸಲಹೆ ನೀಡುತ್ತದೆ.

## ಆಯ್ಕೆಯಾದ ಯುವಕರಿಗೆ ಪ್ರಾಥಮಿಕ ಹಂತದ ತರಬೇತಿ ಕಾರ್ಯಕ್ರಮ

ಕಾರ್ಯಕ್ರಮ ಬೆಂಬಲ ಸಂಸ್ಥೆ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಆಯ್ಕೆಯಾದ ಯುವಕರಿಗೆ ಗ್ರಾಮ ಪಂಚಾಯತಿ ಅಥವಾ ಗ್ರಾಮ ಮಟ್ಟದಲ್ಲಿ 2 ದಿನಗಳ ಅವಧಿಯ ಉದ್ಯಮ ಶೀಲತೆ ಕುರಿತಾದ ಅಭಿವೃದ್ಧಿ ಕುರಿತಾದ ಪ್ರಾಥಮಿಕ ತರಬೇತಿಯನ್ನು ಆಯೋಜನೆ ಮಾಡುತ್ತಾರೆ. ಈ ಸಮಿತಿಯು ಯುವಕರಲ್ಲಿ ಉದ್ಯಮ ಶೀಲತೆಯನ್ನು ಪ್ರೇರೇಪಿಸಲು ಮತ್ತು ಸೂಕ್ತವಾದ ಚಟುವಟಿಕೆಯನ್ನು ಆಯ್ಕೆ ಮಾಡಲು ಮಾರ್ಗದರ್ಶನವನ್ನು ನೀಡುತ್ತದೆ.

## ಜಂಟಿ ಪಾಲುದಾರ / ಹೊಣೆಗಾರಿಕೆ ಗುಂಪುಗಳ ರಚನೆ :

ಈ ತರಬೇತಿಯ ನಂತರ 5 ಜನರ ಯುವಕರನ್ನು ಸೇರಿಸಿ ಜಂಟಿ ಹೊಣೆಗಾರಿಕೆ ಗುಂಪು (ಜೆ.ಎಲ್.ಜಿ.) ಗಳನ್ನು ರಚಿಸಲಾಗುತ್ತದೆ. ಜಂಟಿ ಹೊಣೆಗಾರಿಗೆ ಗುಂಪಿನ 5 ಜನ ಸದಸ್ಯರು ಒಂದೇ ಉದ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು ಅಥವಾ 5 ಜನ ಪ್ರತ್ಯೇಕವಾದ ಉದ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು. ನಂತರ ಬ್ಯಾಂಕು/ ಹಣಕಾಸು ಸಂಸ್ಥೆಗಳಲ್ಲಿ ಉಳಿತಾಯ ಖಾತೆ ತೆರೆಯಲು ಬೇಕು ಹಾಗೂ ನಿಗಧಿಗೊಳಿಸಿದ ಸ್ಥಳಗಳಲ್ಲಿ ವಾರಕ್ಕೊಮ್ಮೆ ಸಭೆ ಸೇರಬೇಕು. ಜಂಟಿ ಹೊಣೆಗಾರಿಕೆ ಗುಂಪಿನ ಸದಸ್ಯರಿಗೆ ಬ್ಯಾಂಕ್ ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಉದ್ಯಮ ಆರಂಭಿಸಲು ಬೇಕಾದ ಸಾಲ ಸೌಲಭ್ಯವನ್ನು ಒದಗಿಸಲಾಗುವುದು. ಈ ಎಲ್ಲಾ ಪ್ರಕ್ರಿಯೆಗಳಿಗೆ ಕಾರ್ಯಕ್ರಮ ಬೆಂಬಲ ಸಂಸ್ಥೆಯು ಅಗತ್ಯ ಸಹಕಾರ ನೀಡಬೇಕು.

ಜಂಟಿ ಹೊಣೆಗಾರಿಕೆ ಗುಂಪುಗಳ ರಚನೆ ಮತ್ತು ಅವರು ಆರಂಭಿಸುವ ಉದ್ಯಮಗಳ ಆಯ್ಕೆಯಾದ ನಂತರ ಈ ವಿವರಗಳನ್ನು ಮೇಲ್ವಿಚಾರಣಾ ತಂತ್ರಾಂಶಕ್ಕೆ ಅಳವಡಿಸಲು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯಿತಿಗೆ ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯು ಕಳುಹಿಸಿಕೊಡಬೇಕಾಗುತ್ತದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಚಿಸಲಾಗುವ ಜಂಟಿ ಹೊಣೆಗಾರಿಕಾ ಗುಂಪುಗಳಿಗೆ ಮತ್ತು ಅದರ ಮಾರ್ಗದರ್ಶನ ಮತ್ತು ಬೆಂಬಲ ನೀಡಲು ಕಾರ್ಯಕ್ರಮ ಬೆಂಬಲ ಸಂಸ್ಥೆಗೆ ಅನುದಾನ ನೀಡಲಾಗುವುದು. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ 8–10 ಗುಂಪುಗಳನ್ನು ರಚನೆಯ ಗುರಿಯನ್ನು ಹೊಂದಿದೆ. ಆ ಮೂಲಕ ರಾಜ್ಯಾದ್ಯಂತ ಸುಮಾರು 40 ಸಾವಿರ ಗುಂಪುಗಳ ಮೂಲಕ 2 ಲಕ್ಷ ಯುವಕರನ್ನು ಯೋಜನೆ ವ್ಯಾಪ್ತಿಗೆ ತರಲು ಉದ್ದೇಶಿಸಿದೆ.

## ವೃತ್ತಿ ತರಬೇತಿಗಳು

ಯುವಕರು ಆಯ್ಕೆ ಮಾಡಿದ ಉದ್ಯಮ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪೂರಕವಾದ ತರಬೇತಿಗಳನ್ನು ನೀಡಲಾಗುತ್ತದೆ. ಈ ತರಬೇತಿಗಳನ್ನು ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳು ಸೇರಿದಂತೆ ರುಡ್ ಸೆಟ್‌ಗಳ ಮುಖಾಂತರ ಆಯೋಜಿಸಲಾಗುವುದು. ಜಿಲ್ಲಾ ಮಟ್ಟದಲ್ಲಿನ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯ ತಜ್ಞರ ಸಮಿತಿಯು ತರಬೇತಿಯ ಅವಧಿಯನ್ನು(ಕನಿಷ್ಟ 6 ದಿನಗಳು ಗರಿಷ್ಟ 3 ತಿಂಗಳು) ತೀರ್ಮಾನಿಸುತ್ತದೆ. ತರಬೇತಿಯನ್ನು ಆಯೋಜಿಸಲು ಅವಶ್ಯವಿರುವ ಅನುದಾನವನ್ನು ಜಿಲ್ಲಾ ಪಂಚಾಯತ್ ಮುಖಾಂತರ ನಿಗದಿಪಡಿಸಿದ ದರದನ್ವಯ ತರಬೇತಿ ಸಂಸ್ಥೆಗೆ ನೀಡಲಾಗುತ್ತದೆ. ಈ ಸಂಬಂಧ ತರಬೇತಿ ಸಂಸ್ಥೆಯೊಂದಿಗೆ ಜಿಲ್ಲಾ ಪಂಚಾಯತ್ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ.

## ಯೋಜನಾ ಪ್ರಸ್ತಾವನೆಗಳ ತಯಾರಿಕೆ

ಯಾವುದೇ ಉದ್ಯಮಗಳ ಆರಂಭಕ್ಕೆ ಯೋಜನಾ ಪ್ರಸ್ತಾವನೆ ಸಿದ್ದಪಡಿಸುವುದು ಅತ್ಯಗತ್ಯ. ಗುಣಮಟ್ಟದ ಯೋಜನಾ ಪ್ರಸ್ತಾವನೆಗಳ ಆಧಾರದಲ್ಲಿಯೇ ಹಣಕಾಸು ಸಂಸ್ಥೆಗಳು ಹಣಕಾಸಿನ ನೆರವನ್ನು ಒದಗಿಸುತ್ತದೆ.

ಈ ನಿಟ್ಟಿನಲ್ಲಿ ಕಾರ್ಯಕ್ರಮ ಬೆಂಬಲ ಸಂಸ್ಥೆಯು ಜಂಟಿ ಹೊಣೆಗಾರಿಕಾ ಗುಂಪುಗಳಲ್ಲಿನ ಯುವಕರು ಕೃಷಿ ಮತ್ತು ಕೃಷಿಯೇತರ ವಲಯದಲ್ಲಿನ ಉದ್ಯಮ ಚಟುವಟಿಕೆಗಳನ್ನು ಕೈಗೊಳ್ಳಲು ಬೆಂಬಲ ನೀಡುತ್ತದೆ. ವೃತ್ತಿ ತರಬೇತಿ ಪಡೆದ ನಂತರ ಆಯ್ಕೆ ಮಾಡಿದ ಉದ್ಯಮಕ್ಕೆ ಸಂಬಂಧಿಸಿದ ಯೋಜನಾ ಪ್ರಸ್ತಾವನೆಯನ್ನು 2 ವಾರಗಳ ಒಳಗೆ ತಯಾರಿಸಲು ಬೆಂಬಲ ಸಂಸ್ಥೆಯು ನೆರವು ನೀಡಬೇಕು. ಜಂಟಿ ಪಾಲುದಾರರ ಗುಂಪು ತಯಾರಿಸಿದ ಯೋಜನಾ ಪ್ರಸ್ತಾವನೆಗಳಿಗೆ ಜಿಲ್ಲಾ ಮಟ್ಟದ ತಜ್ಞರ ಸಮಿತಿಯಿಂದ ಅನುಮೋದನೆ ಪಡೆಯಬೇಕು. ಆ ನಂತರವೇ ಅದನ್ನು ಹಣಕಾಸು ಸಂಸ್ಥೆಗಳಿಗೆ ಕಳಿಸಬೇಕು.

## ಬ್ಯಾಂಕ್ ಮತ್ತು ಇತರ ಸಂಸ್ಥೆಯೊಂದಿಗೆ ಹಣಕಾಸು ಜೋಡಣೆ

ಜಂಟಿ ಹೊಣೆಗಾರಿಕಾ ಗುಂಪುಗಳಲ್ಲಿನ ಯುವಕರು ವೃತ್ತಿ ತರಬೇತಿಗಳನ್ನು ಪಡೆದ ನಂತರ ಉದ್ಯಮ ಆರಂಭಕ್ಕೆ ಹಣಕಾಸು ಸೌಲಭ್ಯವನ್ನು ಒದಗಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯಕ್ರಮ ಬೆಂಬಲ ಸಂಸ್ಥೆಗಳ ಪ್ರತಿನಿಧಿಗಳು, ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು, ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಹಾಗೂ ಎಲ್ಲಾ ವಾಣಿಜ್ಯ ಮತ್ತು ಗ್ರಾಮೀಣ ಪ್ರಾದೇಶಿಕ ಹಾಗೂ ಸಹಕಾರಿ ಬ್ಯಾಂಕುಗಳು, ನಗರ ಸಹಕಾರಿ ಬ್ಯಾಂಕುಗಳ ಜಿಲ್ಲಾ ನಿಯಂತ್ರಕರು ಹಾಗೂ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಭೆಯನ್ನು ಆಯೋಜಿಸಬೇಕು.

ಈ ಸಭೆಯಲ್ಲಿ ಯೋಜನೆ ಕುರಿತು ಮಾಹಿತಿಯನ್ನು ನೀಡುವುದಲ್ಲದೇ, ಯುವಕರಿಗೆ ಅಗತ್ಯವಾದ ಹಣಕಾಸು ನೆರವು ನೀಡುವಂತೆ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಸಭೆಯಲ್ಲಾದ ನಿರ್ಣಯಗಳನ್ನು ಜಾರಿಗೊಳಿಸಲು ಪೂರಕವಾಗಿ ಸುತ್ತೋಲೆಗಳನ್ನು ಎಲ್ಲಾ ಬ್ಯಾಂಕುಗಳ ಶಾಖೆಗಳಿಗೆ ಹೊರಡಿಸುತ್ತಾರೆ.

ಜಿಲ್ಲಾ ಪಂಚಾಯತ್‌ನಲ್ಲಿ "ಯುವ ಚೈತನ್ಯ" ನಿಧಿಯನ್ನು ಸ್ಥಾಪಿಸಲಾಗುತ್ತದೆ. ಒಂದು ಜಂಟಿ ಪಾಲುದಾರ ಗುಂಪಿಗೆ ರೂ.25 ಸಾವಿರ ಅಥವಾ ಜಂಟಿ

ಪಾಲುದಾರ ಗುಂಪಿನ ಒಬ್ಬ ಸದಸ್ಯರಿಗೆ 5,000/– ರೂಪಾಯಿಗಳನ್ನು ಸಹಾಯ ಧನದ ರೀತಿಯಲ್ಲಿ ನೀಡಲಾಗುವುದು. ಈ ಸಹಾಯ ಧನದ ಮೊತ್ತವನ್ನು ಹಣಕಾಸು ಸಂಸ್ಥೆಗೆ ನೀಡಲಾಗುತ್ತದೆ. ಈ ಯೋಜನೆಯಲ್ಲಿ ಒಬ್ಬರಿಗೆ ಉದ್ಯಮ ಆರಂಭಿಸಲು ಗರಿಷ್ಠ 1 ಲಕ್ಷದವರೆಗೆ ಸಾಲವನ್ನು ಪಡೆಯಲು ಅವಕಾಶವಿರುತ್ತದೆ.

### ಉದ್ದಿಮೆಗಳ ಸ್ಥಾಪನೆ :

ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುವ ಕಾರ್ಯಕ್ರಮ ಬೆಂಬಲ ಸಂಸ್ಥೆಯು ಯುವಕರಿಗೆ ಉದ್ಯಮ ಆರಂಭಿಸಲು ಬೇಕಾದ ಎಲ್ಲಾ ರೀತಿಯ ಪ್ರಕ್ರಿಯೆಗಳಿಗೆ ಮಾರ್ಗದರ್ಶನ ಮಾಡಬೇಕು. ಉದ್ದಿಮೆ ಆರಂಭಕ್ಕೆ ಬೇಕಾದ ಹಣಕಾಸು ನೆರವು ಕೊಡಿಸಲು ನೆರವಾಗಬೇಕು. ಅಲ್ಲದೇ ಈ ಸಂಬಂಧ ನಡೆಯುವ ಎಲ್ಲಾ ಪ್ರಕ್ರಿಯಗಳ ವರದಿಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಗೆ ಮೂರು ತಿಂಗಳಿಗೊಮ್ಮೆ ಒದಗಿಸಬೇಕಾಗುತ್ತದೆ.

### ಮಾರುಕಟ್ಟೆ ಸಂಪರ್ಕ :

ಜಿಲ್ಲಾ ಮಟ್ಟದ ತಜ್ಞರ ಸಮಿತಿಯು ಮಾರುಕಟ್ಟೆಗೆ ಸಂಬಂಧಿಸಿದಂತೆ ಅಗತ್ಯ ಸಲಹೆಗಳನ್ನು ನೀಡ ಬೇಕಾಗಿರುತ್ತದೆ. ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳ ಬೇಕಾಗಿರುತ್ತದೆ. ಯುವಕರು ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯ ಸೌಲಭ್ಯವನ್ನು ಪಡೆದು ಆರಂಭಿಸಿದ ಉದ್ಯಮ ಚಟುವಟಿಕೆಗಳ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡುವ ಮೂಲಕ ಈ ಯೋಜನೆಯ ಯಶಸ್ಸಿಗೆ ಬೆಂಬಲ ಒದಗಿಸಬೇಕು.

### ಯುವಕರ ಒಕ್ಕೂಟ ರಚನೆ :

ಯೋಜನೆಯ ಸುಸ್ಥಿರತೆಗೆ ವಿಶೇಷ ಒತ್ತು ನೀಡಲಾಗಿದ್ದು. ಯುವ ಉದ್ದಿಮೆದಾರರ ಹಿತಾಸಕ್ತಿಯನ್ನು ಕಾಪಾಡಲು ಕಾರ್ಯತಂತ್ರವನ್ನು ರೂಪಿಸಲಾಗಿದೆ. ಇದರ ಭಾಗವಾಗಿ 3 ಹಂತಗಳಲ್ಲಿ ಯುವಕರ ಒಕ್ಕೂಟವನ್ನು ರಚಿಸಲಾಗುವುದು. ಈ ಒಕ್ಕೂಟಗಳು ಉದ್ಯಮಶೀಲ ಯುವಕರ ನಡುವೆ ಪರಸ್ಪರ ಕಲಿಕೆ, ಪರಸ್ಪರ ಅನುಭವಗಳ ಹಂಚಿಕೆ ಮತ್ತು ಮಾರುಕಟ್ಟೆ ಸಂಬಂಧಿ ಅವಕಾಶಗಳ ಕುರಿತು ಚರ್ಚೆಗೆ ಅವಕಾಶ ಕಲ್ಪಿಸುತ್ತದೆ. ಒಕ್ಕೂಟದ ಹಂತಗಳು ಹೀಗಿವೆ

**ಹೋಬಳಿ ಮಟ್ಟ :** ಹೋಬಳಿ ಮಟ್ಟದ ಒಕ್ಕೂಟಕ್ಕೆ ಹೋಬಳಿ ವ್ಯಾಪ್ತಿಯ ಎಲ್ಲಾ ಜಂಟಿ ಹೊಣೆಗಾರಿಕಾ ಗುಂಪಿನ ಎಲ್ಲಾ ಯುವಕರು ಸದಸ್ಯರಾಗಿರುತ್ತಾರೆ. ಪ್ರತಿ ಗ್ರಾಮ ಪಂಚಾಯಿತಿಯಿಂದ ಒಬ್ಬರನ್ನು ಒಕ್ಕೂಟಕ್ಕೆ ನಾಮ ನಿರ್ದೇಶನ ಮಾಡಬೇಕು. ಈ ಒಕ್ಕೂಟದಲ್ಲಿ 20–25 ಪ್ರತಿನಿಧಿಗಳು ಇರುತ್ತಾರೆ.

**ತಾಲ್ಲೂಕು ಮಟ್ಟ :** ಪ್ರತಿ ಹೋಬಳಿ ಮಟ್ಟದ ಒಕ್ಕೂಟಗಳಿಂದ 5 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ತಾಲ್ಲೂಕು ಮಟ್ಟದ ಒಕ್ಕೂಟಕ್ಕೆ ಕಳುಹಿಸಬೇಕು. ಈ ಸಮಿತಿಯು 15 –25 ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ.

**ಜಿಲ್ಲಾ ಮಟ್ಟದಲ್ಲಿ:** ಪ್ರತಿ ತಾಲ್ಲೂಕು ಮಟ್ಟದ 3 ಜನ ಪ್ರತಿನಿಧಿಗಳನ್ನು ಸೇರಿಸಿ ಜಿಲ್ಲಾ ಮಟ್ಟದ ಒಕ್ಕೂಟವನ್ನು ರಚನೆ ಮಾಡಲಾಗುತ್ತದೆ. ಈ ಸಮಿತಿಯು 15–20 ಪ್ರತಿನಿಧಿಗಳನ್ನು ಹೊಂದಿರುತ್ತದೆ. ಜಿಲ್ಲಾ ಮಟ್ಟದ ಒಕ್ಕೂಟವು ನೋಂದಣಿಯಾದ ಸಂಸ್ಥೆಯಾಗಿರುತ್ತದೆ. ಯೋಜನೆ ಅನುಷ್ಠಾನವಾದ 2 ವರ್ಷದಲ್ಲಿ ಒಕ್ಕೂಟಗಳ ರಚನೆ ಪೂರ್ಣಗೊಳಿಸಬೇಕು. ಈ ಜವಾಬ್ದಾರಿಯನ್ನು ಸಂಬಂಧಿಸಿದ ಕಾರ್ಯಕ್ರಮ ಬೆಂಬಲ ಸಂಸ್ಥೆಯು ನಿರ್ವಹಿಸಬೇಕಿರುತ್ತದೆ.

### ಯೋಜನಾ ಬೆಂಬಲ ಸಂಸ್ಥೆಗಳ ಸಮೂಹ ರಚನೆ :

ಜಿಲ್ಲೆಯಲ್ಲಿ "ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ"ಯಲ್ಲಿ ಭಾಗಿದಾರರಾಗಿರುವ ಕಾರ್ಯಕ್ರಮ ಬೆಂಬಲ ಸಂಸ್ಥೆಗಳ ಸಮೂಹವನ್ನು ರಚಿಸಬೇಕು. ಈ ಯೋಜನೆಯು ಜಾರಿಯಾದ 6 ತಿಂಗಳ ಒಳಗೆ ಈ ಸಮಿತಿಯು ಅಸ್ತಿತ್ವಕ್ಕೆ ಬರುತ್ತದೆ. ಪ್ರತಿ ಸ್ವಯಂ ಸೇವಾ ಸಂಸ್ಥೆಯ ವ್ಯವಸ್ಥಾಪಕ ಹಂತದ ಪ್ರತಿನಿಧಿಯು ಸಮೂಹ ಸಮಿತಿಯ ಸದಸ್ಯರಾಗಿರುತ್ತಾರೆ.

ಈ ಸಮೂಹಕ್ಕೆ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯಿತಿಯು ಕಾರ್ಯಕ್ರಮ ಬೆಂಬಲ ಸಂಸ್ಥೆಗಳ ಪೈಕಿ 2 ಸಂಸ್ಥೆಗಳ ಪ್ರತಿನಿಧಿಗಳನ್ನು ಸದಸ್ಯ ಕಾರ್ಯದರ್ಶಿ ಹಾಗೂ ಸಹ ಕಾರ್ಯದರ್ಶಿಯಾಗಿ ನಾಮ ನಿರ್ದೇಶನ ಮಾಡಬೇಕು.

## ಕಾರ್ಯ ಚಟುವಟಿಕೆಗಳು:

ಸಮೂಹವು ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವ ಕಾರ್ಯವನ್ನು ಮಾಡಬೇಕು. ಸಮೂಹವು ಪ್ರತಿ 3 ತಿಂಗಳಿಗೊಮ್ಮೆ ಸಭೆ ಸೇರಬೇಕು. ಯೋಜನೆಯ ಪ್ರಗತಿ ಪರಿಶೀಲನೆ ಮಾಡುವ ಜೊತೆಗೆ ಅನುಭವ ಹಂಚಿಕೆ ಮೂಲಕ ಪರಸ್ಪರ ಕಲಿಕೆ ಉತ್ತೇಜನ ನೀಡಬೇಕು. ಮಾರುಕಟ್ಟೆ ಸಂಬಂಧಿ ಸಂಶೋಧನೆ ಮತ್ತು ಜಂಟಿ ಪಾಲುದಾರರ ಗುಂಪಿನ ಯುವಕರ ಉತ್ಪನ್ನಗಳಿಗೆ ಮಾರುಕಟ್ಟೆ ಲಿಂಕೇಜ್ ಒದಗಿಸುವ ಕುರಿತು ಚರ್ಚಿಸಿ ನಿಯಮಗಳನ್ನು ಕಾರ್ಯಗತ ಗೊಳಿಸಬೇಕು. ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಜಂಟಿಯಾಗಿ ಕಾರ್ಯ ನಿರ್ವಹಿಸಬೇಕು ಯುವಕರಿಗೆ ಬ್ಯಾಂಕ್ ಲಿಂಕೇಜ್ ಕಲ್ಪಿಸಬೇಕು. ಯುವಜನ ಮೇಳ ಸಂಘಟನೆ ಮಾಡುವುದು ಹಾಗೂ ಉದ್ಯಮ ಶೀಲತೆಗೆ ಪೂರಕವಾದ ಯಶಸ್ವಿ ಉದ್ದಿಮೆದಾರರ ಯಶೋ ಗಾಥೆಗಳನ್ನು ಹೊರತರುವ ಕಾರ್ಯಗಳನ್ನು ಮಾಡಬೇಕು. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಚಟುವಟಿಕೆಗಳ ಪ್ರಕರಣಗಳನ್ನು ದಾಖಲೀಕರಣ ಮಾಡುವ ಮೂಲಕ ಹೆಚ್ಚಿನ ಪ್ರಚಾರ ನೀಡಿ ಇತರರಿಗೆ ಪ್ರೇರಣೆ ನೀಡಬೇಕು.

## ಯುವಜನ ಮೇಳಗಳ ಸಂಘಟನೆ :

ಜಿಲ್ಲಾ ಮಟ್ಟದಲ್ಲಿ ಯುವಕರ ಒಕ್ಕೂಟ ರಚನೆಯಾದ ನಂತರ ಜಿಲ್ಲೆಯಲ್ಲಿ ಯುವ ಜನರ ಮೇಳವನ್ನು ಸಂಘಟಿಸಬೇಕು. ಈ ಕಾರ್ಯಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಚಾಲನೆ ನೀಡಬೇಕು. ಬೆಂಬಲ ಸಂಸ್ಥೆಗಳ ಸಮೂಹ ಮತ್ತು ಯುವಕರ ಒಕ್ಕೂಟದ ಸಹ ಯೋಗದಲ್ಲಿ ಪ್ರತಿ 3 ತಿಂಗಳಿಗೊಮ್ಮೆ ಯುವಜನ ಮೇಳವನ್ನು ಸಂಘಟಿಸಬಹುದು. ಈ ಮೇಳಗಳಲ್ಲಿ ಜಂಟಿ ಪಾಲುದಾರ ಗುಂಪುಗಳ ಯುವಕರು ಉದ್ಯಮದ ಮೂಲಕ ಉತ್ಪಾದಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶವನ್ನು ಕಲ್ಪಿಸಬೇಕು. ಯುವಕರ ಜೊತೆ ತಜ್ಞರ ಸಮಿತಿ ಸಂವಾದ ಏರ್ಪಡಿಸಿ ಉದ್ದಿಮೆಯನ್ನು ಉತ್ತಮಗೊಳಿಸಲು ಅಗತ್ಯವಾದ ಸಲಹೆಗಳನ್ನು ನೀಡಬೇಕು.

ಜಿಲ್ಲಾ ಪಂಚಾಯಿತಿಯು ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆಯಲ್ಲಿ ಯುವಕರು ಉತ್ಪಾದಿಸುತ್ತಿರುವ ಉತ್ಪನ್ನಗಳಿಗೆ ಅಗತ್ಯ ಮಾರುಕಟ್ಟೆ ಒದಗಿಸುವಲ್ಲಿ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ಎಸ್.ಸಿ. , ಎಸ್.ಟಿ., ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ಬಳಸುವ ವಸ್ತುಗಳನ್ನು ಹಾಗೂ ಅಂಗನವಾಡಿಗಳಲ್ಲಿ ವಿತರಿಸುವ ಪದಾರ್ಥಗಳ ಖರೀದಿ ಸಂದರ್ಭದಲ್ಲಿ ಯುವಕರು ಉದ್ಯಮದ ಮೂಲಕ ಉತ್ಪಾದಿಸಿದ ಉತ್ಪನ್ನಗಳನ್ನು ಖರೀದಿಸಲು ಆದ್ಯತೆ ನೀಡುವಂತೆ ಸಂಬಂಧಿಸಿದ ಇಲಾಖೆಗಳಿಗೆ ಮಾರ್ಗದರ್ಶನ ನೀಡಬಹುದಾಗಿದೆ. ಈ ಸಂಬಂಧ ಅಗತ್ಯ ಸುತ್ತೋಲೆಗಳನ್ನು ಹೊರಡಿಸ ಬಹುದಾಗಿದೆ. ಅಗತ್ಯವಿದ್ದಲ್ಲಿ ತಜ್ಞರ ಸಮಿತಿ ಅಥವಾ ಇತರ ಸಂಪನ್ಮೂಲ ಸಂಸ್ಥೆಗಳ ಸಹಭಾಗಿತ್ವವನ್ನು ಪಡೆಯಬಹುದು.

2013–14 ನೇ ಸಾಲಿನಲ್ಲಿ ರಾಜ್ಯದಲ್ಲಿ ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ ಸಮರ್ಪಕವಾಗಿ ಜಾರಿಗೊಳಸಲು ಬೇಕಾಗಿ ಸುಮಾರು 300 ಕೋಟಿ ರೂ.ಗಳನ್ನು ನಿಗಧಿಗೊಳಿಸಲಾಗಿದೆ. ಗ್ರಾಮೀಣ ಯುವಕರ ಬದುಕನ್ನು ಹಸನುಗೊಳಿಸಲು ಜಾರಿಯಾಗುತ್ತಿರುವ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

# ಸ್ವಾವಲಂಬನೆಗಾಗಿ ಸಾವಿರಾರು ದಾರಿಗಳು
## (ಯುವಜನತೆಗಾಗಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗ ಅವಕಾಶಗಳು)

ಭಾರತದ ದೇಶದ ಜನಸಂಖ್ಯೆಯಲ್ಲಿ ಶೇ.54 ರಷ್ಟು ಯುವ ಜನಸಂಖ್ಯೆ, ಅಂದರೇ ಅರ್ಧಕ್ಕಿಂತಲೂ ಹೆಚ್ಚು 25 ವರ್ಷದೊಳಗಿನ ಯುವಜನತೆ ಇದ್ದಾರೆ. ಯುವಶಕ್ತಿ, ಯುವಚೈತನ್ಯ ದೇಶದ ಅತ್ಯಂತ ಅಮೂಲ್ಯವಾದ ಸಂಪನ್ಮೂಲ. 18 ರಿಂದ 35 ರೊಳಗಿನ ವಯಸ್ಸಿನ ಯುವಜನತೆಯಲ್ಲಿ ಸರಿಯಾದ, ಜೀವನದ ಗುರಿ, ಉದ್ಯೋಗದ ಬಗ್ಗೆ ಮಾಹಿತಿ ಹಾಗೂ ಅರಿವಿನ ಕೊರತೆ ಇದೆ. ಇದರಿಂದ ಯುವ ಜನತೆಯು ಬಹಳಷ್ಟು ಸಂಕಷ್ಟಗಳಿಗೆ ಗುರಿಯಾಗಿದ್ದಾರೆ.

## ಗ್ರಾಮೀಣ ಯುವಜನತೆಯ ಪ್ರಸ್ತುತ ಪರಿಸ್ಥಿತಿ:

ಗ್ರಾಮೀಣ ಪ್ರದೇಶದಲ್ಲಿರುವ ಯುವಜನತೆಯ ಪ್ರಸ್ತುತ ಪರಿಸ್ಥಿತಿಯು ಆಶಾದಾಯಕವಾಗಿಲ್ಲ. ಕೆಲವೇ ಮಂದಿ ಯುವಕರು ವೃತ್ತಿ ಪರ ಶಿಕ್ಷಣ ಹಾಗೂ ಕೌಶಲ್ಯ ತರಬೇತಿ ಪಡೆಯುತ್ತಿದ್ದಾರೆ, ಶಾಲಾ ಮತ್ತು ಕಾಲೇಜುಗಳನ್ನು ಅರ್ಧದಲ್ಲಿಯೇ ಬಿಡುತ್ತಿದ್ದಾರೆ. ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸುವ ಹೆಣ್ಣುಮಕ್ಕಳ ಸಂಖ್ಯೆ ದಿನೇ-ದಿನೇ ಹೆಚ್ಚಾಗುತ್ತಿದೆ.

ಉದ್ಯೋಗ ಒದಗಿಸಬಲ್ಲ ಕೌಶಲ್ಯ ತರಬೇತಿಗಳ ಕೊರತೆ ಸಹ ಇದೆ, ಸೋಲು/ನಷ್ಟದ ಭಯದಿಂದ ಬಹಳ ಮಂದಿ ಯುವಕರು ಸ್ವ ಉದ್ಯೋಗದ ಪ್ರಯತ್ನಕ್ಕೆ ಕೈ ಹಾಕುವುದಿಲ್ಲ.

ಬರಪೀಡಿತ ಪ್ರದೇಶಗಳಲ್ಲಿನ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ನಿರಂತರವಾಗಿ ಜೀವನೋಪಾಯ ಕಲ್ಪಿಸುವಲ್ಲಿ ಕೃಷಿವಲಯ ಅಸಮರ್ಥವಾಗುತ್ತಿರುವ ಕಾರಣದಿಂದ ಇದು ಗಂಭೀರ ಸಮಸ್ಯೆಯಾಗಿರುತ್ತದೆ. ಗ್ರಾಮೀಣ ಪ್ರದೇಶದ ಯುವಕರಲ್ಲಿ ಕೃಷಿಯ ಬಗ್ಗೆ ತಾತ್ಸಾರ ಮೂಡುತ್ತಿದೆ. ಈ ಎಲ್ಲಾ ಕಾರಣಗಳಿಂದ ಗ್ರಾಮೀಣ ಪ್ರದೇಶದಲ್ಲಿನ ಯುವಜನತೆ ಜೀವನೋಪಾಯ ಹುಡುಕಿ ನಗರ ಪ್ರದೇಶಗಳತ್ತ ವಲಸೆ ಹೋಗುತ್ತಿರುವುದು ಹೆಚ್ಚಾಗುತ್ತಿದೆ. ಇದು ಖಂಡಿತವಾಗಿಯೂ ಒಳ್ಳೆಯ ಬೆಳವಣಿಗೆ ಅಲ್ಲ. ಇದನ್ನು ತಪ್ಪಿಸಬೇಕಾದರೆ ಗ್ರಾಮೀಣ ಪ್ರದೇಶದ ದುಡಿಯುವ ಕೈಗಳಿಗೆ ಕೆಲಸ ಸಿಗಬೇಕು. ಸ್ಥಿರವಾದ ಆದಾಯ ಲಭ್ಯವಾಗಬೇಕು.

> **ಯುವ ಸಮುದಾಯ ಸ್ವ-ಉದ್ಯೋಗ ಕೈಗೊಂಡಲ್ಲಿ ಆರ್ಥಿಕ ಭದ್ರತೆ ಕಟ್ಟಿಟ್ಟ ಬುತ್ತಿ**

## ಗ್ರಾಮೀಣ ಯುವಜನತೆ ಏಕೆ ಸ್ವಉದ್ಯೋಗ ಕೈಗೊಳ್ಳಬೇಕು?

· ಗ್ರಾಮೀಣ ಯುವಜನತೆಗೆ ಅವರ ಸ್ವಂತ ಸ್ಥಳದಲ್ಲಿಯೇ ಸ್ಥಿರವಾದ ಸರಕಾರಿ ಅಥವಾ ಖಾಸಗಿ ಉದ್ಯೋಗ ದೊರಕಿಸುವುದು ಅಸಾಧ್ಯವಾದ ಕಾರಣ ಸ್ವ-ಉದ್ಯೋಗ ಅನಿವಾರ್ಯ.

· ಪ್ರತಿನಿತ್ಯದ ಮೂಲಭೂತ ಜೀವನಾಧಾರ ಅವಶ್ಯಕತೆಗಳಿಗಾಗಿ ಪಕ್ಕದ ನಗರಗಳಿಗೆ ವಲಸೆ ಹೋಗದಂತೆ ಮಾಡಲು ಸ್ವ-ಉದ್ಯೋಗ ನೆರವು ನೀಡುತ್ತದೆ.

- ಸ್ವ - ಉದ್ಯೋಗದಿಂದ ನಿರುದ್ಯೋಗಿ ಯುವಕರ ಕುಟುಂಬಗಳಲ್ಲಿ ಆರ್ಥಿಕ ಬಿಕ್ಕಟ್ಟು ತಪ್ಪುತ್ತದೆ.

- ಯುವಜನರು ಅನಾರೋಗ್ಯ ಹಾಗೂ ಖಿನ್ನತೆಯಿಂದ ಹೊರಬರಲು ಆತ್ಮವಿಶ್ವಾಸ ಮೂಡಿಸಲು ಸಾಧ್ಯವಾಗುತ್ತದೆ.
- ಹತಾಶೆ ಯುವಕರು ತಮ್ಮ ಮೂಲಭೂತ ಅವಶ್ಯಕತೆಗಳು ಪೂರೈಸದಿದ್ದಾಗ ಅಪರಾಧ ಚಟುವಟಿಕೆಗಳಲ್ಲಿ ತೊಡಗುವುದನ್ನು ತಪ್ಪಿಸುತ್ತದೆ.
- ದುಡಿಯುವ ಶಕ್ತಿ ಇರುವ ಕೈಗಳಿಗೆ ದುಡಿಮೆ ಸಿಗದೆ ಉತ್ಪಾದಕತೆ ಕುಂಠಿತಗೊಂಡು ರಾಷ್ಟ್ರೀಯ ಆರ್ಥಿಕತೆಯಲ್ಲಿ ಬಿಕ್ಕಟ್ಟು ಸಂಭವಿಸುವುದನ್ನು ತಡೆಯಲು ಸಾಧ್ಯವಾಗುತ್ತದೆ.

12ನೇ ಪಂಚವಾರ್ಷಿಕ ಯೋಜನೆಯಲ್ಲಿ ಯುವ ಜನತೆಗೆ ಜೀವನೋಪಾಯ ಮಾರ್ಗಗಳನ್ನು ಕಲ್ಪಿಸಲು ಸುವರ್ಣ ಅವಕಾಶವಿದೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 6.5 ಲಕ್ಷ ಯುವ ಜನತೆಗೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳಿಗೆ ಗುರಿ ಹಾಕಿಕೊಳ್ಳಲಾಗಿದೆ.

ಮುಖ್ಯವಾಗಿ ಯುವಜನತೆಗಾಗಿ ಉದ್ಯೋಗ ಪಡೆದುಕೊಳ್ಳಲು ಕೌಶಲ್ಯ ತರಬೇತಿಗಳ ಮೂಲಕ ಅವರುಗಳನ್ನು ಸಜ್ಜುಗೊಳಿಸುವುದು, ಅಗತ್ಯಾನುಸಾರ ಇಷ್ಟ ಪಟ್ಟಉದ್ಯೋಗ ಒದಗಿಸಿ ಜೀವನೋಪಾಯ ಸುಸ್ಥಿರಗೊಳಿಸಲು ಆದ್ಯತೆ ನೀಡಲಾಗಿದೆ.

ಈ ಗುರಿಯ ಈಡೇರಿಕೆಗಾಗಿ ಭಾರತ ಸರ್ಕಾರ ಈಗಾಗಲೇ ಉತ್ತಮ ವ್ಯವಸ್ಥೆಯನ್ನು ಈ ಕೆಳಕಂಡಂತೆ ಅಳವಡಿಸಿಕೊಂಡಿದೆ.

1. ಕೌಶಲ್ಯ ಅಭಿವೃದ್ಧಿಗಾಗಿ ನ್ಯಾಷನಲ್ ಕೌನ್ಸಿಲ್ (NCSD)
2. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿ (NSDCB)
3. ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ (NSDC)

ಕೌಶಲ್ಯ ಅಭಿವೃದ್ಧಿಗಾಗಿ ರಾಷ್ಟ್ರೀಯ (ಕೌನ್ಸಿಲ್) ಮಂಡಳಿಯು 2022ನೇ ಇಸವಿಯೊಳಗೆ ಎಲ್ಲಾ ಕ್ಷೇತ್ರದಲ್ಲೂ ಸುಮಾರು 500 ಮಿಲಿಯನ್ ಕಾರ್ಮಿಕರ ಕೊರತೆ ಗುರುತಿಸಿದೆ, ಅಂದರೆ ಬೇಡಿಕೆ ಸೃಷ್ಟಿಯ ಆಧಾರದ ಮೇಲೆ ಅಗತ್ಯಾನುಸಾರ ಯುವಕರಿಗೆ ವಿವಿಧ ರೀತಿಯ ಕೌಶಲ್ಯ ಅಭಿವೃದ್ಧಿ ಕೊಡುವ ಯೋಜನೆ ತಯಾರಿಸಿದೆ.

ಇನ್ನು 2ನೇ ಹಂತದಲ್ಲಿ ರಚನೆಗೊಂಡಿರುವ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯು (NSDC Board) ಅನುಷ್ಠಾನ ಜವಾಬ್ದಾರಿಯನ್ನು ಹೊಂದಿದೆ ಒಟ್ಟು 150 ಮಿಲಿಯನ್ ಯುವ ಜನತೆಯ ಕೌಶಲ್ಯ ಅಭಿವೃದ್ಧಿ ಮತ್ತು ಅವರಿಗೆ ಉದ್ಯೋಗಾವಕಾಶ ಕಲ್ಪಿಸಲು ಸಾರ್ವಜನಿಕ, ಖಾಸಗಿ ಸಹಭಾಗಿತ್ವ ಮಾದರಿಯನ್ನು ಅಳವಡಿಸಿಕೊಂಡಿದೆ.

ಕೊನೆಯ ಹಂತದಲ್ಲಿ, ಅಂದರೆ 3ನೇ ಹಂತದಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವನ್ನು ರಚಿಸಲಾಗಿದೆ. (NSDC) [ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವು ಕಂಪನಿಯ ಕಾಯ್ದೆಯ ಸೆಕ್ಷನ್ 25ರ ಅಡಿಯಲ್ಲಿ ಭಾರತ ಸರ್ಕಾರವು ಆರಂಭಗೊಂಡಿದೆ] ಈ ನಿಗಮದ ಮುಖ್ಯ ಉದ್ದೇಶವು ಅಗತ್ಯಾನುಸಾರ ನೂರಾರು ವಿಷಯ/ಕೌಶಲ್ಯಗಳಲ್ಲಿ ತರಬೇತಿ ಕೊಟ್ಟು ಉದ್ಯೋಗದಾತರು ಹಾಗೂ ಕಂಪನಿಗಳ ಮೂಲಕ, ಉದ್ಯೋಗಳನ್ನು ಗುರುತಿಸಿ, ಒದಗಿಸಿ ಕೊಡುವುದೇ ಆಗಿದೆ.

ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದಲ್ಲಿ ಇನ್ನೊಂದು ಮುಖ್ಯ ಘಟಕವೆಂದರೆ ಪ್ರತ್ಯೇಕವಾಗಿರುವ ತರಬೇತಿ ಮತ್ತು ಉದ್ಯೋಗ ಒದಗಿಸುವ ಸೆಲ್ ಪ್ರಾರಂಭಿಸಿರುವುದು.

ಈಗಾಗಲೇ ಒಟ್ಟು 23 ವಿಭಾಗಗಳಲ್ಲಿ ರಚನೆಗೊಂಡಿರುವ ಕೌಶಲ್ಯ ಮಂಡಳಿಗಳು ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ 23 ರಲ್ಲಿ 19 ಸಂಘಟಿತ ವಿಭಾಗಗಳಾಗಿವೆ. 4 ಅಸಂಘಟಿತ ಸೆಕ್ಟರ್‌ಗಳಾಗಿವೆ. ಮತ್ತೊಂದು ಹೊಸ ಹೆಜ್ಜೆಯಾಗಿ ಮಾನವ ಸಂಪನ್ಮೂಲ ಮಂತ್ರಾಲಯದ ಇಲಾಖೆಯ ಅಡಿಯಲ್ಲಿ ರಾಷ್ಟ್ರೀಯ ವೃತ್ತಿಶಿಕ್ಷಣ ಅರ್ಹತಾ ವೇದಿಕೆಯು (NVEQF) ಇದ್ದು 8 ರಿಂದ 10ನೇ ತರಗತಿಯವರೆಗೆ ಮೂರು ಹಂತಗಳಲ್ಲಿಯೂ ವೃತ್ತಿ ಕೌಶಲ್ಯಗಳನ್ನು ವ್ಯಾಸಂಗ/ಓದಿನ ಜೊತೆ ಒದಗಿಸುವ ಕಾರ್ಯಕ್ರಮವಾಗಿದೆ. ಜೊತೆಗೆ 4ನೇ ಹಂತದಲ್ಲಿ ಪರಿಪೂರ್ಣ ಕೌಶಲ್ಯ ತರಬೇತಿ ಒದಗಿಸುವ ವ್ಯವಸ್ಥೆಯು ಇದೆ, ಉದಾಹರಣೆಗೆ 10ನೇ ತರಗತಿಯಲ್ಲಿ ಫೇಲ್ ಆದರೂ 3 ಮತ್ತು 4ನೇ ಹಂತದಲ್ಲಿ ಕೌಶಲ್ಯಗಳ ತರಬೇತಿ

ಪಡೆದಿದ್ದರೆ ನೇರ ಕೆಲಸ/ಉದ್ಯೋಗಕ್ಕೆ ಸೇರುವ ಅವಕಾಶ ಅಥವಾ ಐ.ಟಿ.ಐ. ಕೋರ್ಸ್ ಸೇರಲು ಅರ್ಹತೆ ಹೊಂದಬಹುದು. ಹೀಗೆ (NVEQF) ಪ್ರೌಢ ಶಿಕ್ಷಣಾರ್ಹ ಓದಿನೊಂದಿಗೆ ಪೂರಕ ವ್ಯವಸ್ಥೆಯಾಗಿ ಯುವಜನರ ಜೀವನೋಪಾಯದ ಸುಸ್ಥಿರ ಬದುಕಿನ ಆಸರೆ ನೀಡುವ ಗುರಿಯನ್ನು ಹೊಂದಿದೆ.

ಈ ಮೇಲಿನ ಎಲ್ಲಾ ವ್ಯವಸ್ಥೆ / ಸೌಲಭ್ಯಗಳ ಜೊತೆ (NCVT) ಮತ್ತು (UTP) ಕಾರ್ಯಕ್ರಮಗಳೂ ಯುವಕರಿಗೆ ಸದಾವಕಾಶಗಳಾಗಿವೆ, ರಾಷ್ಟ್ರೀಯ ವೃತ್ತಿ ತರಬೇತಿ ಮಂಡಳಿ ಹಾಗೂ ವೃತ್ತಿ ತರಬೇತಿ ಕಾರ್ಯಕ್ರಮಗಳು ಬೇರೆ-ಬೇರೆ ಕ್ಷೇತ್ರಗಳಲ್ಲಿ ವಿವಿಧ ರೀತಿಯ ಕೌಶಲ್ಯಗಳಲ್ಲಿ ತರಬೇತಿ ಪಡೆಯಲು ವರದಾನವಾಗಿದೆ.

ಕರ್ನಾಟಕದಲ್ಲಿ ಪ್ರಸ್ತುತ ಅತ್ಯಂತ ಹೆಚ್ಚು ಉದ್ಯೋಗಾವಕಾಶಗಳ ಬೇಡಿಕೆ ಇರುವ ಪ್ರಮುಖ ಹತ್ತು ಕ್ಷೇತ್ರಗಳು ಈ ಕೆಳಕಂಡಂತಿವೆ.

1. ಆಟೋ ಮೊಬೈಲ್ ಕ್ಷೇತ್ರ.
2. ರಿಟೈಲ್ ಮತ್ತು ಸಪ್ಲೆಚೈನ್ ಉತ್ಪಾದನಾ ಕ್ಷೇತ್ರ
3. ಐ.ಟಿ. (ಮಾಹಿತಿ ಮತ್ತು ತಂತ್ರಜ್ಞಾನ) ಕ್ಷೇತ್ರ
4. ಎಲೆಕ್ಟ್ರಾನಿಕ್ ಮತ್ತು ಕಮ್ಯೂನಿಕೇಷನ್ ಕ್ಷೇತ್ರ
5. ಮಾಧ್ಯಮ (ಮೀಡಿಯ) ಕ್ಷೇತ್ರ
6. ಆರೋಗ್ಯ ರಕ್ಷಣೆಯ ಕ್ಷೇತ್ರ (ಹೆಲ್ತ್ ಕೇರ್)
7. ಜೆಮ್ಸ್ ಮತ್ತು ಜುವೆಲ್ಲರೀಸ್ ಕ್ಷೇತ್ರ
8. ಲೆದರ್ (ಚರ್ಮ ಕೈಗಾರಿಕಾ) ಮತ್ತು ಉತ್ಪಾದನ ಘಟಕಗಳು
9. ಹಾರ್ಡ್‌ವೇರ್ಸ್
10. ಕಟ್ಟಡ ನಿರ್ಮಾಣ (ಕನ್‌ಸ್ಟ್ರಕ್ಷನ್) ಕ್ಷೇತ್ರ

## ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ:

ಕರ್ನಾಟಕ ರಾಜ್ಯದಲ್ಲಿ ವೃತ್ತಿ ತರಬೇತಿ ಮತ್ತು ಕೌಶಲ್ಯ ಆಯೋಗವು 8ನೇ ಸೆಪ್ಟೆಂಬರ್ 2008 ರಲ್ಲಿ ಪ್ರಾರಂಭಿಸಲ್ಪಟ್ಟಿದೆ, ಈ ಆಯೋಗದ ಅಡಿಯಲ್ಲಿ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ನಿಗಮವು 12ನೇ ಸೆಪ್ಟೆಂಬರ್ 2008 ರಲ್ಲಿ ಆರಂಭಗೊಂಡಿತು. ಈಗ "ಕೌಶಲ್ಯ ಭವನ" ಎಂದೇ ಕರೆಯಲ್ಪಡುವ ಅತ್ಯುತ್ತಮ ಸಂಸ್ಥೆಯಾಗಿ ಕೆಲಸ ನಿರ್ವಹಿಸುತ್ತಿದೆ.

ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಪರಿಪೂರ್ಣ ಮಟ್ಟದಲ್ಲಿ ಕೌಶಲ್ಯ ಅಭಿವೃದ್ಧಿ ಹಾಗೂ ಉದ್ಯೋಗಾವಕಾಶ ಒದಗಿಸಲು ಜಿಲ್ಲಾ ಉದ್ಯೋಗ ಮತ್ತು ವಿನಿಮಯ ಕೇಂದ್ರಗಳ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಿ (HRDC) ಪರಿವರ್ತಿಸಲಾಗಿದೆ. ಈ ಕೆಳಕಂಡ ಕೇಂದ್ರಗಳು ಜಿಲ್ಲೆಗಳಲ್ಲಿ ಪರಿಪೂರ್ಣ ಮಟ್ಟದಲ್ಲಿ ಯುವಜನತೆಗಾಗಿ ಸೇವೆ ಸಲ್ಲಿಸುತ್ತಿವೆ.

1. ಮಂಗಳೂರು.
2. ಕೋಲಾರ.
3. ಹುಬ್ಬಳಿ, ಧಾರವಾಡ.
4. ಚಾಮರಾಜನಗರ.
5. ಬಿಜಾಪುರ.
6. ಗುಲ್ಬರ್ಗಾ
7. ಬಳ್ಳಾರಿ.
8. ಮಂಡ್ಯ.

ಈಗಾಗಲೇ 8 ಜಿಲ್ಲಾ ಕೇಂದ್ರಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಿ ಸೇವೆ ಒದಗಿಸುತ್ತಿದ್ದು, ವಿಶೇಷವಾಗಿ ಕೌಶಲ್ಯ ತರಬೇತಿ, ಅಭಿವೃದ್ಧಿ ಮತ್ತು ಉತ್ತಮ ಕಂಪನಿಗಳ ಸಂಪರ್ಕದೊಂದಿಗೆ ಉದ್ಯೋಗ ಮೇಳ ಸಂಘಟಿಸಿ ಪ್ಲೇಸ್‌ಮೆಂಟ್ ಮಾಡುತ್ತಿವೆ.

ಈ ಮೇಲಿನ 8 ಜಿಲ್ಲೆಗಳ ಜೊತೆಗೆ 6 ಜಿಲ್ಲೆಗಳಲ್ಲಿ (ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಕೊಪ್ಪಳ, ರಾಮನಗರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ) ಹಾಲಿ ಇರುವ ಉದ್ಯೋಗ ಮತ್ತು ವಿನಿಮಯ ಕೇಂದ್ರಗಳನ್ನು ಸದ್ಯದಲ್ಲಿಯೇ "ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಿ (HRDC)" ಸೇವೆ ಒದಗಿಸಲು ಪರಿವರ್ತಿಸಲಾಗುತ್ತದೆ.

## ಉದ್ಯೋಗ ಮೇಳಗಳು:

ಕರ್ನಾಟಕ ಸರ್ಕಾರ ಈ ಮೇಲೆ ತಿಳಿಸಿದ ಕೇಂದ್ರಗಳು ಮತ್ತು ಹಲವಾರು ಪ್ರಮುಖ ಕಂಪನಿಗಳ ಸಹಯೋಗದಲ್ಲಿ ಸುಮಾರು 35 ಕ್ಕೂ ಹೆಚ್ಚು ದೊಡ್ಡ ಉದ್ಯೋಗ ಮೇಳಗಳ ಸಂಘಟನೆ ಮಾಡಿದೆ. ಇದುವರೆಗೂ ಸುಮಾರು 3,312 (3,085+227)

ಕಂಪನಿಗಳು ಮತ್ತು ಉದ್ಯೋಗದಾತರ ಸಹಯೋಗದಲ್ಲಿ ಸುಮಾರು 33,5096ಕ್ಕೂ ಹೆಚ್ಚು ನಿರುದ್ಯೋಗಿ ಯುವಜನತೆ ನೊಂದಣಿಯಾಗಿದೆ ಸುಮಾರು 86,373 ಅರ್ಹರಿಗೆ ಸೂಕ್ತ ಉದ್ಯೋಗ ಒದಗಿಸಲಾಗಿದೆ.

ರಾಜ್ಯದಲ್ಲಿ 428 ಕ್ಕೂ ಹೆಚ್ಚು ಮಿನಿ ಉದ್ಯೋಗ ಮೇಳಗಳನ್ನು ಸಂಘಟಿಸಿದ್ದು 1999 ಕಂಪನಿಗಳ/ಉದ್ಯೋಗದಾತರ ಸಹಕಾರದೊಂದಿಗೆ ಸುಮಾರು 92,888 ಯುವಜನರಿಗೆ ನೊಂದಣಿ ಮಾಡಿಕೊಳ್ಳಲಾಗಿದೆ. ಇವರಲ್ಲಿ ಸುಮಾರು 26,000 ಅರ್ಹವ್ಯಕ್ತಿಗಳಿಗೆ ಸೂಕ್ತ ಉದ್ಯೋಗಗಳನ್ನು ಒದಗಿಸಿಕೊಟ್ಟಿದೆ.

ಇವುಗಳಲ್ಲದೆ ಖಾಸಗಿ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಕೂಡ ಉದ್ಯೋಗ ಮೇಳಗಳನ್ನು ಸಂಘಟಿಸುತ್ತಿವೆ.

## ಕೇಂದ್ರೀಯ ಪ್ಲೇಸ್‌ಮೆಂಟ್ ಸೆಲ್: (ಸಿ.ಪಿ.ಸಿ.)

ಕೇಂದ್ರೀಯ ಪ್ಲೇಸ್‌ಮೆಂಟ್ ಸೆಲ್ ಕೂಡ ರಾಜ್ಯದಲ್ಲಿ, ಬೆಂಗಳೂರಿನ ಮಲ್ಲೇಶ್ವರಂನ ಸಿ.ಇ.ಟಿ. (C.E.T.) ಕಟ್ಟಡದಲ್ಲಿ ಕಚೇರಿಯನ್ನು ಹೊಂದಿದೆ. ಈ ಘಟಕವು "ಉದ್ಯೋಗ ಸಿರಿ" ಸ್ಮಾರ್ಟರ್ ಎಂಪ್ಲಾಯಬಿಲಿಟಿ ಫ್ಲಾಟ್ ಫಾರಂ ಪ್ರಾರಂಭಿಸಿದೆ. ಇಲ್ಲಿ ಯಾವುದೇ ನಿರುದ್ಯೋಗಿಯು ಉದ್ಯೋಗಕ್ಕಾಗಿ ಟೋಲ್ ಫ್ರೀ ನಂಬರ್ 1800-425-8040 ಕ್ಕೆ ಕರೆ ಮಾಡಿ ಉದ್ಯೋಗಾರ್ಥಿಯಾಗಿ ನೊಂದಣೆ ಮಾಡಿಕೊಳ್ಳಬಹುದು.

ಈಗಾಗಲೇ ಕೃಷಿ, ಕೃಷಿಯೇತರ ಚಟುವಟಿಕೆಗಳನ್ನೊಳಗೊಂಡಂತೆ ತಾಂತ್ರಿಕ ಕೌಶಲ್ಯಗಳಾಧಾರಿತ ತರಬೇತಿ ಮಾಡ್ಯೂಲ್‌ಗಳನ್ನು ಸಿದ್ದಗೊಳಿಸಲಾಗಿದೆ. ಸುಮಾರು 1,564 ಕ್ಕೂ ಹೆಚ್ಚು ವಿವಿಧ ವಿಷಯಾಧಾರಿತ ಹಾಗೂ ಕೌಶಲ್ಯ ತರಬೇತಿ ಮಾಡ್ಯುಲ್‌ಗಳ ಲಭ್ಯತೆ ಇದೆ. ಇದರಿಂದ ರಾಜ್ಯದ ಯಾವುದೇ ಹಳ್ಳಿಯ/ನಗರದ ಯುವಜನತೆಯು ಈ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ.

ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವೆಯ ವಿವರಗಳನ್ನು ಪಡೆಯಲು ಆಯಾಯ ಜಿಲ್ಲಾ ಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ (HRDC) ಕೇಂದ್ರಗಳು, ರುಡ್‌ಸೆಟ್ ಸಂಸ್ಥೆಗಳು, ಆರ್‌ಸೆಟ್ ಸಂಸ್ಥೆಗಳು, ಉದ್ಯೋಗ ತರಬೇತಿ ಕೊಡುವ ಸಂಬಂಧಿತ ಸ್ವಯಂ ಸೇವಾ ಸಂಸ್ಥೆಗಳನ್ನು ಸಂಪರ್ಕಿಸಬೇಕಾಗುತ್ತದೆ.

## ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ಪಾತ್ರ (ಸಂಜೀವಿನಿ)

### ಸ್ವ-ಉದ್ಯೋಗ ಪ್ರಾಯೋಗಿಕ ಯೋಜನೆ

ಕರ್ನಾಟಕ ಸರಕಾರವು 'ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ'ಯನ್ನು ರೂಪಿಸಿ ಅನುಷ್ಠಾನಗೊಳಿಸಲು ತೀರ್ಮಾನಿಸಿದೆ. ಪ್ರಾಯೋಗಿಕವಾಗಿ 5,627 ಗ್ರಾಮ ಪಂಚಾಯತಿಗಳಿಂದ, ಪ್ರತಿ ಗ್ರಾಮ ಪಂಚಾಯತಿಗೆ 40 ಯುವಜನರಂತೆ ಒಟ್ಟು 2 ಲಕ್ಷ ಯುವಕ-ಯುವತಿಯರನ್ನು ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಿ, ಅವರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವ ಮೂಲಕ ಉದ್ಯೋಗ/ಸ್ವ-ಉದ್ಯೋಗ ಕಲ್ಪಿಸಲು ಉದ್ದೇಶಿಸಲಾಗಿದೆ. ಇವರಲ್ಲಿ ಕೆಲವರು ಸ್ವ-ಉದ್ಯೋಗ, ಇನ್ನುಳಿದವರು ಹೆಚ್ಚಿನ ಕೌಶಲ್ಯ ತರಬೇತಿ ಪಡೆದು ಸ್ಥಿರವಾದ ಉದ್ಯೋಗ ಪಡೆಯಲು ಈ ಯೋಜನೆಯಡಿ ಅವಕಾಶವಿದೆ.

ಹೀಗೆ ಸ್ಥಿರವಾದ ಉದ್ಯೋಗ ಬಯಸುವ ಯುವಜನರಿಗೆ ಉದ್ಯೋಗ ದೊರಕಿಸಿಕೊಡಬಲ್ಲ ಕೌಶಲ್ಯ ತರಬೇತಿಯನ್ನು ಸೂಕ್ತ ತರಬೇತಿ ಸಂಸ್ಥೆಗಳ (ಯೋಜನಾ ಬೆಂಬಲ ಸಂಸ್ಥೆ-ಪಿ.ಐ.ಎ.) ಮೂಲಕ ನೀಡಿ ಅವರಿಗೆ ಉದ್ಯೋಗ ದೊರಕಿಸುವುದು "ಸಂಜೀವಿನಿ"ಯ ಕಾರ್ಯತಂತ್ರವಾಗಿದೆ.

ಈ ಕಾರ್ಯಕ್ರಮದ ಕುರಿತಂತೆ ರಾಜ್ಯಮಟ್ಟದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ -'ಸಂಜೀವಿನಿ' (KSRLPS) ಮತ್ತು ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳಲ್ಲಿ ಯೋಜನೆಗೆ ಸಂಬಂಧಿಸಿದ 'ಸಂಜೀವಿನಿ' ಅಧಿಕಾರಿಗಳನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. ಮುಂದಿನ 5 ವರ್ಷಗಳಲ್ಲಿ ಸುಮಾರು 10 ಲಕ್ಷ ಗ್ರಾಮೀಣ ಯುವಜನರಿಗೆ ಉದ್ಯೋಗ ಕಲ್ಪಿಸುವ ಈ ಯೋಜನೆ ಬಡತನ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಮರ್ಥ್ಯವನ್ನು ಹೊಂದಿದೆ.

ಚಿಂತನ

# ಸ್ವಸಹಾಯ ಗುಂಪುಗಳು –ಕಿರು ಸಾಲ ಸೌಲಭ್ಯ

– ಪ್ರೊ|| ಎ.ಎಚ್. ಮಾಸಾಪತಿ*

ಬಡವರು, ದುರ್ಬಲ ಸಮುದಾಯದವರ ಆರ್ಥಿಕ ಪ್ರಗತಿಗಾಗಿ ಸ್ವ–ಸಹಾಯ ಸಂಘಗಳು ಮತ್ತು ಕಿರು ಸಾಲ ಸೌಲಭ್ಯದ ಪಾತ್ರವನ್ನು ಲೇಖಕರು ವಿಶ್ಲೇಷಿಸಿದ್ದಾರೆ.

ಸ್ವಸಹಾಯ ಗುಂಪುಗಳ ಉಳಿತಾಯ ಮತ್ತು ಸಾಲ ಸೌಲಭ್ಯದ ಯಶಸ್ವಿಗಾಗಿ ಅವುಗಳಿಗೆ ಸಂಬಂಧಿಸಿದ ಮಾರ್ಗದರ್ಶಕ ತತ್ವಗಳನ್ನು ಅನುಸಿಸುವ ಅಗತ್ಯವಿದೆ. ಉಳಿತಾಯ ಹಾಗೂ ಸಾಲ ನೀಡಿಕೆಯ ಕ್ಷೇತ್ರಗಳಲ್ಲಿ, ಔಪಚಾರಿಕ ಹಣಕಾಸು ಸಂಸ್ಥೆಗಳು ಸೃಷ್ಟಿಸಿದಂತಹ ತೆರವು ಮತ್ತು ಪರಿಣಾಮಕಾರಿ ತ್ವವಿಹೀನತೆಯನ್ನು, ನಿವಾರಣೆಮಾಡುವ ಕಾರ್ಯದಲ್ಲಿ; ಅನೌಪಚಾರಿಕ ಸಂಘಗಳು ಸಮಾನವಾದ ಪ್ರಾಧಾನ್ಯತೆಯನ್ನು ಹೊಂದಿವೆ. ಔಪಚಾರಿಕ ಹಣಕಾಸು ಸಂಸ್ಥೆಗಳು ತಮ್ಮ ಅವಿಭಾಜ್ಯವಾದ ಸಂಕೀರ್ಣತೆ ಹಾಗೂ ನಿಷ್ಠುರತೆಯ ದೆಸೆಯಿಂದ ಅತ್ಯಧಿಕ ಪ್ರಮಾಣದಲ್ಲಿ ಕಡು ಬಡವರು ಮತ್ತು ದುರ್ಬಲ ಸಮುದಾಯಗಳನ್ನು ತಲುಪಲು ಅಸಮರ್ಥವಾಗಿವೆ. ಉದ್ದೇಶಿತ ಜನರ ಪರಿಸ್ಥಿತಿ ಹಾಗೂ ಅಗತ್ಯತೆಗೆ ವಿಧೇಯವಾದ ಯಾಂತ್ರಿಕ ಕೌಶಲ್ಯವನ್ನು ಅನುಸರಿಸಬೇಕೆಂಬ ಸಂಗತಿಯು; ಹಲವಾರು ಗುಂಪುಗಳ ಅನುಭವಕ್ಕೆ ಸ್ಪಷ್ಟವಾಗಿ ಗೋಚರಿಸಿದೆ. ಸ್ವಸಹಾಯ ಗುಂಪುಗಳು ಕೇವಲ ಉಳಿತಾಯ ಮತ್ತು ಸಾಲ ನೀಡಿಕೆಗೆ ಸೀಮಿತವಾಗಿದ್ದರೂ ಸಹ; ಕಠಿಣ ಕಾಲದಲ್ಲಿ ಸಾಲ–ಸೌಲಭ್ಯದ ಮರು ವಿವರ ಪಟ್ಟಿ ಯೋಜಿಸಲು, ಜನರ ಉತ್ಪಾದನಾ ಅಗತ್ಯಗಳೊಂದಿಗೆ ಅವರ ಬಳಕೆಯ ಅವಶ್ಯಕತೆಗಳನ್ನು ಗುರುತಿಸಲು ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಸಂಬೋಧಿಸುವ ಅವಶ್ಯಕತೆ ಇತ್ಯಾದಿ; ವಿಷಯಗಳನ್ನು ಪರಿಶೀಲಿಸಬೇಕು.



*ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರೋಡ್, ಸುಲ್ತಾನ್‌ಪಾಳ್ಯ, ಬೆಂಗಳೂರು–32

ಆಧುನಿಕ ಜಗತ್ತಿನಲ್ಲಿ ಮಾನವತಾವಾದಿ ದೃಷ್ಟಿಕೋನದ ಕೊರತೆಯಿಂದ ಅನೇಕ ಸಂಕೀರ್ಣ ಸಮಸ್ಯೆಗಳು ಉದ್ಭವಿಸಿವೆ. ಸಾಮಾಜಿಕ ವಹಿವಾಟಿನಲ್ಲಿ ಲಾಭಾಂಶವನ್ನು ಮಾತ್ರ ಪ್ರಧಾನವೆಂದು ಭಾವಿಸಲಾಗುವದಿಲ್ಲ. ಸಾಮಾಜಿಕ ಹೊಣೆಗಾರಿಕೆಯನ್ನು ಸೂಕ್ತವಾಗಿ ನಿರ್ವಹಿಸುವುದರಿಂದ ಉದ್ಯಮಗಳ ಬೆಳವಣಿಗೆಯ ಜೊತೆಗೆ, ಉದ್ಯೋಗಿಗಳೂ ಸಹ ಅಧಿಕ ಪ್ರಯೋಜನ ಪಡೆಯುವಂತಾಗಬೇಕು. ಸುಮಾರು ಹದಿನೇಳು ವರ್ಷ ಪೂರ್ವದಲ್ಲಿ ಸ್ವಸಹಾಯ ಗುಂಪುಗಳನ್ನು ಪ್ರೋತ್ಸಾಹಿಸಲು; ನವದೆಹಲಿಯ ಫ್ರಿಡ್‌ರಿಚ್ ಎಬರ್ಟ್ ಪ್ರತಿಷ್ಠಾನದ ಮೂಲಕ ಒತ್ತು ನೀಡಲಾಗಿದೆ. ನೂತನ ಸಹಸ್ರಮಾನದ ಪ್ರಥಮ ದಶಕದಲ್ಲಿ ಬಾಂಗ್ಲಾದೇಶದ ಚಿತ್ತಗಾಂಗ್ ವಿಶ್ವವಿದ್ಯಾಲಯದ ಪ್ರೊ| ಎಂ. ಯುನೂಸ್ ಅವರೊಂದಿಗೆ 'ಕಿರು ಹಣಕಾಸು' ಕುರಿತು ಸಂದರ್ಶನ ನಡೆಸಲಾಗಿದೆ. ಓರ್ವ ಕಡುಬಡವನ ಜೀವನದಲ್ಲಿ ಕಿರು ಪ್ರಮಾಣದ ಸಾಲ ಸೌಕುಭ್ಯವು ಗಮನಾರ್ಹವಾದ ಬದಲಾವಣೆಯನ್ನು ತರಲು ಸಾಧ್ಯವೆಂಬ ಸಂಗತಿಯನ್ನು ಸಮರ್ಥಿಸಲಾಗಿದೆ.

ಹಲವಾರು ಅಧ್ಯಯನ/ಸಮೀಕ್ಷೆಗಳಿಗೆ ಅನುಸಾರವಾಗಿ ಬಡ ಸಮುದಾಯಗಳಲ್ಲಿ ಸಾಲದ ಅಗತ್ಯತೆಯು, ಉತ್ಪಾದನಾ ಉದ್ದೇಶಕ್ಕಾಗಿ ಮಾತ್ರ ಉಂಟಾಗುವುದಿಲ್ಲ. ಬಡವರು ಅನಾರೋಗ್ಯ ಪೀಡಿತರಾದ ಸಂದರ್ಭದಲ್ಲಿ ಔಷಧೋಪಚಾರ; ಹಬ್ಬ/ಉತ್ಸವ, ವಿವಾಹದಂತಹ ಸಾಮಾಜಿಕ ಹೊಣೆಗಾರಿಕೆ ಉಂಟಾಗುತ್ತದೆ. ಇಂತಹ ಅಗತ್ಯಗಳಿಗೆ ಸಕಾಲಿಕವಾಗಿ ಸ್ಪಂದಿಸಿದರೆ, ಬಡವರು ಮತ್ತು ದುರ್ಬಲ ಸಮುದಾಯಗಳ ಬೇಡಿಕೆಗಳನ್ನು, ಸಮಗ್ರವಾಗಿ ಪೂರೈಸುವ ದಿಶೆಯಲ್ಲಿ ದೂರದ ದಾರಿಯನ್ನು ಕ್ರಮಿಸಲು ಸಾಧ್ಯವಾಗುವದು.

## ಮಾರ್ಗದರ್ಶಕ ತತ್ವಗಳು

ಅಭಿವೃದ್ಧಿ ಪರ ಸಹಕಾರ ಪ್ರತಿಷ್ಠಾನವು (1993) 'ಬಡವರೊಂದಿಗೆ ಬ್ಯಾಂಕ್ ವ್ಯವಹಾರವನ್ನು' ಕುರಿತು ವಿವರಿಸುವ ಸಂದರ್ಭದಲ್ಲಿ ಹದಿನಾರು ಮಾರ್ಗದರ್ಶಕ ತತ್ವಗಳನ್ನು ನಿರೂಪಿಸಲಾಗಿದೆ. ಸ್ವಸಹಾಯ ಗುಂಪುಗಳು [SHGS] , ಸರ್ಕಾರೇತರ ಸಂಸ್ಥೆಗಳು [NGOS] ಮತ್ತು ಬ್ಯಾಂಕುಗಳು 'ಹಣಕಾಸು ಮಧ್ಯಸ್ಥರು' ಎಂದು ವಿವರಿಸಲಾಗಿದೆ.

1] ಸ್ವಸಹಾಯ ಗುಂಪಿನ ಸದಸ್ಯರು, ಸಮಾನ ಮಟ್ಟದವರಾಗಿದ್ದು, ಒಂದೇ ಪ್ರದೇಶದ ನಿವಾಸಿಗಳಾಗಿರಬೇಕು. ಕನಿಷ್ಠ ಪಕ್ಷದಲ್ಲಿ ಐದು ವ್ಯಕ್ತಿಗಳು ಅದರ ಸದಸ್ಯತ್ವ ಪಡೆದಿರಬೇಕು.

2] ಸ್ವಯಂ ಸಹಾಯ ಗುಂಪುಗಳು ಉಳಿತಾಯ ಪ್ರಕ್ರಿಯೆಯನ್ನು ಮುನ್ನಡೆಸಬೇಕು ಹಾಗೂ ಉಳಿತಾಯ ಪ್ರವೃತ್ತಿಯ ಉನ್ನತೀಕರಣಕ್ಕಾಗಿ ಶ್ರಮಿಸಬೇಕು.

3] ಪ್ರಥಮವಾಗಿ, ಉಳಿತಾಯ ಮತ್ತು ದ್ವಿತೀಯವಾಗಿ, ಸಾಲ ನೀಡಿಕೆಗೆ ಆದ್ಯತೆ ನೀಡಬೇಕು. ಉಳಿತಾಯ ಹಾಗೂ ಸಾಲದ ನಡುವೆ ಜೋಡಣೆ ಮಾಡಬೇಕು.

4] ಹಣಕಾಸಿನ ಶಿಸ್ತು ಮತ್ತು ವ್ಯವಸ್ಥೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಬೇಕು.

5] ಸುಲಭವಾದ ಜಮಾ-ಖರ್ಚು [Book-Keeping] ವ್ಯವಸ್ಥೆಯ ಮೂಲಕ ಸ್ವಸಹಾಯ ಗುಂಪುಗಳು ತಮ್ಮ ಕಾರ್ಯಗಳನ್ನು ಪ್ರಾರಂಭಿಸಬೇಕು.

6] ಸ್ವಸಹಾಯ ಗುಂಪುಗಳು [ಸಾಧ್ಯವಾದರೆ, ವಾರದಲ್ಲಿ ಒಂದು ಸಲ] ನಿಯಮಿತವಾಗಿ ಸಭೆಗಳನ್ನು ನಡೆಸಬೇಕು.

7] ಸ್ವಸಹಾಯ ಗುಂಪುಗಳು [ಲಿಖಿತ ಅಥವಾ ಅಲಿಖಿತ ರೂಪದಲ್ಲಿ]; ಪ್ರಾಥಮಿಕ ನಿಯಮ/ಉಪ-ನಿಯಮಗಳನ್ನು ಹೊಂದಿರಬೇಕು.

8] ಗುಂಪುಗಳ ಕಾರ್ಯ ಅಥವಾ ಸ್ಥಾನಮಾನಗಳು, ಸದಸ್ಯರ ನಡುವೆ ಚಕ್ರಾಕಾರದಲ್ಲಿ ತಿರುಗುವಂತೆ [Rotation Process] ಸ್ವ-ಸಹಾಯ ಗುಂಪುಗಳ ಸದಸ್ಯರು ತಮ್ಮ ಧುರೀಣರನ್ನು ಆಯ್ಕೆಮಾಡಬೇಕು.

9] ವ್ಯವಹಾರಿಕ ಕಾರ್ಯಾಚರಣೆಗಳು ಮತ್ತು ಗುಂಪು ಚಟುವಟಿಕೆಗಳ ಒಟ್ಟು ನಿರ್ವಹಣೆಯನ್ನು ಕುರಿತು ಎಲ್ಲ ಸಮಯದಲ್ಲಿ ಪಾರದರ್ಶಕವನ್ನು ಸಂರಕ್ಷಿಸಬೇಕು.

10] ಸ್ವ-ಸಹಾಯ ಗುಂಪುಗಳ ಸದಸ್ಯರಿಗೆ ಪ್ರಾಥಮಿಕ ತರಬೇತಿ ಹಾಗೂ ಮಾರ್ಗದರ್ಶನ ನೀಡಬೇಕು.

11] ಸ್ವಸಹಾಯ ಗುಂಪುಗಳ ಸ್ವಾಯತ್ತತೆಯನ್ನು [Autonomy] ಗೌರವಿಸಬೇಕು.

12] ಗುಂಪು-ಜವಾಬ್ದಾರಿ ಮತ್ತು ಪ್ರತಿಷ್ಠಿತ ವರ್ಗದ ಒತ್ತಡವು ಸಹಾಯಕ ಬಾಧ್ಯತೆಗೆ [collateral-obligation] ಪರ್ಯಾಯವಾಗಬೇಕು.

13] ಆರಂಭದಲ್ಲಿ ಸಾಲದ ಮೊತ್ತವು ಸಣ್ಣ ಪ್ರಮಾಣದಲ್ಲಿರಬೇಕು.

14] ಸರಳೀಕೃತ ಗುಂಪು ಕಾರ್ಯವಿಧಾನ ಹಾಗೂ ನಿಯಂತ್ರಣದ ಮೂಲಕ, ವ್ಯವಹಾರದ ವೆಚ್ಚವನ್ನು ಮಿತಗೊಳಿಸಬೇಕು.

15] ಸಾಧ್ಯವಿದ್ದಷ್ಟು ಶೀಘ್ರವಾಗಿ, ಹಣಕಾಸಿನ ಪರಿಣಾಮ ಕಾರಿ ವ್ಯವಸ್ಥೆಯ ಸಾಧನೆಗಾಗಿ, ಉಳಿತಾಯ ಮತ್ತು ಸಾಲಕ್ಕೆ ಮಾರುಕಟ್ಟೆಯ ಬಡ್ಡಿದರವನ್ನು ಅನ್ವಯಿಸಬೇಕು.

16] ಸ್ವಸಹಾಯ ಗುಂಪುಗಳ ಆರ್ಥಿಕ ಸಂಪನ್ಮೂಲ ಗಳಿಗೆ ಪೂರಕವಾಗಲು ಸೂಕ್ತವಾದ ಹಣಕಾಸು ಅಥವಾ ಸಾಲ ಸೌಲಭ್ಯದ ಮಾರ್ಗದರ್ಶನಕ್ಕಾಗಿ ಹಾಗೂ ಉತ್ಪಾದಕ ಧ್ಯೇಯಗಳಿಗಾಗಿ ಸಾಲ ನೀಡುವ ಸಾಮರ್ಥ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ವಾಣಿಜ್ಯ ಬ್ಯಾಂಕ್‌ಗಳನ್ನು ಪ್ರಶ್ನಿಸಬೇಕು.

## ಕಿರು ಹಣಕಾಸು ವ್ಯವಸ್ಥೆ

ಭಾರತದಲ್ಲಿ ಅನೇಕ ಹಣಕಾಸು ಸಂಸ್ಥೆಗಳಿವೆ. ಔಪಚಾರಿಕ ಹಣಕಾಸು ವ್ಯವಸ್ಥೆ [ಅರ್ಥಾತ್, ಬ್ಯಾಂಕಿಂಗ್ ವ್ಯವಸ್ಥೆ] ಸಹಕಾರಿ ಸಾಲ ವ್ಯವಸ್ಥೆ ಖಾಸಗಿ ಲೇವಾದೇವಿದಾರರು ಇತ್ಯಾದಿ ಸಂಸ್ಥೆಗಳು ಹಣಕಾಸಿನ ವ್ಯವಹಾರದಲ್ಲಿ ನಿರತವಾಗಿವೆ. ಹಣಕಾಸು ಸಂಸ್ಥೆಗಳು ಬಡವರ ಹಣಕಾಸಿನ ಅಗತ್ಯಗಳನ್ನು ಪೂರೈಸುವಾಗ; ಮಹತ್ವದ ಸಾಮಾಜಿಕ ಹೊಣೆಗಾರಿಕೆ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಬೇಕು. ಹಣಕಾಸಿನ ನಿರ್ವಹಣೆ ಉದ್ಯಮಶೀಲತೆ ಮತ್ತು ಮಾರುಕಟ್ಟೆಯ ಕೌಶಲ್ಯಾಭಿವೃದ್ಧಿಗಾಗಿ ಬಡವರು ಸೂಕ್ತವಾದ ತರಬೇತಿ ಪಡೆಯುವ ಅವಕಾಶಗಳನ್ನು ಕಲ್ಪಿಸಬೇಕು. ಸಾಲಗಾರರು ಪಡೆದ ಸಾಲವನ್ನು ಸೂಕ್ತವಾಗಿ ಬಳಕೆ ಮಾಡುವ ಬಗೆಗೆ ಸಾಲಕೊಡುವವರು ಎಚ್ಚರಿಕೆ ವಹಿಸಬೇಕು. ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಕಿರುಹಣಕಾಸು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಬ್ಯಾಂಕುಗಳ ವಿಸ್ತರಣೆಯು ಎಲ್ಲೆಡೆಗೆ ಅಸಾಧ್ಯವೆಂದು ಭಾವಿಸಲಾಗಿದೆ:

[1] ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಬ್ಯಾಂಕ್ ಶಾಖೆಗಳು ಇರುವುದಿಲ್ಲ.

[2] ಗ್ರಾಮೀಣ ಬಡವರು ಬ್ಯಾಂಕಿನಿಂದ ಸಾಲ ಪಡೆಯುವಾಗ ಸೂಕ್ತವಾದ ಭದ್ರತೆ ನೀಡುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ.

[3] ಶಿಕ್ಷಣ ತರಬೇತಿ ಮತ್ತು ಸಕಾಲಿಕ ಮಾಹಿತಿ ಯಿಂದ ಬಡವರು ವಂಚಿತರಾಗಿದ್ದಾರೆ.

ಗ್ರಾಮೀಣ ಕಿರು ಸಾಲ ವ್ಯವಸ್ಥೆಯು, ಗ್ರಾಮಾಂತರ ಹಾಗೂ ಗುಡ್ಡಗಾಡು ಪ್ರದೇಶಗಳ ಜನರ ವಿಮೋಚನೆಯ ಸಾಧನವಾಗಬೇಕು. ಸಾಲದ ಬಲೆಯಲ್ಲಿ ಸಿಲುಕಿಸಲು ಕುತಂತ್ರಗಳನ್ನು ರೂಪಿಸುವ ಖಾಸಗಿ ಲೇವಾದೇವಿದಾರರಿಂದ ಕಡುಬಡವರನ್ನು ಮುಕ್ತಗೊಳಿಸಬೇಕು. ವಾಣಿಜ್ಯ ಬ್ಯಾಂಕುಗಳು ಹಾಗೂ ಕೃಷಿ ಪತ್ತಿನ ಸಹಕಾರಿ ಸಂಘಗಳು ನಿಗದಿಪಡಿಸಿದ ಬಡ್ಡಿದರಕ್ಕಿಂತಲೂ; ಕಿರುಸಾಲ ನೀಡಿಕೆಯ ವ್ಯವಸ್ಥೆಯು ವಿಧಿಸುವ ಬಡ್ಡಿ ದರವು ಹೆಚ್ಚಾಗಬಾರದು. ಖಾಸಗಿ ವ್ಯಕ್ತಿಗಳ ಮತ್ತು ಸಾಂಪ್ರದಾಯಿಕ ಹಣಕಾಸು ಸಂಸ್ಥೆಗಳಿಂದ ಗ್ರಾಮೀಣ ಬಡವರು ಕಷ್ಟ ನಷ್ಟಗಳನ್ನು ಅನುಭವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂತಹ ಆಘಾತಕಾರಿ ಪ್ರಕರಣಗಳು ಸಾಕಷ್ಟು ಬೆಳಕಿಗೆ ಬಂದಿವೆ.

ವಿಶ್ವಸಂಸ್ಥೆಯು 2005ನೇ ವರ್ಷವನ್ನು 'ಅಂತರ-ರಾಷ್ಟ್ರೀಯ ಕಿರುಸಾಲದ ವರ್ಷ' ಎಂದು; ಘೋಷಣೆ ಮಾಡಿದೆ. ವಿಶ್ವ ಸಂಸ್ಥೆಯ ಮಾಜಿ ಪ್ರಧಾನ

ಕಾರ್ಯದರ್ಶಿ ಕೋಫಿಅನ್ನಾನ್ ಕಿರು ಹಣಕಾಸು ವ್ಯವಸ್ಥೆಯ ಪ್ರಾಮುಖ್ಯತೆಯನ್ನು ಸಮರ್ಥಿಸಿದ್ದಾರೆ. ಜನರು ಹಣಕಾಸಿನ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಭಾಗಿ ಆಗದಿರುವಂತೆ ಅಡ್ಡಿ ಆತಂಕಗಳನ್ನು ಮಾಡುವ ಕಾರಣಗಳನ್ನು ಕಂಡುಹಿಡಿಯಬೇಕು. ಕಿರು-ಹಣಕಾಸು ವ್ಯವಸ್ಥೆಯಲ್ಲಿ ಕೆಲವು ವಿಶಿಷ್ಟತೆಗಳಿವೆ. ಅದು ಬಡವರಿಗೆ ಅತ್ಯಂತ ಪ್ರಯೋಜನಕಾರಿ ಆಗಿದೆ. ಕಿರು-ಸಾಲ ಸೌಲಭ್ಯವು ಅಲ್ಪಪ್ರಮಾಣದ್ದಾಗಿರುವದರಿಂದ ಬಡವರು ಯಾವದೇ ಪ್ರಕಾರದ ಭದ್ರತೆ ನೀಡುವ ಅಗತ್ಯ ಇರುವದಿಲ್ಲ. ಆದರೆ ಹಣಕಾಸಿನ ಸದ್ಬಳಕೆಯನ್ನು ಕುರಿತು ಬಡವರಿಗೆ ಸೂಕ್ತವಾದ ಮಾರ್ಗದರ್ಶನ ಮಾಡಬೇಕಾಗುತ್ತದೆ.

## ಹಣಕಾಸು ನಿರ್ವಹಣೆಯ ಸಮಸ್ಯೆ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಮುಕ್ತವಾದ ಮಾರುಕಟ್ಟೆಯ ಸಮಗ್ರವಾದ ನಿರ್ವಹಣೆಯು ಲಾಭಾಂಶದ ಮೇಲೆ ಕೇಂದ್ರೀಕೃತವಾಗಿದೆ. ಓರ್ವ ಯಶಸ್ವಿಯಾದ ವ್ಯಾಪಾರಸ್ಥ ಅಥವಾ ಉದ್ದಿಮೆದಾರನಿಗೆ ಲಾಭಗಳಿಕೆಯು 'ಯಶಸ್ಸಿನ ಮಾನದಂಡ' ಆಗಿದೆ. ಅವನು ಸಂಪಾದಿಸಿದ ಲಾಭದ ಗಾತ್ರವು ಬೃಹದಾಕಾರ ಹೊಂದಿದಂತೆ ಅವನು ಸಫಲತೆಯ ಶಿಖರವನ್ನು ಸ್ಪರ್ಶಿಸುವನು. ಇಂತಹ ಯಶಸ್ಸಿಗಾಗಿ ಮುಕ್ತ ಮಾರುಕಟ್ಟೆಯು ಹೊಸ ಅವಕಾಶಗಳನ್ನು ಸಲ್ಲಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ಮಾನವನ ಸಂಕೀರ್ಣ ಸಮಸ್ಯೆಗಳನ್ನು ಏಕೈಕ ದೃಷ್ಟಿಯಿಂದ ವಿಶ್ಲೇಷಿಸಿ ಮಾನವನ ಪ್ರಾಥಮಿಕ ಘನತೆ/ಗೌರವವನ್ನು ಅಪಮೌಲ್ಯಗೊಳಿಸುವಂತೆ ಕಾಣುತ್ತದೆ. ಹಣಕಾಸು ಸಂಪಾದನೆಯು ಕೇವಲ 'ಸಾಧನೆ' ಮಾತ್ರ ಆಗಿದೆ. ಆದರೆ ಅದನ್ನು 'ಸಿದ್ಧಿ' ಎಂದು ಪರಿಗಣಿಸಲಾಗಿಲ್ಲ ಮಾನವನು ಹಣಕಾಸು ಗಳಿಕೆಯ ಯಂತ್ರವಾಗಿಲ್ಲ. ಅವನ ಅಗತ್ಯಗಳು ವೈವಿಧ್ಯಮಯ ಮತ್ತು ವ್ಯಾಪಕ ಸ್ವರೂಪ ಹೊಂದಿವೆ. ಹಣಕಾಸು ಕ್ಷೇತ್ರದ ವ್ಯಾಪ್ತಿಯನ್ನು ಅತಿಕ್ರಮಿಸಿ ಅಗತ್ಯಗಳು ಮುಂದುವರಿದಿವೆ.

ಸಾರ್ವಜನಿಕರ ಅಗತ್ಯಗಳನ್ನು ವ್ಯಾಪಕವಾದ ದೃಷ್ಟಿಕೋನದಿಂದ ಪರಿಶೀಲಿಸಬೇಕು. ಇಂತಹ ವಹಿವಾಟಿನಲ್ಲಿ ವೈಯಕ್ತಿಕ ಲಾಭಗಳಿಕೆಗಿಂತಲೂ ಸಾಮೂಹಿಕ ಹಿತಾಶಕ್ತಿಯು ಮಹತ್ವದ ಅಂಶ ವಾಗಿರುತ್ತದೆ. ಸಾಮಾಜಿಕ ವಹಿವಾಟಿನ ಕಂಪನಿಯಲ್ಲಿ ಪಾಲುದಾರರು ಹೂಡಿದ ಬಂಡವಾಳವನ್ನು ಮಾತ್ರ ಹಿಂತಿರುಗಿ ಪಡೆಯುತ್ತಾರೆ. ಆದರೆ ಲಾಭವನ್ನು ಸಂಸ್ಥೆಯ ಸೇವಾ ಸುಧಾರಣೆ ಮತ್ತು ವಿಸ್ತರಣೆಗಾಗಿ ವಿನಿಯೋಗಿಸಲಾಗುತ್ತದೆ. ಬಡವರ ಸಂಸ್ಥೆಗಳು ಕೈಕೊಳ್ಳುವಂತಹ ಕಾರ್ಯಕ್ರಮಗಳಿಂದ ಉಂಟಾಗುವ ಪ್ರಯೋಜನಗಳ ಪ್ರಮಾಣದ ವಿಸ್ತರಣೆ ಹಾಗೂ ಪ್ರಗತಿಪರತೆಯಲ್ಲಿ ವಿಶ್ವಾಸವನ್ನು ಬೆಳೆಸಬೇಕು.



ಸರ್ವ ಸಾಮಾಜಿಕ ವಹಿವಾಟು ಕಂಪನಿಗಳು 'ಲಾಭ-ನಷ್ಟ ರಹಿತ' ವಿಧಾನದಲ್ಲಿಯೇ ಕಾರ್ಯನಿರ್ವಹಿಸಬೇಕೆಂಬ ಒತ್ತಾಯವಿಲ್ಲ. ಇಂತಹ ವಹಿವಾಟಿನಲ್ಲಿ ಲಾಭದಾಯಕ ಉದ್ದಿಮೆಗಳೂ ಸಹ ಸೇರಬಹುದಾಗಿದೆ. ಆದರೆ ಲಾಭಾಂಶವನ್ನು ಮಾತ್ರ ಬಡವರಿಗೆ ವಿತರಣೆ ಮಾಡಲಾಗುತ್ತದೆ. ಲಾಭ-ನಷ್ಟರಹಿತ ಕಂಪನಿಗಳ ಸಂಘಟನೆ ಮತ್ತು ಕಾರ್ಯ ತಂತ್ರಗಳನ್ನು ಕುರಿತು ಆಳವಾದ ಅಧ್ಯಯನ ನಡೆಸುವ ಅಗತ್ಯವಿದೆ. ಅವುಗಳ ಅಸ್ತಿತ್ವ ಹಾಗೂ ವಿಕಾಸದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವಂತಹ ವಿಧಾನದ ಬಗೆಗೆ ಸಮಾಲೋಚನೆ ಮಾಡಬೇಕಾಗುತ್ತದೆ. ಬಂಡವಾಳ ಹೂಡಿಕೆದಾರರು ಮತ್ತು ಸಾಮಾಜಿಕ ಸೇವಾ ಕಾರ್ಯಗಳ ನಡುವೆ ಉತ್ತಮ ಸಂಬಂಧವಿರಬೇಕು.

ಸಾಂಸ್ಥಿಕ ಹಣಕಾಸು ವ್ಯವಸ್ಥೆ ಅರ್ಥಾತ್ ಬ್ಯಾಂಕಿಂಗ್ ವ್ಯವಸ್ಥೆಯು ಬಡವರ ಹಣಕಾಸಿನ ಅಗತ್ಯಗಳನ್ನು ಪೂರೈಸುವಂತಹ ಸಾಮಾಜಿಕ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ವಿಫಲವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯು ಯಶಸ್ವಿಯಾಗಲು ಕೆಲವು ಕಾರಣಗಳನ್ನು ಕಂಡುಹಿಡಿಯಲಾಗಿದೆ. ಅದಲ್ಲದೆ ಸಹಕಾರಿ ಸಾಲ ವ್ಯವಸ್ಥೆಯ ವಿಫಲತೆಯ ದೆಸೆಯಿಂದ ಗ್ರಾಮೀಣ ಬಡವರು ಕಷ್ಟ-ನಷ್ಟಗಳನ್ನು ಅನುಭವಿಸುತ್ತಾರೆ ಅವರು ತಮ್ಮ ಸಾಲದ ಅಗತ್ಯಗಳಿಗಾಗಿ ಖಾಸಗಿ ಲೇವಾದೇವಿದಾರರನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಗಿರುವದರಿಂದ ಬಡಸಾಲಗಾರರು ಅಸಹಾಯಕ ಪರಿಸ್ಥಿತಿಯಲ್ಲಿ ಶೋಷಣೆಗೆ ಗುರಿಯಾಗುತ್ತಾರೆ.

ಎಲ್ಲರೂ ಸಂಘಟಿತರಾಗಿ ಸಹಭಾಗಿತ್ವದೊಂದಿಗೆ ಕಾರ್ಯನಿರ್ವಹಿಸಿ ಜನಸಾಮಾನ್ಯರ ಜೀವನದ ಸ್ಥಿತಿಗತಿಯ ಸುಧಾರಣೆಗೆ ಪ್ರೋತ್ಸಾಹನೆ ನೀಡುವಂತಹ ಹಣಕಾಸು ವ್ಯವಸ್ಥೆಯನ್ನು ರಚಿಸುವ ಧ್ಯೇಯವನ್ನು ಅಂತರ ರಾಷ್ಟ್ರೀಯ ಸಮುದಾಯ ಹೊಂದಿದೆ. ದೀರ್ಘಾವಧಿಯಲ್ಲಿ ಒಂದು ವಿಶ್ವಾಸಾರ್ಹವಾದ ಹಣಕಾಸು ವ್ಯವಸ್ಥೆಯು ಅಭಿವೃದ್ಧಿಪರ ಮಾರ್ಗವನ್ನು ನಿರ್ಮಿಸಬಲ್ಲದು.

## ಕಿರುಸಾಲ ಅಭಿವೃದ್ಧಿ ನಿಧಿ

ಕೇಂದ್ರ ಸರ್ಕಾರದ ಹಣಕಾಸು ಸಚಿವರು 2000-01ರ ತಮ್ಮ ಬಜೆಟ್ ಭಾಷಣದಲ್ಲಿ ನಿರೂಪಿಸಿದ ಪ್ರಕಾರ ನಬಾರ್ಡ್‌ದಲ್ಲಿ 100 [ನೂರು] ಕೋಟಿ ರೂ. ಮೊತ್ತದ ನಿಧಿಯನ್ನು ಸ್ಥಾಪಿಸಲಾಗಿದೆ. ಸಾಲ ಕೊಡುವ ಸಂಸ್ಥೆಗಳಿಗೆ ಸಾಲ ನೀಡುವದಷ್ಟೇ ಅಲ್ಲದೆ ಅದಕ್ಕೆ ಸಂಬಂಧಿಸಿದ ಮಾರುಕಟ್ಟೆ ಸೌಲಭ್ಯ ತಂತ್ರಜ್ಞಾನ ಸೇವೆಯನ್ನು ಪೂರೈಸುವಂತಹ ಹೊಣೆಗಾರಿಕೆಯೂ ಸಹ ಇರಬೇಕಾಗುತ್ತದೆ. ಈ ದಿಶೆಯಲ್ಲಿ 'ಕಿರು ಸಾಲ ಅಭಿವೃದ್ಧಿ ನಿಧಿ' ಸ್ಥಾಪನೆಯು ಒಂದು ಮಹತ್ವದ ಕ್ರಮ ಆಗಿದೆ :

[1] ಬ್ಯಾಂಕುಗಳು, ಸರ್ಕಾರಿ ಸಂಘಟನೆಗಳು ಮತ್ತು ಸ್ವಸಹಾಯ ಗುಂಪುಗಳಿಗೆ ತರಬೇತಿ.

[2] ಕಿರುಸಾಲ ನೀಡುವ ಸಂಸ್ಥೆಗಳ ಸ್ಥಾಪನೆಗೆ ಆರಂಭಿಕ ಹಣಕಾಸು ವ್ಯವಸ್ಥೆ.

[3] ಸ್ವಸಹಾಯ ಗುಂಪುಗಳ ಸಶಕ್ತೀಕರಣ

[4] ನೂತನ ವಿತರಣಾ ವ್ಯವಸ್ಥೆಯ ವಿವರಣೆ

[5] ಸಂಶೋಧನೆ ಇತ್ಯಾದಿ ಕಾರ್ಯಕ್ರಮಗಳಿಗೆ ಹಣಕಾಸು ನೆರವು ನೀಡಿಕೆ.

ಆರ್.ಬಿ.ಐ ಹಾಗೂ ನಬಾರ್ಡ್ ತಲಾ ನಾಲ್ವತ್ತು ಕೋಟಿ ರೂ.ಗಳು ಮತ್ತು ಹನ್ನೊಂದು ಸರ್ಕಾರಿ ಕ್ಷೇತ್ರದ ಬ್ಯಾಂಕುಗಳು ಇಪ್ಪತ್ತು ಕೋಟಿ ರೂ.ಗಳನ್ನು ಒದಗಿಸಿವೆ.

ಎಲ್ಲ ಹಣಕಾಸು ಸಂಸ್ಥೆಗಳು ಸಂವಿಧಾನಿಕ ಧ್ಯೇಯೋದ್ದೇಶಗಳನ್ನು ಅನುಷ್ಠಾನ ಮಾಡುವ ಮಾರ್ಗದಲ್ಲಿ ಮುನ್ನಡೆಯ ಬೇಕಾಗುತ್ತದೆ. ವಿಶಿಷ್ಟವಾಗಿ ಉನ್ನತ ಮಟ್ಟದ ಸಂಸ್ಥೆಗಳು ಜನಪರ/ಪ್ರಗತಿಶೀಲ ಧೋರಣೆಯನ್ನು ಅನುಸರಿಸ ಬೇಕಾಗುತ್ತದೆ. ಆಧುನಿಕ ಕಾರ್ಪೊರೇಟ್ ಕ್ಷೇತ್ರದ ಶ್ರೀಮಂತ ಉದ್ದಿಮೆದಾರರು ಮತ್ತು ವ್ಯಾಪಾರಸ್ಥರು ಪ್ರಭಾವಕ್ಕೆ ಒಳಗಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ನಿರ್ಲಕ್ಷಿಸಬಾರದು. ಅಸಂಖ್ಯಾತ ಬಡವರು, ರೈತರು, ಕಾರ್ಮಿಕರು ಹಾಗೂ ದುರ್ಬಲ ಸಮುದಾಯಗಳ ಪ್ರಗತಿಗಾಗಿ; 'ಕಿರುಸಾಲ ಅಭಿವೃದ್ಧಿ ನಿಧಿಯ' ಪ್ರಮಾಣದಲ್ಲಿ ಸಾಕಷ್ಟು ಏರಿಕೆ ಆಗಬೇಕು.

# ಸುಗ್ರಾಮ

## – ಒಂದು ಕಿರು ಪರಿಚಯ

– ಶ್ರೀಮತಿ ಪದ್ಮಿನಿ ಅನಂತ್

**ಸುಗ್ರಾಮ** – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ – ಕರ್ನಾಟಕವನ್ನು, 2010ರಲ್ಲಿ ಸಂಘಗಳ ನೋಂದಣಿ ಕಾಯ್ದೆಯನ್ವಯ ನೋಂದಾಯಿಸಲ್ಪಡಲಾಗಿದ್ದು, ಕರ್ನಾಟಕದ ಗ್ರಾಮಪಂಚಾಯತಿಗಳ ಚುನಾಯಿತ ಮಹಿಳಾ ಪ್ರತಿನಿಧಿಗಳ ಹಕ್ಕು ಮತ್ತು ಆಸಕ್ತಿಯನ್ನು ಪ್ರತಿನಿಧಿಸುತ್ತಿರುವ ಒಂದು ಸಂಘ. ಚುನಾಯಿತ ಮಹಿಳಾ ಪ್ರತಿನಿಧಿಗಳು, ಉತ್ತಮ ನೀತಿಗಳನ್ನು ವಕಾಲತ್ತು ಮಾಡುವುದು ಮತ್ತು ಬದಲಾವಣೆಗಳನ್ನು ತರುವಲ್ಲಿ ಐಕ್ಯಮತದಿಂದ ಒಟ್ಟಾಗಿ ಧನಿಗೂಡಿಸಲು ಸುಗ್ರಾಮ ಒಂದು ವೇದಿಕೆಯಾಗಿದೆ.

ಸುಗ್ರಾಮವು ಸದಸ್ಯತ್ವ ಆಧಾರಿತ ಸಂಘವಾಗಿದೆ. ಪ್ರಸಕ್ತವಾಗಿ 17 ಜಿಲ್ಲೆಗಳ 51 ತಾಲ್ಲೂಕುಗಳಲ್ಲಿ ಸುಗ್ರಾಮದ ತಾಲ್ಲೂಕು ಸಂಘಗಳನ್ನು ರಚಿಸಲಾಗಿದ್ದು, 3000 ಚುನಾಯಿತ ಮಹಿಳಾ ಸದಸ್ಯರ ಸದಸ್ಯತ್ವವನ್ನು ಹೊಂದಿದೆ.

ಉತ್ತಮ ಆಡಳಿತ ಮತ್ತು ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಪ್ರತಿನಿಧಿತ್ವವಷ್ಟೇ ಅಲ್ಲದೇ, ಸಕ್ರಿಯ ಮತ್ತು ಸಫಲ ನಾಯಕರಾಗಿ ಭಾಗವಹಿಸಲು ಸುಗ್ರಾಮದ ಸದಸ್ಯರು ಇತರ ಸದಸ್ಯರಿಗೆ ಸಹಕಾರ ನೀಡುತ್ತಿದ್ದಾರೆ. ಸದಸ್ಯರ ಸುಸ್ಥಿರ ಪ್ರಯತ್ನಗಳಿಂದ ಸುಗ್ರಾಮವು ಇಂದು ರಾಜ್ಯ ಮಟ್ಟದ ಸಂಘವಾಗಿ ಹೊರಹೊಮ್ಮಿದೆ. ಇದರಿಂದ, ಗ್ರಾಮ ಪಂಚಾಯತಿಯಲ್ಲಿನ ಚುನಾಯಿತ ಮಹಿಳಾ ಸದಸ್ಯರ ಸಂಘಟಿತ ಶಕ್ತಿಯನ್ನು

**ಚುನಾಯಿತ ಮಹಿಳಾ ಪ್ರತಿನಿಧಿಗಳಿಗೆ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಂಡು ಸಮಾಜ ಪರಿವರ್ತಕರನ್ನಾಗಿ ಮಾಡುವಲ್ಲಿ "ಸುಗ್ರಾಮ" ಸಕ್ರಿಯವಾಗಿದೆ**



¸ÀÄUÁæªÀÄzÀ gÁdå ¸ÀAZÁ®£Á ¸Àäw ¸ÀzÀ¸ÀågÀÄ ¸ÀA¨sÁªÀÄR ªÀÄÄRåªÀÄAwæUÀ¼ÉÆA¢UÉ ¸ÀA¸ÀzÀ¸ÀågÀ

ತೋರ್ಪಡಿಸುತ್ತದೆ. ಹಾಗೆಯೇ, ಚುನಾಯಿತ ಸದಸ್ಯರು ಸಮಾಜ ಪರಿವರ್ತಕರಾಗಿ ಮತ್ತು ಸ್ವಾವಾಲಂಬಿಗಳಾಗಿ, ಹಳ್ಳಿಯ/ ಪಂಚಾಯತಿಯ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸುಗ್ರಾಮದ ಸದಸ್ಯರು ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದು, ಸಮುದಾಯ ದಲ್ಲಿನ ಎಲ್ಲಾ ವರ್ಗದವರಿಗೂ ಸರ್ಕಾರದ ಯೋಜನೆಗಳು ದೊರಕುವಂತೆ ಮಾಡುತ್ತಿದ್ದಾರೆ. ಹಾಗೆಯೇ, ಸರ್ಕಾರದ ಯೋಜನೆಗಳು ಸರ್ಮಪಕವಾಗಿ ಕಾರ್ಯಗತವಾಗಿಸುವಂತಹ ನಿಟ್ಟಿನಲ್ಲಿ ತೊಡಗಿಸಿಕೊಂಡಿದ್ದಾರೆ.

ಇದಲ್ಲದೇ, ಸುಗ್ರಾಮದ ತಾಲ್ಲೂಕು ಸಭೆಗಳಲ್ಲಿ ತಮ್ಮ ಸವಾಲುಗಳನ್ನು ಮಂಡಿಸುತ್ತ, ಇತರ ಚುನಾಯಿತ ಮಹಿಳಾ ಸದಸ್ಯರ ಸಹಕಾರ ಹಾಗೂ ಬೆಂಬಲ ದೊಂದಿಗೆ ಐಕ್ಯಮತದಿಂದ ಧನಿಎತ್ತಿ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.

## ಸುಗ್ರಾಮದ ಸಾಧನೆಗಳು:

ಸುಗ್ರಾಮದ ಯಶಸ್ಸು ವ್ಯಾಪಕವಾಗಿದೆ. ಸುಗ್ರಾಮದ ಸದಸ್ಯರು ತಮ್ಮ ಸಂಘದ ಸಭೆಗಳಲ್ಲಿ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮಾಹಿತಿ ಸಂಗ್ರಹಿಸಿ, ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರಲ್ಲದೇ, ಇತರೆ, ಚುನಾಯಿತ ಮಹಿಳಾ ಸದಸ್ಯರನ್ನು ಉತ್ತೇಜಿಸುತ್ತಿದ್ದಾರೆ. ಸುಗ್ರಾಮದ ಪ್ರಮುಖ ಸಾಧನೆಗಳು ಈ ಕೆಳಕಂಡಂತಿವೆ:

## ಸರ್ಕಾರದ ನೀತಿಗಳ ಬಗ್ಗೆ ವಕಾಲತ್ತು

- ಗ್ರಾಮಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳ ರಚನೆ, ಗೌರವಧನ ಮತ್ತು ಸಭಾಭತ್ಯೆಗಳು ಸಂದಾಯವಾಗದಿರುವಂತಹ ಸಮಸ್ಯೆಗಳನ್ನು ಪರಿಹರಿಸುವುದು
- ಪಂಚಾಯತಿ ಅಧ್ಯಕ್ಷರ ಅವಧಿಯನ್ನು ಬದಲಾವಣೆ ಮಾಡುವ ಕುರಿತು (ಕರ್ನಾಟಕ ಸರ್ಕಾರವು ಅವಧಿಯನ್ನು ಹೆಚ್ಚಿಸುವ ಕುರಿತು ಪರಿಗಣಿಸುತ್ತಿದೆ)



**ಗೌರಿಬಿದನೂರಿನಲ್ಲಿ ಆಯೋಜಿಸಲಾದ ತಾಲ್ಲೂಕು ಸುಗ್ರಾಮದ ಸಭೆ**

- ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರಿಗೆ ಶೇಕಡಾ 50 ರಷ್ಟು ಮೀಸಲಾತಿ

## ಉತ್ತಮ ಆಡಳಿತಕ್ಕೆ ಉತ್ತೇಜನ ನೀಡುವುದು ಮತ್ತು ಹೊಣೆಗಾರಿಕೆ

- ಗ್ರಾಮ ಪಂಚಾಯತಿಗಳಲ್ಲಿ ಮತ್ತು ತಾಲ್ಲೂಕುಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ
- ವಸತಿ ಮತ್ತು ಪಿಂಚಣಿ ಯೋಜನೆಗಳಿಗೆ ಅರ್ಹತಾನುಸಾರವಾಗಿ ಫಲಾನುಭವಿಗಳನ್ನು ಗುರುತಿಸಿ, ಆಯ್ಕೆ ಮಾಡುವುದು
- ಸ್ಥಳೀಯ ಮಕ್ಕಳ ಶಿಶುವಿಹಾರಗಳು-ಅಂಗನವಾಡಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸುವುದು
- ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಪರಿವೀಕ್ಷಿಸುವುದು

## ಪರಿವರ್ತಕರಾಗುವ ನಿಟ್ಟಿನಲ್ಲಿ ಸದಸ್ಯರಿಗೆ ಬೆಂಬಲ ನೀಡುವುದು

- ಆರೋಗ್ಯ, ಶಿಕ್ಷಣ, ನೀರು ಮತ್ತು ನೈರ್ಮಲ್ಯ ಮತ್ತು ಬಡತನ ನಿವಾರಣೆ ಯಂತಹ ಸಾಮಾಜಿಕ ಭದ್ರತೆ ನೀಡುವ ಸರ್ಕಾರಿ ಯೋಜನೆಗಳು ಮತ್ತು ಇತರೆ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುವಂತೆ ಖಾತ್ರಿ ಪಡಿಸುವುದು
- ಸಮುದಾಯದಲ್ಲಿರುವ ವೃದ್ಧರು ಮತ್ತು ಹೆಣ್ಣುಮಕ್ಕಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದು
- ಗ್ರಾಮ ಪಂಚಾಯತಿಯಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಯ್ದುಕೊಳ್ಳುವುದು

## ಲಿಂಗತ್ವ ಹಾಗೂ ಸಾಮಾಜಿಕ ನ್ಯಾಯ

- ಮನೆ ಮತ್ತು ಕಾರ್ಯಸ್ಥಳಗಳಲ್ಲಿ ಮಹಿಳೆಯರ ಮೇಲಿನ ಹಿಂಸೆಗಳನ್ನು ತಡೆಯುವುದು ಮತ್ತು ಅರಿವು ಮೂಡಿಸುವುದು
- ಲಿಂಗಾಧಾರಿತ ಭ್ರೂಣ ಹತ್ಯೆ ತಡೆ ಅಭಿಯಾನ ಮತ್ತು ಬಾಲ್ಯ ವಿವಾಹವನ್ನು ತಡೆಗಟ್ಟುವುದು
- ರಾಜ್ಯ ಮಹಿಳಾ ಆಯೋಗ/ಸಹಾಯವಾಣಿಗಳೊಂದಿಗೆ ನಿಯಮಿತವಾಗಿ ಸಂವಾದ ಮತ್ತು ಸಂಯೋಜನೆ ನಡೆಸುವುದು

ಸುಗ್ರಾಮವು ಇಂದು ತಾನು ಕಾರ್ಯನಿರ್ವಹಿಸುತ್ತವ ಜಿಲ್ಲೆ/ತಾಲ್ಲೂಕಿನಲ್ಲಿ ಗುರುತಿಸಲಾಗುತ್ತಿದ್ದು, ಸುಗ್ರಾಮದ ಸದಸ್ಯರಾಗಿ ಚುನಾಯಿತ ಮಹಿಳೆಯರು ತಮ್ಮ ನಾಯಕತ್ವವನ್ನು ಬಲಪಡಿಸಿಕೊಂಡಿರುವರಲ್ಲದೇ, ಮಾದರಿ ಗ್ರಾಮ ಪಂಚಾಯತಿಯನ್ನಾಗಿ ತಮ್ಮ ಪಂಚಾಯತಿಯನ್ನು ಮಾಡಬೇಕೆನ್ನುವ ಕನಸನ್ನು ನನಸಾಗಿಸುವತ್ತ ಕಾರ್ಯನಿರತರಾಗಿದ್ದಾರೆ.

ಚುನಾಯಿತ ಮಹಿಳಾ ಸದಸ್ಯರನ್ನೊಳಗೊಂಡ ಸುಗ್ರಾಮವನ್ನು ರಚಿಸುವಲ್ಲಿ ದಿ ಹಂಗರ್ ಪ್ರಾಜೆಕ್ಟ್ ಸಂಸ್ಥೆಯು ಪ್ರಮುಖವಾದ ಪಾತ್ರವನ್ನು ವಹಿಸಿದೆ.

ಸುಗ್ರಾಮದ ಬಗ್ಗೆ ಹೆಚ್ಚಿನ ಮಾಹಿತಿಗೆ ಮತ್ತು ಸುಗ್ರಾಮದ ಸದಸ್ಯತ್ವವನ್ನು ಪಡೆಯಲು, ಸಂಪರ್ಕಿಸಿ:

**ಸುಗ್ರಾಮ – ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ – ಕರ್ನಾಟಕ**

ವಿಳಾಸ: c/o ದಿ ಹಂಗರ್ ಪ್ರಾಜೆಕ್ಟ್, ನಂ. 4, 2ನೇ ಮಹಡಿ, ಬರ್ಲಿ ಅಡ್ಡರಸ್ತೆ, ಲಾಂಗ್ ಫರ್ಡ್ ಟೌನ್, ಶಾಂತಿನಗರ, ಬೆಂಗಳೂರು – 560 025.

ಶ್ರೀಮತಿ. ಎಂ. ರೇಣುಕ, ಅಧ್ಯಕ್ಷರು – 9972261319,

ಶ್ರೀಮತಿ. ಸುನೀತ ಜಗದೀಶ್, ಕಾರ್ಯದರ್ಶಿ – 9611063639 ಅಥವಾ

ಶ್ರೀಮತಿ. ಪದ್ಮಿನಿ ಅನಂತ್, ನಿರ್ದೇಶಕರು – 7847815159,

ಅಂತರ್ಜಾಲ: www.sugrama.org

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 25-11-2013ರಲ್ಲಿದ್ದಂತೆ

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011-12ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂಗಳು | 2012-13ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ, ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ.ಗಳು | ಒಟ್ಟಾರೆ ಶೇಕಡ ವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|
| ಉತ್ತರ ಕನ್ನಡ | 208 | 100 | 100 | 54 | 64 | 97 | 100 | 85 | 1 |
| ಧಾರವಾಡ | 127 | 100 | 100 | 0 | 99 | 99 | 100 | 83 | 2 |
| ದಕ್ಷಿಣ ಕನ್ನಡ | 203 | 100 | 100 | 64 | 52 | 91 | 91 | 83 | 3 |
| ದಾವಣಗೆರೆ | 230 | 100 | 100 | 3 | 98 | 97 | 100 | 83 | 4 |
| ರಾಮನಗರ | 130 | 100 | 100 | 0 | 93 | 94 | 100 | 81 | 5 |
| ಗದಗ | 106 | 100 | 100 | 0 | 91 | 96 | 87 | 79 | 6 |
| ಉಡುಪಿ | 146 | 100 | 100 | 40 | 63 | 88 | 78 | 78 | 7 |
| ಮಂಡ್ಯ | 232 | 100 | 100 | 2 | 81 | 96 | 72 | 75 | 8 |
| ಹಾವೇರಿ | 208 | 100 | 100 | 0 | 64 | 90 | 78 | 72 | 9 |
| ಶಿವಮೊಗ್ಗ | 260 | 100 | 100 | 4 | 47 | 87 | 96 | 72 | 10 |
| ಮೈಸೂರು | 235 | 100 | 100 | 1 | 47 | 68 | 80 | 66 | 11 |
| ಕೊಡಗು | 98 | 100 | 100 | 11 | 17 | 82 | 89 | 66 | 12 |
| ಹಾಸನ | 258 | 100 | 100 | 0 | 25 | 83 | 82 | 65 | 13 |
| ಬಾಗಲಕೋಟೆ | 163 | 100 | 98 | 3 | 52 | 93 | 43 | 64 | 14 |
| ಬೆಂಗಳೂರು (ನ) | 86 | 100 | 100 | 16 | 17 | 60 | 86 | 63 | 15 |
| ಬೆಂಗಳೂರು (ಗ್ರಾ) | 98 | 100 | 100 | 4 | 25 | 58 | 92 | 63 | 16 |
| ಚಿಕ್ಕಬಳ್ಳಾಪುರ | 151 | 100 | 99 | 0 | 46 | 86 | 40 | 61 | 17 |
| ಚಾಮರಾಜನಗರ | 120 | 100 | 100 | 0 | 35 | 84 | 50 | 61 | 18 |
| ಚಿಕ್ಕಮಗಳೂರು | 226 | 100 | 100 | 18 | 18 | 68 | 41 | 57 | 19 |
| ಬಳ್ಳಾರಿ | 189 | 100 | 98 | 0 | 33 | 65 | 36 | 55 | 20 |
| ಗುಲ್ಬರ್ಗಾ | 220 | 98 | 65 | 0 | 86 | 59 | 21 | 54 | 21 |
| ತುಮಕೂರು | 321 | 100 | 99 | 0 | 21 | 51 | 51 | 53 | 22 |
| ಕೊಪ್ಪಳ | 134 | 100 | 100 | 4 | 16 | 65 | 35 | 53 | 23 |
| ಚಿತ್ರದುರ್ಗ | 185 | 100 | 100 | 0 | 11 | 72 | 18 | 50 | 24 |
| ಕೋಲಾರ | 156 | 100 | 98 | 0 | 11 | 62 | 26 | 49 | 25 |
| ಬೀದರ | 175 | 100 | 89 | 0 | 10 | 45 | 34 | 46 | 26 |
| ಬಿಜಾಪುರ | 199 | 100 | 67 | 0 | 33 | 62 | 6 | 44 | 27 |
| ಬೆಳಗಾವಿ | 486 | 99 | 94 | 1 | 9 | 61 | 3 | 44 | 28 |
| ರಾಯಚೂರು | 165 | 99 | 40 | 1 | 0 | 18 | 9 | 27 | 29 |
| ಯಾದಗಿರಿ | 117 | 100 | 5 | 0 | 1 | 40 | 9 | 25 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ನವೆಂಬರ್ 2013)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) A | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ B | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) C | ವಿಳಂಬ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ D | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು E | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ F | ಅಂತಿಮವಾಗಿ ಪಡೆದ ಶ್ರೇಣಿ [(ಆ)ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ)ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] G |
|---|---|---|---|---|---|---|---|
| ದಾವಣಗೆರೆ | 10677 | 10587 | 0.4 | 5 | 561 | 2 | 1 |
| ಮಂಡ್ಯ | 3675 | 3648 | 0 | 1 | 204 | 5 | 2 |
| ಮೈಸೂರು | 6437 | 6118 | 0.4 | 5 | 221 | 4 | 3 |
| ಚಿಕ್ಕಬಳ್ಳಾಪುರ | 4108 | 3902 | 0.5 | 8 | 342 | 3 | 4 |
| ಉತ್ತರ ಕನ್ನಡ | 2189 | 2034 | 0 | 1 | 156 | 6 | 5 |
| ರಾಮನಗರ | 5791 | 5871 | 1.1 | 16 | 579 | 1 | 6 |
| ಹಾವೇರಿ | 1810 | 1617 | 0.7 | 10 | 120 | 8 | 7 |
| ಶಿವಮೊಗ್ಗ | 1870 | 1895 | 0.2 | 3 | 110 | 11 | 8 |
| ಗದಗ | 1366 | 1148 | 2.4 | 18 | 136 | 7 | 9 |
| ಬಾಗಲಕೋಟೆ | 2031 | 1767 | 0.9 | 11 | 112 | 10 | 10 |
| ಗುಲ್ಬರ್ಗಾ | 3009 | 2862 | 3.7 | 20 | 120 | 8 | 11 |
| ದಕ್ಷಿಣ ಕನ್ನಡ | 1545 | 1430 | 0.3 | 4 | 77 | 15 | 12 |
| ಬೆಳಗಾವಿ | 4721 | 4399 | 1 | 13 | 100 | 12 | 13 |
| ಧಾರವಾಡ | 1753 | 1729 | 1 | 13 | 97 | 13 | 14 |
| ಹಾಸನ | 1542 | 1487 | 1.1 | 16 | 90 | 14 | 15 |
| ಕೋಲಾರ | 901 | 623 | 0.5 | 8 | 60 | 19 | 16 |
| ಕೊಪ್ಪಳ | 742 | 552 | 0.4 | 5 | 57 | 21 | 17 |
| ತುಮಕೂರು | 1787 | 2078 | 3.9 | 22 | 68 | 17 | 18 |
| ಚಿಕ್ಕಮಗಳೂರು | 690 | 672 | 3.7 | 20 | 62 | 18 | 19 |
| ಉಡುಪಿ | 828 | 753 | 4.6 | 25 | 75 | 16 | 20 |
| ಚಾಮರಾಜನಗರ | 244 | 319 | 0.9 | 11 | 24 | 25 | 21 |
| ಬಿಜಾಪುರ | 1235 | 1098 | 6.4 | 28 | 58 | 20 | 22 |
| ಬಳ್ಳಾರಿ | 745 | 728 | 3 | 19 | 29 | 24 | 23 |
| ಬೆಂಗಳೂರು ಗ್ರಾಮಾಂತರ | 286 | 338 | 4.4 | 24 | 31 | 23 | 24 |
| ಕೊಡುಗು | 267 | 305 | 4.9 | 27 | 53 | 22 | 25 |
| ಬೆಂಗಳೂರು | 283 | 290 | 1 | 13 | 2 | 28 | 26 |
| ಬೀದರ್ | 160 | 149 | 4 | 23 | 9 | 27 | 27 |
| ಚಿತ್ರದುರ್ಗ | 305 | 375 | 4.8 | 26 | 19 | 26 | 28 |
| ಯಾದಗಿರಿ | 24 | 31 | 22.6 | 29 | 2 | 28 | 29 |
| ರಾಯಚೂರು | 22 | 4 | 25 | 30 | 1 | 30 | 30 |

Empowerment through livelihood

ಸಂಖ್ಯೆ: ಗ್ರಾಅಪ/50/ಎಸ್‌ಜಿವೈ 2013

# ಸುತ್ತೋಲೆ

ಮಿಷನ್ ಡೈರೆಕ್ಟರ್‌ರವರ ಕಚೇರಿ,
ಐ–145, 1ನೇ ಮಹಡಿ, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು, ದಿನಾಂಕ: 21–08–2013

**ವಿಷಯ:** **ಸಂಜೀವಿನಿ (ಎನ್‌ಆರ್‌ಎಲ್‌ಎಂ/ಆಜೀವಿಕ) ಯೋಜನೆಯಡಿ ರಾಜ್ಯದಲ್ಲಿನ ಎಲ್ಲಾ ಮಹಿಳಾ ಸ್ವಸಹಾಯ ಸಂಘಗಳಿಗೆ ಬಡ್ಡಿ–ಸಹಾಯಧನವನ್ನು ನೀಡಲು ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆ ಕುರಿತು.**

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು(ಎಸ್‌ಜಿಎಸ್‌ವೈ) ಪುನರ್ ರಚಿಸಿ ಕೇಂದ್ರ ಪುರಸ್ಕೃತ ಆಜೀವಿಕ–ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ (ಎನ್‌ಆರ್‌ಎಲ್‌ಎಂ) ಜಾರಿಗೊಳಿಸಿ, 2013–14ನೇ ಸಾಲಿನಿಂದ ಎಸ್‌ಜಿಎಸ್‌ವೈ ಯೋಜನೆ ಜಾರಿಯಲ್ಲಿ ಇರುವುದಿಲ್ಲವೆಂದು ತಿಳಿಸಿದೆ. ರಾಜ್ಯ ಸರ್ಕಾರವು ಆಜೀವಿಕ ಯೋಜನೆಯನ್ನು ರಾಜ್ಯದಲ್ಲಿ ಕರ್ನಾಟಕ ಸ್ಟೇಟ್ ರೂರಲ್ ಲೈವ್ಲಿಹುಡ್ ಪ್ರಮೋಷನ್ ಸೊಸೈಟಿ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಜಾರಿಗೊಳಿಸಲು ಅಧಿಸೂಚನೆ ಹೊರಡಿಸಿ ಸೊಸೈಟಿಯನ್ನು ನೋಂದಣಿ ಮಾಡಿಸಿದೆ. ರಾಜ್ಯ ಸರ್ಕಾರವು ಆಜೀವಿಕ ಯೋಜನೆಯನ್ನು "ಸಂಜೀವಿನಿ" ಎಂಬ ಹೆಸರಿನಲ್ಲಿ ಹಂತ ಹಂತವಾಗಿ ರಾಜ್ಯದಲ್ಲಿ ಜಾರಿಗೊಳಿಸುವುದು. ಈ ಯೋಜನೆಯನ್ನು ರಾಜ್ಯದಲ್ಲಿ 2013–14ನೇ ಸಾಲಿನಿಂದ ಜಾರಿಗೊಳಿಸಲಾಗಿದೆ.

ಕೇಂದ್ರ ಸರ್ಕಾರವು ಎನ್.ಆರ್.ಎಲ್.ಎಂ ಯೋಜನೆಯಡಿ ರಾಜ್ಯದಲ್ಲಿರುವ ಎಲ್ಲಾ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ರೂ.3 ಲಕ್ಷದವರೆಗಿನ ಸಾಲದ ಮೇಲೆ ಶೇ.7ರಷ್ಟು ಬಡ್ಡಿದರದಲ್ಲಿ ಸಾಲವನ್ನು ನೀಡಲು ಹಾಗೂ ರಾಜ್ಯದಲ್ಲಿನ ಆಯ್ದ 4 ಜಿಲ್ಲೆಗಳ ಮಹಿಳಾ ಸ್ವ–ಸಹಾಯ ಸಂಘಗಳು ಸಾಲವನ್ನು ನಿಯತವಾಗಿ ಮರುಪಾವತಿ ಮಾಡಿದ ಸಂಘಗಳಿಗೆ ಶೇ.4ರಷ್ಟು ಬಡ್ಡಿ ಸಹಾಯಧನವನ್ನು ನೀಡಲು ತೀರ್ಮಾನಿಸಿದೆ.

ರಾಜ್ಯ ಸರ್ಕಾರವು 2013–14ನೇ ಸಾಲಿಗೆ ಕೇಂದ್ರ ಸರ್ಕಾರ ಘೋಷಿಸಿರುವ ಶೇಕಡ 7ರ ಬಡ್ಡಿ ದರವಲ್ಲದೇ ರಾಜ್ಯದ ಉಳಿದ 26 ಜಿಲ್ಲೆಗಳಲ್ಲಿ ಸಾಲವನ್ನು ನಿಯತವಾಗಿ ಮರುಪಾವತಿ ಮಾಡುವ 1 ಲಕ್ಷದವರೆಗಿನ ಸ್ವ–ಸಹಾಯ ಸಂಘಗಳಿಗೆ ಶೇಕಡಾ 3ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನವನ್ನು ನೀಡಲು ಉದ್ದೇಶಿಸಿದೆ.

ಮೇಲ್ಕಂಡ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆ ಅತ್ಯವಶ್ಯಕವಾಗಿದೆ. ಆದಕಾರಣ ರಾಜ್ಯದ ಎಲ್ಲಾ ಸ್ವಸಹಾಯ ಗುಂಪುಗಳ ಮಾಹಿತಿಯನ್ನು ಈ ಕೆಳಕಂಡ ಮಾರ್ಗಸೂಚನೆಗಳನ್ವಯ ಸಂಗ್ರಹಿಸುವುದು.

## 1. ನಿಗದಿತ ನಮೂನೆಯಲ್ಲಿ ಮುದ್ರಣಕ್ಕಾಗಿ ದರ ನಿಗದಿ:–

ಮಹಿಳಾ ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆಗಾಗಿ ಅವಶ್ಯಕತೆಗನುಗುಣವಾಗಿ ನಿಗದಿತ ನಮೂನೆಯನ್ನು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಮುದ್ರಣ ಕಾರ್ಯ ಕೈಗೊಳ್ಳುವುದು, ಪ್ರತಿ ನಮೂನೆಗೆ ಗರಿಷ್ಠ (80 GSM Maplitho Paper-A4 size) ರೂ.2.50/– ರಂತೆ ಮುದ್ರಿಸಿಕೊಳ್ಳತಕ್ಕದ್ದು.

## 2. ಮಾಹಿತಿ ಸಂಗ್ರಹಣೆ:–

ಮಾಹಿತಿ ಸಂಗ್ರಹಣೆಯ ಸಂಪೂರ್ಣ ಜವಾಬ್ದಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಓ) ಯದಾಗಿದ್ದು, ಗ್ರಾಮಪಂಚಾಯತ್ ಕಾರ್ಯದರ್ಶಿ/ಬಿಲ್ ಕಲೆಕ್ಟರ್‌ಗಳ ಸಹಕಾರದೊಂದಿಗೆ ಗ್ರಾಮ ಪಂಚಾಯತ್ ನಲ್ಲಿರುವ ಎಲ್ಲಾ ಸ್ವ–ಸಹಾಯ ಗುಂಪುಗಳ ಮಾಹಿತಿಯನ್ನು ಸಂಪೂರ್ಣವಾಗಿ ಸಂಗ್ರಹಿಸತಕ್ಕದ್ದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಜಲಾನಯನ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಹಾಗೂ ಇತರೆ ಇಲಾಖೆಗಳು, ಬ್ಯಾಂಕ್, ನಬಾರ್ಡ್, ಎನ್‌ಜಿಓ, ಫೆಸಿಲಿಟೇಟರ್, ಸ್ವಸಹಾಯ ಗುಂಪುಗಳ ಒಕ್ಕೂಟ ಇತ್ಯಾದಿಗಳ ಮೂಲಕ ರಚಿಸಿರುವ ಸ್ವಸಹಾಯ

ಗುಂಪುಗಳ ಮಾಹಿತಿಯನ್ನು ಸಂಬಂಧ ಪಟ್ಟವರಿಂದಲೇ ನಿಗಧಿತ ನಮೂನೆಯಲ್ಲಿ ಪಡೆಯತಕ್ಕದ್ದು. ಉದಾ: ಸ್ತ್ರೀ ಶಕ್ತಿ ಗುಂಪುಗಳ ಮಾಹಿತಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತರಿಂದಲೇ ಪಡೆಯತಕ್ಕದ್ದು.

## 3. ಗೌರವ ಧನ

ಪ್ರತಿ ಮಹಿಳಾ ಸ್ವಸಹಾಯ ಗುಂಪಿನ ಮಾಹಿತಿ ಸಂಗ್ರಹಣೆಗಾಗಿ ರೂ.40/– ಗೌರವಧನವನ್ನು ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆ ಮಾಡುವವರಿಗೆ ಗೌರವಧನ ನೀಡತಕ್ಕದ್ದು.

## 4. ಮಾಹಿತಿ ಸಂಗ್ರಹಣೆಯ ಅಳವಡಿಕೆ

ಸಂಗ್ರಹಣೆ ಮಾಡಿದ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮಪಂಚಾಯತ್/ತಾಲ್ಲೂಕು ಪಂಚಾಯತ್ ಮಟ್ಟದಲ್ಲಿ ಅಳವಡಿಸುವುದು. ಪ್ರತಿ ಸ್ವಸಹಾಯ ಗುಂಪಿನ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಲು (ಡಾಟಾ ಎಂಟ್ರಿ) ರೂ.15/– ಗೌರವಧನವನ್ನಾಗಿ ನೀಡಲಾಗುವುದು.

## 5. ಮಾಹಿತಿ ಸಂಗ್ರಹಣೆಯ ಗುಣಮಟ್ಟ ಪರಿಶೀಲನೆ

ಮಹಿಳಾ ಸ್ವಸಹಾಯ ಗುಂಪುಗಳ ಮಾಹಿತಿಯ ಗುಣಮಟ್ಟವನ್ನು ಕಾಪಾಡಲು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಎರಡು ಹಂತಗಳಲ್ಲಿ ಅಂದರೆ ಮಾಹಿತಿ ಸಂಗ್ರಹಣೆ ಸಮಯದಲ್ಲಿ ಹಾಗೂ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸುವ ಸಮಯದಲ್ಲಿ ಈ ಕೆಳಗೆ ತಿಳಿಸಿರುವಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪರಿಶೀಲನ ಸಮಿತಿಗಳು ಮಾಹಿತಿಯ ಗುಣಮಟ್ಟವನ್ನು ಪರಿಶೀಲಿಸುವುದು.

ಮಾಹಿತಿಯ ಶೇ.10ರಷ್ಟು ಪರಿಶೀಲನೆಯನ್ನು ಗ್ರಾಮಪಂಚಾಯತ್ ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಇತರೆ ಸಹ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳ ಸಹಕಾರದೊಂದಿಗೆ ಅನುಷ್ಠಾನಗೊಳಿಸುವುದು.

ತಾಲ್ಲೂಕು ತಂಡದಿಂದ ಪರಿಶೀಲಿಸಿದ ಶೇ.50ರಷ್ಟು ಪರಿಶೀಲನೆಯನ್ನು ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರು(ಡಿಆರ್‌ಡಿಎ) ನೇತೃತ್ವದಲ್ಲಿ ಇತರೆ ಸಹ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳ ಸಹಕಾರದೊಂದಿಗೆ ಅನುಷ್ಠಾನಗೊಳಿಸುವುದು.

ಸಂಗ್ರಹಿಸಿದ ಮಾಹಿತಿಯನ್ನು ಗ್ರಾಮ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಈ ಕುರಿತು ಪ್ರತ್ಯೇಕ ಸುತ್ತೋಲೆ ನೀಡಲಾಗುವುದು.

ಸದರಿ ವಿಷಯವನ್ನು ಬಿಎಲ್‌ಬಿಸಿ, ಡಿಎಲ್‌ಬಿಸಿ ಸಭೆಗಳಲ್ಲಿ ಚರ್ಚಿಸತಕ್ಕದ್ದು.

**ಎಲ್ಲಾ ಮಹಿಳಾ ಸ್ವಸಹಾಯ ಗುಂಪುಗಳ ಮಾಹಿತಿ ಸಂಗ್ರಹಣೆಯನ್ನು ನಿಗಧಿತ ನಮೂನೆಯಲ್ಲಿ 15.09.2013ರೊಳಗೆ ಸಂಗ್ರಹಿಸಿ ತಂತ್ರಾಂಶದಲ್ಲಿ ಅಳವಡಿಸತಕ್ಕದ್ದು.**

## 6. ಮಾಹಿತಿ ಸಂರಕ್ಷಣೆ:–

ಸಂಗ್ರಹಿಸಿದ ಸ್ವಸಹಾಯ ಗುಂಪುಗಳ ಮಾಹಿತಿ ಸಂರಕ್ಷಣೆ ಆಯಾ ಗ್ರಾಮಪಂಚಾಯತ್‌ಗಳದ್ದಾಗಿರುತ್ತದೆ.

Hemalatha

[ಪಿ.ಹೇಮಲತಾ]

ಅಭಿಯಾನ ನಿರ್ದೇಶಕರು, ಸಂಜೀವಿನಿ– ಕೆಎಸ್‌ಆರ್‌ಎಲ್‌ಪಿಎಸ್

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜೀವ್ ಗಾಂಧಿ ಚೈತನ್ಯ ಯೋಜನೆ – 2013–14ನೇ ಸಾಲಿನಲ್ಲಿ ಎರಡು ಲಕ್ಷ ಗ್ರಾಮೀಣ ಯುವ ಜನರಿಗೆ ಸ್ವಉದ್ಯೋಗ / ವೃತ್ತಿಪರ ಕೌಶಲ್ಯ ಉದ್ಯೋಗ ಒದಗಿಸುವ ಬಗ್ಗೆ.

**ಓದಲಾಗಿದೆ :**(1) ಆಯವ್ಯಯ ಭಾಷಣದ ದಿನಾಂಕ: 12.07.2013.

2. ಸರ್ಕಾರದ ಆದೇಶದ ಸಮಸಂಖ್ಯೆ ದಿನಾಂಕ: 25.10.2013.

**ಪ್ರಸ್ತಾವನೆ:**

ಗ್ರಾಮೀಣ ಪ್ರದೇಶದಲ್ಲಿರುವ ಯುವಜನತೆಯ ಪ್ರಸ್ತುತ ಪರಿಸ್ಥಿತಿ ಗಮನಿಸಿದಾಗ ಅವರಲ್ಲಿ ಕೆಲವೇ ಮಂದಿ ವೃತ್ತಿಪರ ಶಿಕ್ಷಣ / ಕೌಶಲ್ಯ ತರಬೇತಿ ಪಡೆಯುತ್ತಿದ್ದಾರೆ. ಶಾಲಾ ಮತ್ತು ಕಾಲೇಜುಗಳನ್ನು ಅರ್ಧದಲ್ಲಿಯೇ ಬಿಡುತ್ತಿರುವ ಯುವಜನರ, ಅದರಲ್ಲೂ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಉದ್ಯೋಗ ಒದಗಿಸಬಲ್ಲ ಕೌಶಲ್ಯ ತರಬೇತಿಗಳ ಕೊರತೆ ಸಹ ಇದೆ. ಸ್ವಉದ್ಯೋಗಕ್ಕೆ ಕೈ ಹಾಕಿದರೆ ಸೋಲು / ನಷ್ಟ ಉಂಟಾಗಬಹುದೆಂಬ ಭಯದಿಂದ ಬಹಳ ಮಂದಿ ಹಾಗೆಯೇ ಉಳಿದಿರುತ್ತಾರೆ. ಗ್ರಾಮೀಣ ಪ್ರದೇಶದಲ್ಲಿನ ಯುವಜನತೆ, ಜೀವನೋಪಾಯ ಅರಸಿ ನಗರ ಪ್ರದೇಶಗಳತ್ತ ವಲಸೆ ಹೋಗುತ್ತಿರುವುದು ಹೆಚ್ಚಾಗುತ್ತಿದೆ. ಬರಪೀಡಿತ ಪ್ರದೇಶಗಳಲ್ಲಿನ ಪರಿಸ್ಥಿತಿ ಇನ್ನೂ ಶೋಚನೀಯವಾಗಿದೆ. ನಿರಂತರವಾಗಿ ಜೀವನೋಪಾಯ ಕಲ್ಪಿಸುವಲ್ಲಿ ಕೃಷಿವಲಯ ಅಸಮರ್ಥವಾಗಿದೆಯೆಂಬ ಕಾರಣಕ್ಕೆ ಗ್ರಾಮೀಣ ಪ್ರದೇಶದ ಯುವಕರಲ್ಲಿ ಕೃಷಿಯ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ನಿರುದ್ಯೋಗಿ ಯುವಜನರ ಕುಟುಂಬಗಳಲ್ಲಿ ಆರ್ಥಿಕ ಬಿಕ್ಕಟ್ಟು ತಪ್ಪಿಸಲು ಹಾಗೂ ಅನಾರೋಗ್ಯ ಮತ್ತು ಖಿನ್ನತೆಯಿಂದ ಹೊರಬಂದು ಆತ್ಮವಿಶ್ವಾಸಗಳಿಸಲು ಸಹಾಯ ಮಾಡಬೇಕಾಗಿದೆ. ಇದಕ್ಕಾಗಿ ಕೂಡಲೇ ಗ್ರಾಮೀಣ ಯುವಜನರ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. ಈ ಕಾರಣದಿಂದ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 12.07.2013ರ ಆಯವ್ಯಯ ಭಾಷಣದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 40 ಯುವಜನರಂತೆ 2 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವ ಸಲುವಾಗಿ ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು 2013–14ನೇ ಸಾಲಿನಿಂದ ಪ್ರಾರಂಭಿಸುವುದಾಗಿ ಘೋಷಿಸಿರುತ್ತಾರೆ. ಓದಲಾಗಿದೆ (2)ರಲ್ಲಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿತ್ತು. ಸಚಿವ ಸಂಪುಟದ ಒಪ್ಪಿಗೆ ಮೇರೆಗೆ ರಾಜ್ಯದಲ್ಲಿ "ರಾಜೀವ್ ಗಾಂಧಿ ಚೈತನ್ಯ ಯೋಜನೆ"ಯನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/107/ಎಸ್‌ಪಿಎಂ/2013, ಬೆಂಗಳೂರು, ದಿನಾಂಕ: 21.11.2013.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಜ್ಯ ಸರ್ಕಾರವು 2013–14ನೇ ಸಾಲಿಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಅನುಷ್ಠಾನದ ಮೂಲಕ 2 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನರ ಪೈಕಿ ಒಂದು ಲಕ್ಷ ಗ್ರಾಮೀಣ ಯುವಜನರಿಗೆ ಸ್ವಉದ್ಯೋಗ ಹಾಗೂ ಒಂದು ಲಕ್ಷ ಗ್ರಾಮೀಣ ಯುವಜನರಿಗೆ ವೃತ್ತಿ ತರಬೇತಿ ಮತ್ತು ಉದ್ಯೋಗವನ್ನು ಕಲ್ಪಿಸಲು ಮಂಜೂರಾತಿ ನೀಡಿದೆ. ಈ ಕಾರ್ಯಕ್ರಮವು ರಾಷ್ಟ್ರೀಯ ಗ್ರಾಮೀಣ ಸಂವರ್ಧನಾ ಅಭಿಯಾನದ ಭಾಗವಾಗಿರುತ್ತದೆ. ಯೋಜನಾ ಅನುಷ್ಠಾನಕ್ಕಾಗಿ ರೂ. 105 ಕೋಟಿ ಅನುದಾನವನ್ನು ಲೆಕ್ಕ ಶೀರ್ಷಿಕೆ 2501–00–101–0–05(2501–01–198–6–01) ಅಡಿ ಭರಿಸುವುದು.

ಈ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುವುದು. ಯೋಜನಾ ನಿರ್ದೇಶಕರು ಡಿ.ಆರ್.ಡಿ.ಎ ಅವರು ಈ ಯೋಜನೆಯ ನೋಡಲ್ ಅಧಿಕಾರಿಯಾಗಿರುತ್ತಾರೆ.

## ಫಲಾನುಭವಿಗಳ ಆಯ್ಕೆಯ ವಿಧಾನ:

- ಈ ಯೋಜನೆಯ ಬಗ್ಗೆ ವೃತ್ತ ಪತ್ರಿಕೆ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಪ್ರಚಾರ ನೀಡಿ ರಾಜ್ಯದಲ್ಲಿರುವ ಪ್ರತಿ ಗ್ರಾಮಪಂಚಾಯತಿಗೆ 40 ಯುವಜನರಂತೆ 2 ಲಕ್ಷ ನಿರುದ್ಯೋಗಿ ಯುವಜನರನ್ನು ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡುವುದು. ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಪಾಲಿಸುವುದು.
- ಜಿಲ್ಲಾ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಗ್ರಾಮಸಭೆ ನಡೆಸಲು ವ್ಯವಸ್ಥೆ ಮಾಡಿ, ಸ್ವಉದ್ಯೋಗ ಮತ್ತು ವೃತ್ತಿ ತರಬೇತಿಯೊಂದಿಗೆ ಉದ್ಯೋಗ ಮಾಡ ಬಯಸುವ ಯುವಜನರ ಆಯ್ಕೆ ಪ್ರಕ್ರಿಯೆಯ ಮುಂದಾಳತ್ವ ವಹಿಸುವರು.

### ಫಲಾನುಭವಿಗಳಿಗೆ ಮಾರ್ಗದರ್ಶನ ಶಿಬಿರ:

- ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಹಯೋಗದೊಂದಿಗೆ ಸ್ಯಾಟ್‌ಕಾಂ (ಉಪಗ್ರಹ ಆಧಾರಿತ) ಮೂಲಕ ಉದ್ಯೋಗ / ಸ್ವಉದ್ಯೋಗ ಕೈಗೊಳ್ಳ ಬಯಸುವ **ಫಲಾನುಭವಿಗಳಿಗೆ ಮಾರ್ಗದರ್ಶನ ಶಿಬಿರ** ಏರ್ಪಡಿಸುವುದು.
- ಈ ಶಿಬಿರದ ವ್ಯವಸ್ಥೆಯನ್ನು ಕಾರ್ಯನಿರ್ವಾಹಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತಿ ವಹಿಸುವುದು. ಈ ಮಾರ್ಗದರ್ಶನ ಶಿಬಿರದಲ್ಲಿ ಭಾಗವಹಿಸಿದ ಯುವಜನರು ಸ್ವಉದ್ಯೋಗ ಅಥವಾ ವೃತ್ತಿ ತರಬೇತಿಯೊಂದಿಗೆ ಉದ್ಯೋಗ ಈ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವರು.

## ಸ್ವಉದ್ಯೋಗ ಕಾರ್ಯಕ್ರಮ

### ಯೋಜನಾ ಬೆಂಬಲ ಸಂಸ್ಥೆಗಳ ಗುರುತಿಸುವಿಕೆ:

- ಈಗಾಗಲೇ ಸ್ವಉದ್ಯೋಗ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪರಿಣತಿ ಹೊಂದಿರುವ ಸರ್ಕಾರೇತರ ಸಂಸ್ಥೆಗಳನ್ನು (ಯೋಜನಾ ಬೆಂಬಲ ಸಂಸ್ಥೆ) ನಿಯಮಾನುಸಾರ ಗುರುತಿಸಲಾಗುವುದು.
- ಈ ಯೋಜನಾ ಬೆಂಬಲ ಸಂಸ್ಥೆಗಳು ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ (ಇಡಿಪಿ) ಹಾಗೂ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದ ವ್ಯವಸ್ಥೆಯನ್ನು ರೂಡ್‌ಸೆಟಿ / ಆರ್‌ಸೆಟಿ / ಸಿಡಾಕ್ / ಕೆವಿಕೆ ನಂತಹ ಇತರೆ ಸಂಸ್ಥೆಗಳ ಮೂಲಕ ಮಾಡುವುದು.

### ಬ್ಯಾಂಕ್ ಲಿಂಕೇಜ್:

ಯೋಜನೆಗಳ ಅನುಷ್ಠಾನಕ್ಕಾಗಿ ಹಣಕಾಸಿನ ನೆರವು ದೊರಕಿಸಿಕೊಡಲು, **ಯೋಜನಾ ಬೆಂಬಲ ಸಂಸ್ಥೆಗಳು ಬ್ಯಾಂಕು ಮತ್ತು ಉದ್ಯಮಶೀಲರ ನಡುವೆ ಸೌಹಾರ್ದ ಸಂಬಂಧ ಏರ್ಪಡಿಸುವುದು.**

## ಅನುಷ್ಠಾನ ಹಂತದಲ್ಲಿ ಅನುಸರಣೆ:

ಯೋಜನಾ ಬೆಂಬಲ ಸಂಸ್ಥೆಗಳು ಬ್ಯಾಂಕ್ ಲಿಂಕೇಜ್ ನಂತರ ಯೋಜನಾ ಅನುಷ್ಠಾನದ ವಿವಿಧ ಹಂತಗಳಲ್ಲಿ ಬೆಂಬಲ ಹಾಗೂ ಅನುಸರಣೆ ಮಾಡುವುದು.

### ವೃತ್ತಿ ತರಬೇತಿ ಮತ್ತು ಉದ್ಯೋಗ ಕಲ್ಪಿಸುವಿಕೆಯ ಕಾರ್ಯಕ್ರಮ

- **ಯೋಜನಾ ಅನುಷ್ಠಾನ ಸಂಸ್ಥೆಗಳ (ಪಿ.ಐ.ಎ.) ಆಯ್ಕೆ:** ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯು ಈಗಾಗಲೇ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಬೇಡಿಕೆ ಇರುವ ಕೌಶಲ್ಯಗಳಲ್ಲಿ ವೃತ್ತಿ ತರಬೇತಿ ನೀಡಿ, ಉದ್ಯೋಗ ಒದಗಿಸುತ್ತಿರುವ **ಯೋಜನಾ ಅನುಷ್ಠಾನ ಸಂಸ್ಥೆಗಳನ್ನು** (ಪಿ.ಐ.ಎ.) ನಿಯಮಾನುಸಾರ ಆಯ್ಕೆ ಮಾಡುವುದು.

- ಆಸಕ್ತ ಯುವಜನರಿಗೆ ಜಿಲ್ಲೆಯಲ್ಲಿನ ಯೋಜನಾ ಅನುಷ್ಠಾನ ಸಂಸ್ಥೆಯು (ಪಿ.ಐ.ಎ) ಕೌಶಲ್ಯ ತರಬೇತಿ ನೀಡಿ ಕೈಗಾರಿಕೆ ಅಥವಾ ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ ದೊರಕಿಸುವುದು.
- ತರಬೇತಿಯ ನಂತರ ಉದ್ಯೋಗ ಒದಗಿಸುವಲ್ಲಿ ಹಾಗೂ ಉದ್ಯೋಗ ಒದಗಿಸಿದ ನಂತರ ಅನುಸರಣೆ ಮಾಡುವ ಜವಾಬ್ದಾರಿ ಯೋಜನಾ ಅನುಷ್ಠಾನ ಸಂಸ್ಥೆಯದ್ದಾಗಿರುತ್ತದೆ.

ಒಂದು ಲಕ್ಷ ಫಲಾನುಭವಿಗಳ ಪೈಕಿ ಶೇ.70ರಷ್ಟನ್ನು ಅಂದರೆ 70,000 ಫಲಾನುಭವಿಗಳನ್ನು ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶದ ಯೋಜನೆಯಡಿ ಅವಕಾಶ ಕಲ್ಪಿಸಲಾಗುವುದು. ಉಳಿದ 30,000 ಫಲಾನುಭವಿಗಳನ್ನು ರಾಜ್ಯ ಸರ್ಕಾರದ ಯೋಜನೆಯಾದ ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಅವಕಾಶ ಕಲ್ಪಿಸಲಾಗುವುದು.

ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಈಗಾಗಲೇ ಇರುವ ಎನ್.ಆರ್.ಎಲ್.ಎಂ. ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಸಮಿತಿಯು ಯೋಜನೆ ಅನುಷ್ಠಾನದ ನೀತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾರ್ಗದರ್ಶನ ಮತ್ತು ಪ್ರಗತಿ ಪರಿಶೀಲನೆ ಮಾಡುವುದು.

ಜಿಲ್ಲಾ ಮಟ್ಟದಲ್ಲಿ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಕೆ.ಎಸ್.ಆರ್.ಎಲ್.ಪಿ.ಎಸ್. ಅನುಸರಣಾ ಸಮಿತಿಗಳು ಯೋಜನೆಗಳ ಅನುಷ್ಠಾನದ ಹಂತದಲ್ಲಿ ಎದುರಾಗಬಹುದಾದ ಅಡಚಣೆಗಳನ್ನು ನಿವಾರಿಸಲು ಸೂಕ್ತ ಕ್ರಮ ಜರುಗಿಸುವುದು ಅಥವಾ ಸಲಹೆಗಳನ್ನು ನೀಡುವುದು.

ಈ ಸಮಿತಿಗಳು ಪ್ರತಿ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸಿ ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ವರದಿಯನ್ನು ಅಭಿಯಾನ ನಿರ್ದೇಶಕರು, ಕೆಎಸ್ಆರ್ಎಲ್ಪಿಎಸ್, ಇವರಿಗೆ ಕಳುಹಿಸುವುದು.

**ಯೋಜನೆಯ ಅನುಷ್ಠಾನದ ವಿವರವಾದ ಕಾರ್ಯಚರಣೆಯ ಮಾರ್ಗಸೂಚಿಯನ್ನು (Operational Guidelines) ಪ್ರತ್ಯೇಕವಾಗಿ ನೀಡಲಾಗುವುದು.**

**ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಆಇ 334 ವೆಚ್ಚ-6/2013 ದಿನಾಂಕ: 12.11.2013ರಂತೆ ಹೊರಡಿಸಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ

Hemalatha

**(ಪಿ.ಹೇಮಲತ)**

ನಿರ್ದೇಶಕರು (ಸ್ವಉಕಾ)

ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

# ಸಂಜೀವಿನಿ

## ಗ್ರಾಮೀಣ ಕೃಷಿಕ ಮಹಿಳೆಯರ ಸಶಕ್ತೀಕರಣಕ್ಕಾಗಿ









**KARNATAKA VIKAS : December 2013**

A Monthly Magazine for Rural Development and Panchayat Raj Department, Government of Karnataka
Regd No. KA/ BGGPO/2531/2012-14, Licence to Post "without Prepayment" WPP-32
RNI No. : 28103/1974 Total No. of Pages 52, Posted at Bangalore GPO on 9th, 10th, 11th of Every Month

# ಜೀವನಾಧಾರದಿಂದ ಸಬಲೀಕರಣ

Published & Owned by :
**Director ( Panchayat Raj)**
Rural Development and
Panchayat Raj Department

Name of the Editor
**Y. Mahankalappa**

Place & Publications
**Karnataka Vikas**
No. 309, 3rd Floor, Gate No.1,
M.S. Building, Dr. Ambekar Veedhi,
Bangalore - 560 001.

Printed by
The Director,
**Government Press**
Bangalore, Karnataka.

Price : Rs. 5.00
ಬೆಲೆ : ರೂ. 5.00